ಕರ್ಮವೀರ

ಜನಪ್ರಿಯ ಸಚಿತ್ರ ವಾರಪತ್ರಿಕೆ - ಹುಬ್ಬಳ್ಳಿ.

೨೫ - ೭ - ೪೯

★

ಬೆಲೆ ಎರಡಾಣೆ



ಭಾರತದ ಹೊಸ ಅಂಚೆಟಿಕೀಟುಗಳು

Karmaveer KANNADA ILLUSTRATED WEEKLY HUBLI

ಮುಖಪತ್ರದಲ್ಲಿ

ಸ್ವಾತಂತ್ರ್ಯದಿನ—ಆಗಸ್ಟ ೧೫, ೧೯೪೯—ಪ್ರಚಾರಕ್ಕೆ ಬರಲಿರುವ ಹೊಸ ಅಂಚೆ ತಿಕೀಟು ಗಳು ಭಾರತೀಯ ಪ್ರಾಚ್ಯಶಿಲ್ಪಕಲೆಯ ರಕ್ಷ ಗಳ ಒಂದು ಮಾಲೆ. ಈ ಮೊದಲೇ ಇವು ಪ್ರಚಾರಕ್ಕೆ ಬರಬೇಕಾಗಿದ್ದು ಎಲ್ಲ ಏರ್ಪಾಡು ಗಳಾಗಿದ್ದರೂ ಕೆಲ ಕಾರಣಗಳಿಂದ ಕೆಲ ಟಿಕೀಟುಗಳನ್ನು ಬದಲಾಯಿಸಬೇಕಾಗಿ ಬಂದುದರಿಂದ ಇದನ್ನು ತಡೆಹಿಡಿಯಲಾಗಿತ್ತು.

ಒಂಭತ್ತು ಪೈಸೆ, ಎರಡುಪೈಸೆ, ಮೂರು ಪೈಸೆ, ಒಂದಾಣೆ, ಎರಡಾಣೆ, ಮೂರಾಣೆಗಳ ಟಿಕೀಟುಗಳ ಮೇಲಿನ ಅಜಂತ, ಕೊನರಾಕ ಕುದುರೆ, ಎಲಿಫಂಟದ ತ್ರಿಮೂರ್ತಿ, ಬೋಧಿ ಸತ್ವ, ನಟರಾಜ ಮತ್ತು ಸಾಂಚಿಸ್ತೂಪದ ಚಿತ್ರಗಳು—ನಮ್ಮ ಶಿಲ್ಪಕಲೆಯ ಅತಿ ಪ್ರಾಚೀನ ಮಾದರಿಗಳು, ಮೂರುವರೆ ಆಣೆ, ೪ ಆಣೆ, ೮ ಆಣೆಗಳ ಮೇಲಿನ ಬುದ್ಧಗಯೆ, ಭುವ ನೇಶ್ವರ, ಕಂದಾರಿಯ ಮಹಾದೇವ ದೇವ ಸ್ಥಾನಗಳಲ್ಲಿ ಪ್ರಾಚೀನ ವಾಸ್ತುಶಿಲ್ಪದ ಕುಸುರು ಕೆಲಸದ ಭವ್ಯತೆಯನ್ನು ಕಾಣು ತ್ತೇವೆ. ೬ ಆ, ಮತ್ತು ೧೨ ಆಣೆಗೆ ಮೇಲ್ಪಟ್ಟ ತಿಕೀಟುಗಳ ಮೇಲಿನ ವಿಜಾಪುರದ ಗೋಲು ಗುಮ್ಮಟ, ಅಮೃತಸರದ ಸುವರ್ಣಮಂದಿರ, ಚಿತೋಡದ ವಿಜಯಸ್ತಂಭ, ಪಲಿಟನದ ಶತ್ರುಂ ಜಯ ದೇವಸ್ಥಾನ, ಕುತುಬ ಮಿನಾರ, ಕೆಂಪು ಕೋಟೆ ಹಾಗು ಜಗತ್ಪ್ರಸಿದ್ಧ ತಾಜಮಹಾಲು ಗಳು ೧೦ ನೆ ಶತಕದ ನಂತರದ ಕೃತಿಗಳು.

ಕರ್ಮವೀರ

ಪ್ರತಿ ಸೋಮವಾರ ಹುಬ್ಬಳ್ಳಿಯಿಂದ ಹೊರಡುವ ವಾರಪತ್ರಿಕೆ

ಸಂಸ್ಥಾಪಕರು :
ಶ್ರೀ. ರಂ. ರಾ. ದಿವಾಕರ

ಸಂಪಾದಕರು :
ಶ್ರೀ. ಹ. ರಾ. ಪುರೋಹಿತ

ಹೊಸ ವರ್ಗಣಿ ವಿವರಗಳು :

೧ ವರ್ಷಕ್ಕೆ	ರೂ. ೬—೧೨—೦
೬ ತಿಂಗಳಿಗೆ	ರೂ. ೩—೮—೦
೩ ,,	ರೂ. ೨—೦—೦

ಬಿಡಿಸಂಚಿಕೆ : ೨ ಆಣೆ

ವ್ಹಿ. ಪಿ. ದ್ವಾರಾ ಕಳಿಸಿದರೆ ೦—೬—೦ ಹೆಚ್ಚು ಬೀಳುವದು.

ಸೂಚನೆ : ಈ ವರೆಗೆ ವರ್ಷಕ್ಕೆ ೪ ವಾರ ರಜೆ ತೆಗೆದುಕೊಳ್ಳುವ ಪರಿಪಾಠವಿತ್ತು. ಓದುಗರಿಗೆ ಇದರಿಂದ ತೊಂದರೆಯಾಗುವದನ್ನರಿತು ಇನ್ನು ಮುಂದೆ ರಜೆಗಳನ್ನು ರದ್ದುಗೊಳಿಸಿ ವರ್ಷದಲ್ಲಿ ೫೨ ಸಂಚಿಕೆಗಳನ್ನು ತೆಗೆಯಲಾಗುವದು. ವಿಶೇಷ ಸಂಚಿಕೆಗಳನ್ನು ಹೊರಡಿಸಿದರೆ ಅದರ ಬಗ್ಗೆ ಪ್ರತ್ಯೇಕ ಬೆಲೆಯನ್ನು ಕೊಡಬೇಕಾಗುವದು.

ಚಂದಾದಾರರು : ತಮ್ಮ ವರ್ಗಣಿ, ಸಂಚಿಕೆ ಗಳ ತಲುಪುವಿಕೆಯ ಸಂಬಂಧದ ದೂರು ಮೊದಲಾದವುಗಳ ಬಗ್ಗೆ ಪತ್ರವ್ಯವಹಾರವನ್ನು ಮಾಡುವಾಗ ವಿಳಾಸದ ಚೀಟಿಯ ಮೇಲಿರುವ ಚಂದಾ ನಂಬರುಗಳನ್ನು ಉಲ್ಲೇಖಿಸಬೇಕು. ಇಲ್ಲದಿದ್ದರೆ ಸಾವಿರಗಟ್ಟಳೆ ಚಂದಾದಾರರಲ್ಲಿ ನಿಮ್ಮ ಹೆಸರನ್ನು ಕಂಡು ಹಿಡಿಯುವದು ಸಾಧ್ಯವಾಗದು.

ಲೇಖಕರು: "ಕರ್ಮವೀರ" ದಲ್ಲಿ ಪ್ರಕ ಟನೆಗಾಗಿ ಕಳಿಸುವ ಲೇಖ, ಕತೆ, ಕವಿತೆ ಮೊದ ಲಾದವುಗಳು ಅಸ್ವೀಕೃತವಾದಲ್ಲಿ ತಿರುಗಿ ಪಡೆ ಯಲಪೇಕ್ಷಿಸುತಿದ್ದರೆ ಲೇಖದ ಸಂಗಡಲೇ ಅವ ಶ್ಯವಿದ್ದಷ್ಟು ಅಂಚೆ ತಿಕೀಟುಗಳನ್ನು ಕಳಿಸಿರ ಬೇಕು. ಹಾಗೆ ಮಾಡದೆ ಮುಂದೆ ಆ ಲೇಖಗಳ ಬಗ್ಗೆ ಪತ್ರವ್ಯವಹಾರ ಮಾಡಿದರೆ ಅಥವಾ ತಿರುಗಿ ಕಳಿಸಬೇಕೆಂದರೆ ಅದು ಸಾಧ್ಯವಾಗದು. ಸ್ವೀಕೃತವಾದ ಕತೆಗಳಿಗೂ ಪೂರ್ಣಾಕಾರದ, ಅಂದರೆ "ಕರ್ಮವೀರ" ದ ಎರಡು ಕಾಲಂ ಮೀರಿದ ಲೇಖಗಳಿಗೂ ನಿರ್ದಿಷ್ಟ ಪ್ರತಿಫಲ ಕೊಡಲಾಗುವದು.

— **ವ್ಯವಸ್ಥಾಪಕ,**
"ಕರ್ಮವೀರ" ಹುಬ್ಬಳ್ಳಿ.

ಸಂಪುಟ ೨೧ | **ಕರ್ಮವೀರ** | ಸೋಮವಾರ
ಸಂಚಿಕೆ ೧೫ | | ಆಷಾಢ ಬ ೩೦

ತಾರೀಕು ೨೫—೭—೧೯೪೯

ಕಾಂಗ್ರೆಸ್ಸಿನ ಶುದ್ಧೀಕರಣ

ಸದ್ಯದ ಪರಿಸ್ಥಿತಿಯಲ್ಲಿ ಹಿಂದುಸ್ಥಾನ ದಲ್ಲಿಯ ವಿವಿಧ ಪಕ್ಷಸಂಗಡಗಳ ಕರ್ತ ವ್ಯವೇನೆಂಬುದನ್ನು ನಾವು ಕಳೆದ ವಾರ ವಿವೇ ಚಿಸಿದ್ದೇವೆ. ಅಧಿಕಾರ ವಹಿಸಿಕೊಂಡ ಕಾಂಗ್ರೆಸ ಸರಕಾರಕ್ಕೆ ಎಲ್ಲ ಬಗೆಯಿಂದ ಸಹಾಯ ಮಾಡಿ ಆಡಳಿತೆಯು ಸರಾಗವಾಗಿ ಸಾಗಿ ಹಿಂದುಸ್ಥಾನವು ಸರ್ವತೋಮುಖ ಅಭಿವೃದ್ಧಿ ಹೊಂದುವಂತೆ ಪ್ರಯತ್ನಿಸುವದು ಆಯಾ ಪಕ್ಷಗಳ ಕರ್ತವ್ಯವಾಗಿದೆಯೆಂಬು ದನ್ನೂ ತೋರಿಸಿಕೊಟ್ಟಿರುವೆವು. ಆದರೆ ಈ ಯೆಲ್ಲ ಪಕ್ಷಸಂಗಡಗಳ ಸಹಾಯ ಸಹಕಾರ ಸಿಕ್ಕಬೇಕಾದರೆ ಕಾಂಗ್ರೆಸ ಪಕ್ಷವೂ ನಿರ್ದುಷ್ಟ ವಾಗಿ ಅದರಲ್ಲಿಯ ಕೊಳೆ ಹೋಗುವದು ಅತ್ಯ ವಶ್ಯವಾಗಿದೆ. ಕಾಂಗ್ರೆಸ್ಸಿಗರಲ್ಲಿಯ ಅಧಿಕಾರ ಲಾಲಸೆ, ಸ್ವಾರ್ಥ, ಒಳ ಪಕ್ಷಸಂಗಡಗಳ ತಿಕ್ಕಾಟ ಮೊದಲಾದವುಗಳ ಮೂಲಕ ಜನತೆಯ ಮೇಲೆ ಮೊದಲಿದ್ದ ಕಾಂಗ್ರೆಸ್ಸಿನ ವರ್ಚಸ್ಸು ಕಡಮೆಯಾಗಹತ್ತಿದೆ. ಆಯಾ ಪ್ರಾಂತಗಳಿಂದ ಬಂದ ವರದಿಗಳನ್ನು ನೋಡಿ ದರೆ ಸ್ವಾತಂತ್ರ್ಯಕ್ಕಾಗಿ ಪ್ರಾಣಪಣವಾಗಿ ಹೋರಾಡಿದ ಕಾಂಗ್ರೆಸ್ಸಿಗರಲ್ಲಿ ಇಷ್ಟು ಬೇಗ ಇಷ್ಟೊಂದು ಸ್ವಾರ್ಥ, ಅಧಿಕಾರ ಲಾಲಸೆ ಹೇಗೆ ಮನೆ ಮಾಡಿದವೆಂಬುದರ ಅರ್ಥವೇ ಹೊಳೆಯದು.! ಇತ್ತೀಚೆ ಕಾಂಗ್ರೆಸ್ಸಿನಲ್ಲಿ ಸೇರಿದ ಬಹುಸಂಖ್ಯರು ಕೇವಲ ಅಧಿಕಾರ ಲಾಲಸೆಗಾಗಿಯೆ ಸೇರಿದರೊ ಎಂಬ ಅನು ಮಾನವೂ ಹೊರಡುತ್ತದೆ. ಅದೇನೇ ಇದ್ದರೂ ಕಾಂಗ್ರೆಸ್ಸಿನಲ್ಲಿಯ ಕೊಳೆಯನ್ನು ಹೋಗ ಲಾಡಿಸಿ ಅದನ್ನು ನಿರ್ದುಷ್ಟ, ವಿಶುದ್ಧ ಸಂಸ್ಥೆ ಯನ್ನಾಗಿ ಮತ್ತೆ ಮಾರ್ಪಡಿಸುವದು ಕ್ರಮ ಪ್ರಾಪ್ತವಾಗಿದೆ.

ಕಾಂಗ್ರೆಸ್ ಧುರೀಣರಿಗೆ ಕಾಂಗ್ರೆಸಿ ನಲ್ಲಿಯ ಈ ಕೊಳೆಯ ದುಷ್ಪರಿಣಾಮಗಳು ತಿಳಿದಿಲ್ಲೆಂದಲ್ಲ. ಇತ್ತೀಚಿನ ಕೆಲವು ಉಪ ಚುನಾವಣೆಗಳಲ್ಲಿ ಕಾಂಗ್ರೆಸ್ಸಿಗೆ ದೊರೆತ ಅಪ ಯಶಸ್ಸೂ ಕಾಂಗ್ರೆಸ್ಸಿಗರಲ್ಲಿಯ ಒಡಕಿನ ದ್ಯೋತಕವಾಗಿದೆಯೆಂದು ಹೇಳಿದರೆ ತಪ್ಪಾ ಗದು. ಈ ಒಡಕಿನ ಪರಿಣಾಮವಾಗಿ ಮತ್ತು ಕಾಂಗ್ರೆಸ್ಸಿಗರಲ್ಲಿಯ ಸ್ವಾರ್ಥಾಂಧತೆಗಾಗಿ ಜನತೆಯ ಮೇಲಿದ್ದ ಕಾಂಗ್ರೆಸ್ಸಿನ ಪ್ರಭಾ ವವೂ ಕಡಮೆಯಾಗಹತ್ತಿದೆ. ರಾಷ್ಟ್ರದ ಏಕಮೇವ ಪ್ರಾತಿನಿಧಿಕ ಸಂಸ್ಥೆಯೆಂದು ಮೆರೆದ ಕಾಂಗ್ರೆಸ್ಸು ಇಂತು ಜನತಾ ಪ್ರೇಮಕ್ಕೆ, ಆದರಕ್ಕೆ, ಎರವಾಗಬೇಕಾದರೆ ಅದೆಂತಹ ದುರ್ದೈವದ, ಲಾಂಛನಾಸ್ಪದ ವಾದ ಸಂಗತಿಯು !! ಬಂಗಾಲ ಮದರಾಸ ಮತ್ತು ಪಂಜಾಬಗಳಲ್ಲಿಯ ಕಾಂಗ್ರೆಸ್ಸಿಗ ರಲ್ಲಿಯ ಒಡಕು, ಸ್ವಾರ್ಥ, ಒಳ ಪಂಗಡಗಳ ಕಟ್ಟುವಿಕೆ ಮೊದಲಾದವುಗಳು ಕಾಂಗ್ರೆಸ್ಸಿನ ಧವಲ ಕೀರ್ತಿಗೆ ಕಲಂಕಪ್ರಾಯ ವಾಗಿವೆ. ಸಂಯುಕ್ತ ಪ್ರಾಂತದಲ್ಲಿ ಇತ್ತೀ ಚೆಗೆ ಕಟ್ಟಲ್ಪಟ್ಟಿದ್ದ ಶಾಸನ ಸಭಾಸದಸ್ಯರ ಒಳಪಂಗಡವೂ ವಿಘಾತಕವಾಗಿದ್ದಿತು. ಆದರೆ ಪಂಡಿತ ಜವಾಹರಲಾಲರ ಪ್ರಯ ತ್ನದ ಫಲವಾಗಿ ಅದು ಮೂಲದಲ್ಲಿಯೇ ಸಮಾಧಿಹೊಂದಿದ್ದು ಸಂತೋಷದ ಸಂಗತಿ. ಕಾಂಗ್ರೆಸ ವರಿಷ್ಠರಾದ ಪಂಡಿತ ಜವಾಹರ ಲಾಲರು, ಸರದಾರ ವಲ್ಲಭಭಾಯಿ ಪಟೇ ಲರು ಮತ್ತು ಇನ್ನುಳಿದವರು ಕಾಂಗ್ರೆಸ್ಸಿ ನಲ್ಲಿಯ ಈ ಹೊಲಸನ್ನು ಹೋಗಲಾಡಿಸಲು ಬದ್ಧಕಂಕಣರಾಗಿದ್ದಾರೆ.

ದಿಲ್ಲಿಯಲ್ಲಿ ಕೂಡಿದ್ದ ಕಾಂಗ್ರೆಸ ಕಾರ್ಯ ಸಮಿತಿಯ ಮೊನ್ನಿನ ಸಭೆಯಲ್ಲಿ ಕಾಂಗ್ರೆಸ್ಸಿನ ಶುದ್ಧೀಕರಣದ ಬಗ್ಗೆ ಚರ್ಚೆ ನಡೆಯಿತೆಂದು ತಿಳಿಯುತ್ತದೆ. ವಿಶೇಷತಃ ಮದರಾಸ ಮತ್ತು ಪಶ್ಚಿಮ ಬಂಗಾಲದಲ್ಲಿಯ ಕಾಂಗ್ರೆ ಸ್ಸಿಗರಲ್ಲಿಯ ಒಳ ತಿಕ್ಕಾಟದ ಬಗ್ಗೆ ವಿಚಾರ ವಿನಿಮಯ ನಡೆಯಿತೆಂದು ತಿಳಿಯುತ್ತದೆ. ಆಯಾ ಪ್ರಾಂತಗಳ ಮುಖ್ಯ ಮಂತ್ರಿಗಳ ಹೇಳಿಕೆಗಳನ್ನು ಕೇಳಿಕೊಂಡು ಅನಂತರ ನಿರ್ಣಯ ಕೈಕೊಳ್ಳಬೇಕೆಂದು ಮುಂತಾಗಿ ಗೊತ್ತಾಗಿ ಸಭೆಯನ್ನು ಮುಂಬರಿಸ ಲಾಯಿತು. ಕಾಂಗ್ರೆಸ ಸರಕಾರ ಮತ್ತು ಕಾಂಗ್ರೆಸ ಸಮಿತಿಗಳಲ್ಲಿಯ ಸಂಬಂ ಧದ ಬಗ್ಗೆಯೂ ಚರ್ಚೆಯಾಯಿತೆಂದು ತಿಳಿಯುತ್ತದೆ. ಕಾಂಗ್ರೆಸ ಸಮಿ ತಿಯ ಪ್ರಮುಖ ಕಾರ್ಯಕರ್ತರು ಸರಕಾರೀ ಅಧಿಕಾರಿಗಳ ದೈನಂದಿನ ಕಾರ್ಯಕಲಾಪಗಳಿಗೆ ಅಡ್ಡಿಯುಂಟಾಗುವ ರೀತಿಯಲ್ಲಿ ವರ್ತಿಸುತಿರುವರೆಂದು ಆರೋಪಿಸ ಲಾಗುತ್ತದೆ. ಹಳ್ಳಿಗರ ಮೇಲೆ ಮತ್ತು ಕೆಳಗಿನ ಅಧಿಕಾರಿಗಳ ಮೇಲೆ ವಿಶೇಷ ವರ್ಚಸ್ಸು ಕೂಡಿಸಲು ಅವರು ಹೀಗ ಮಾಡುತಿರುವರೆಂದು ಹೇಳಲಾಗುತ್ತದೆ. ಕೆಲ ಕಾಂಗ್ರೆಸ ಸಮಿತಿಗಳು ಇದಕ್ಕೂ ಮುಂದೆ ಹೋಗಿ ಕಾಂಗ್ರೆಸ ಮಂತ್ರಿಮಂಡಲ ಗಳ ಮೇಲೆಯೇ ಅವಿಶ್ವಾಸದ ಗೊತ್ತುವಳಿ ಗಳನ್ನು ಸೂಚಿಸುವ ಸಾಹಸ ಮಾಡಿದ್ದುಂಟು. ಕಾಂಗ್ರೆಸ ಕಾರ್ಯ ಸಮಿತಿಯವರು ಕಾಂಗ್ರೆಸ ಸಮಿತಿಗಳಲ್ಲಿಯ ಈ ಮನೋ ವೃತ್ತಿಯನ್ನು ಕಂಡುಹಿಡಿದು ಸಕಾಲದಲ್ಲಿಯೇ ಅದಕ್ಕೆ ಅರೆದಾಳ ಹಾಕಬೇಕೆಂದು ಬಗೆದು ಆ ಸಂಬಂಧದಲ್ಲಿ ಒಂದು ಗೊತ್ತುವಳಿಯನ್ನು ಸ್ವೀಕರಿಸಿದರು. ಪ್ರಾಂತೀಯ ಕಾಂಗ್ರೆಸ ಸಮಿತಿಗಳು ಕಾಂಗ್ರೆಸ ಮಂತ್ರಿಮಂಡಳಗಳ ವಿರುದ್ಧ ಅವಿಶ್ವಾಸದ ಗೊತ್ತುವಳಿಗಳನ್ನು ಪಾಸುಮಾಡತಕ್ಕದ್ದಲ್ಲ ಎಂದು ಆಯಾ ಕಾಂಗ್ರೆಸ ಸಮಿತಿಗಳಿಗೆ ತಿಳಿಸಲಾಗಿದೆ ಯಲ್ಲದೆ ಏನಾದರೂ ದೂರುಗಳಿದ್ದರೆ ಅಬಗ್ಗೆ ಕೇಂದ್ರ ಪಾರ್ಲಮೆಂಟರಿ ಬೋರ್ಡಿಗಾಗಲಿ ಕಾಂಗ್ರೆಸ ಕಾರ್ಯಸಮಿತಿಗಾಗಲಿ ತಿಳಿಸ ಬೇಕೆಂದು ನಿರ್ದೇಶಿಸಲಾಗಿದೆ. ಕಾಂಗ್ರೆಸ ಸಂಘಟನೆಯ ದೃಷ್ಟಿಯಿಂದ ಮತ್ತು ಅಧಿ ಕಾರ ನಡೆಸುತ್ತಿರುವ ಕಾಂಗ್ರೆಸ ಸರಕಾರ ಗಳ ಆಡಳಿತೆಯ ಬಿಗುವಿನ ದೃಷ್ಟಿಯಿಂದ ಹೀಗೆ ಮಾಡಿದ್ದು ಯೋಗ್ಯವಾಯಿತೆಂದು ಹೇಳಬಯಸುತ್ತೇವೆ. ಕಾರ್ಯಸಮಿತಿಯ ಅಧ್ಯಕ್ಷತೆ ವಹಿಸಿದ್ದ ಸರದಾರ ವಲ್ಲಭಭಾಯಿ ಯವರು ರಾಜಸ್ಥಾನದ ಕಾಂಗ್ರೆಸ್ಸಿಗರಲ್ಲಿಯ ಈ ಮನೋವೃತ್ತಿಯನ್ನು ಉಲ್ಲೇಖಿಸಿ ಅದನ್ನು ಬಹಳ ಮಟ್ಟಿಗೆ ತೆಗಳಿದರು. ಕಾಂಗ್ರೆಸ್ ಧುರೀಣರೆನ್ನುವವರಲ್ಲಿಯೂ ಕೆಲ ವರು ಕಾಂಗ್ರೆಸ ಸಂಸ್ಥೆಯಲ್ಲಿ ಒಡಕಿನ ಬೀಜ ವನ್ನು ಬಿತ್ತುತಿರುವರೆಂದು ಸರದಾರ ಪಟೇ ಲರು ಕಾಂಗ್ರೆಸ ಕಾರ್ಯಸಮಿತಿಯ ಸಭೆಯಲ್ಲಿ ಬಹಿರಂಗ ಪಡಿಸಿದರೆಂದು ವಿಶ್ವಸನೀಯವಾಗಿ ತಿಳಿಯುತ್ತದೆ. ಯುಕ್ತ ಪ್ರಾಂತ ಕಾಂಗ್ರೆಸ ಶಾಸನ ಸಭಾ ಸದಸ್ಯರಲ್ಲಿ ಉಂಟಾದ ಹೊಸ ಗುಂಪನ್ನು ಮತ್ತು ರಾಜಸ್ಥಾನ ಪ್ರಾಂತೀಯ ಕಾಂಗ್ರೆಸ ಸಮಿತಿಯವರು ಹಿರಾಲಾಲ ಶಾಸ್ತ್ರಿಯವರ ಮಂತ್ರಿಮಂಡಲದ ಮೇಲೆ ನಿಂದಾವ್ಯಂಜಕ ಠರಾವನ್ನು ತರಲೆತ್ನಿಸಿ ದ್ದನ್ನು ಸರದಾರರು ಕಟುವಾಗಿ ಟೀಕಿಸಿದ್ದ ಲ್ಲದೆ 'ಇಂತಹ ಮನೆಮುರುಕತನಕ್ಕೆ ಎಡೆ ಗೊಡುವದಕ್ಕಿಂತ ಕಾಂಗ್ರೆಸ್ಸನ್ನು ಕೊನೆಗಾ ಣಿಸಿ ಬಿಡುವದೇ ಲೇಸು' ಎಂದೂ ಹೇಳಿದ ರಂತೆ. ಕಾಂಗ್ರೆಸ್ಸನ್ನು ಇಂತು ಒಳಪಂಗಡ ಗಳಿಗೆ ಆಹುತಿಮಾಡಿ ಅದನ್ನು ಛಿನ್ನ ವಿಚ್ಛಿನ್ನ ಮಾಡುವದಕ್ಕಿಂತ ವಿಸರ್ಜಿಸಿ ಬಿಡುವದೇ ಲೇಸೆಂದು ಪಂಡಿತ ಜವಾಹರಲಾಲರೂ ಅಭಿಪ್ರಾಯ ಪಟ್ಟದ್ದುಂಟು. ಕಾಂಗ್ರೆಸ್ಸಿಗಾಗಿ ತಮ್ಮ ಪ್ರಾಣವನ್ನೇ ಪಣವಾಗಿಟ್ಟುಕೊಂಡು [illegible]

[illegible] ಧುರೀಣರು [illegible]
[illegible] ಕಾಂಗ್ರೆಸ್ಸಿಗರು [illegible]
[illegible] ಸಂಪಾದಿಸಿದ ಸ್ವಾತಂತ್ರ್ಯದ [illegible] ಎರವಾಗುವ ಪ್ರಸಂಗಕ್ಕೆ ಅವರೇ ಕಾರಣ [illegible] ದಂತಾಗುವದೆಂಬಲ್ಲಿ ಸಂದೇಹವಿಲ್ಲ.

× × ×

[illegible] ಪರಿಣಾಮವಾಗಿ [illegible] ಶ್ರೀ [illegible] ವೆಂಕಟರಾಮ ಶಾಸ್ತ್ರಿ ಮೊದಲಾದವರ [illegible] ಮೇಲಿನ ನಿರ್ಬಂಧವನ್ನು ತೆಗೆದು [illegible] ಲಾಗಿದೆ. [illegible] ರಚಿತವಾಗಿರುವ ಅದರ ಘಟನೆಯಂತೆ [illegible] ಉಳಿಯದು. ವೆಂಕಟರಾಮ ಶಾಸ್ತ್ರಿಗಳು [illegible] ಬಗೆಯಾಗಿ ಅರಿತಿರುವರು. [illegible] ಮಾಡುವದು ಶ್ರೀ ಗೋಳವಲಕರರನ್ನು [illegible] ಬಲವಾಗಿ [illegible] ನಾವು ಭಾವಿಸುತ್ತೇವೆ. ರಾಷ್ಟ್ರೀಯ ಸ್ವಯಂ ಸೇವಕ ಸಂಘದಲ್ಲಿ [illegible] ರಿಂದ ಅವರನ್ನು [illegible] ಕೊಳ್ಳುವದು ಶ್ರೀ ಗೋಳವಲಕರರ [illegible] ಕರ್ತವ್ಯವಾಗಿದೆ. [illegible] ಅವರು ಮರೆತು ನಡೆಯುವಂತಿಲ್ಲ. [illegible] ತೀವಳಿಗೆ ಹಿಂದೆ [illegible] ಗಳಿದ್ದರೂ ಇನ್ನು ಮುಂದೆಯಾದರು [illegible] ಅಂಥ ಕಾರಣಗಳಿಗೆ ಅವಕಾಶ [illegible] ಯದಂತೆ ನೋಡಿಕೊಳ್ಳಬೇಕಾದುದು [illegible] ಕರ್ತವ್ಯವಾಗಿದೆ.

× × ×

ಬಾಬೂ ಶರಚ್ಚಂದ್ರ ಬೋಸರು [illegible] ಕೈಕೊಂಡ ಕಾಂಗ್ರೆಸ ವಿರೋಧೀ ಧೋರಣ [illegible] ಅವರ ಘನತೆಗೆ ಒಪ್ಪುವಂತಹದಾಗಿಲ್ಲ. [illegible] [illegible] ಎಂದೂ ಮರೆಯದು. [illegible] [illegible] ಕಾಂಗ್ರೆಸ ಪಕ್ಷದ ಧುರೀಣರಾಗಿದ್ದರು [illegible] [illegible] ಧುರ್ದೈವದ ಸಂಗತಿಯು. [illegible] ಬಂಗಾಲದಲ್ಲಿ [illegible] ದಿನದಿನಕ್ಕೆ [illegible] [illegible] ರಿಸುವರೆಂದು ಆಶಿಸುತ್ತೇವೆ.

ಕ್ರೈಸ್ತ ಜಗದ್ಗುರುಗಳ ಅರಮನೆಯ ಕಾರಭಾರ

ಪೋಪರ ನಿತ್ಯಜೀವನ— ಐಶ್ವರ್ಯದ ಆಧಿಪತ್ಯ— ಸಾಹಿತ್ಯಾದಿ ಕಲೆ ಕೃತಿಗಳಿಗೆ ಆಶ್ರಯ— ಅಂತ್ಯಕ್ರಿಯೆಯ ವೈಭವ

ಮೊನ್ನೆ ಮೊನ್ನೆ ಹಿಂದುಸ್ಥಾನದ ಪ್ರತಿನಿಧಿಗಳಾದ ಶ್ರೀ ಧೀರೂಭಾಯಿ ದೇಸಾಯಿಯವರು ಇಟಲಿಗೆ ಪಯಣ ಬೆಳಸಿ ವ್ಯಾಟಿಕಾನಿನಲ್ಲಿರುವ ಕ್ಯಾಥೋಲಿಕ್ ಕ್ರಿಶ್ಚಿಯನ್ ಜಗದ್ಗುರು ಪೋಪರವರನ್ನು ಭೆಟ್ಟಿಯಾಗಿ ಅವರಿಗೆ ತಮ್ಮ ಅಧಿಕಾರ ಪತ್ರವನ್ನು ಅರ್ಪಿಸಿದ್ದು ಸುವೇದ್ಯವಿದೆ. ಪೋಪರ ಪದವು ಕ್ರಿಸ್ತಧರ್ಮದ ಆದಿಕಾಲದಿಂದಲೂ ನಡೆದುಕೊಂಡು ಬಂದದ್ದು) ಪದವಿಯ ಕಾರಭಾರವನ್ನು ಅವಲೋಕಿಸಿದರೆ ಕೆಲ ವೈಚಿತ್ರ್ಯಗಳು ಕಂಡುಬರುತ್ತವೆ:

ಹನ್ನೊಂಬತ್ತನೆಯ ಪೋಪ್ ಪಯಸ್ ಎಂಬವರು ಈಗಿನ ಗುರುಗಳು. "ಪಾಂಟಿಫ್ ಆಫ್ ದಿ ಹೋಲಿ ರೋಮನ್ ಚರ್ಚ್", "ವಿಕಾರ್ ಆಫ್ ಕ್ರೈಸ್ಟ್ ಆನ್ ಅರ್ಥ್" ಮುಂತಾದ್ದು ಅವರ ಬಿರುದುಗಳು. ಅವರು ಸ್ವರ್ಗದ ಬಾಗಿಲ ಕೀಲಿಯನ್ನು ಇಟ್ಟುಕೊಂಡ ಅಧಿಕಾರಿಗಳೆಂದು ತಿಳಿವಳಿಕೆಯಿದೆ.

ಭಕ್ತರ ಬಲಾತ್ಕಾರ

ಗುರುಪಟ್ಟವನ್ನು ಸ್ವೀಕರಿಸಿದಾಕ್ಷಣ ಅವರ ಕುಟುಂಬ ನಾಮವು ಅಳಿಸಿ ಹೋಗುತ್ತದೆ. ಅದನ್ನು ಇನ್ನೊಂದು ಬಾರಿ ಉಚ್ಚರಿಸುವ ದೇವರೆ ಅವರು ಸತ್ತಾಗ ಮಾತ್ರ. ಸತ್ತಾಗ ಅವರ ಶವದ ತಲೆಯ ಮೇಲೆ ಬೆಳ್ಳಿಯ ಕೊಡತಿಯಿಂದ ಕುಟ್ಟಿ ಕಾರ್ಡಿನಲ್ಲನು ಅವರ ಹಳ್ಳಿಯ ಹೆಸರನ್ನು ಉಚ್ಚರಿಸುವನು. ಅನಂತರ "ಪೋಪರು ಖಚಿತವಾಗಿಯೂ ಮೃತರಾಗಿದ್ದಾರೆ" ಎಂದು ಅವನು ಕೂಗಿ ಹೇಳುವನು.

ಸದ್ಯದ ಗುರುಗಳನ್ನು ಗುರು ಪಟ್ಟಕ್ಕೆ ಆರಿಸಿದಾಗ ತಮ್ಮ ಅಯೋಗ್ಯತೆಯನ್ನು ಕಂಡು ಅವರು ಹೇಳಿಕೊಂಡರಂತೆ. ಇವರ ಹಿಂದಿನ ಗುರುಗಳಂತೂ ಅವರನ್ನು ಪೋಪ್ ಪದಕ್ಕೆ ಚುನಾಯಿಸಿದಾಗ ಮೂರ್ಛಿತರಾದರೆಂದು ತಿಳಿಯುತ್ತದೆ! ಪದವಿಯನ್ನು ಸ್ವೀಕರಿಸುವುದು ಅನಿವಾರ್ಯವಾದುದನ್ನು ಕಂಡು ಅವರು "ನಾನು ಇದನ್ನು ಶಿಲುಬೆಯೆಂದುಕೊಂಡು ಒಪ್ಪಿಕೊಳ್ಳುತ್ತೇನೆ. ಅದನ್ನು ತಾಳಿಕೊಳ್ಳಲು ನನಗೆ ನೆರವಾಗಿರಿ" ಎಂದು ಭಕ್ತವರ್ಗಕ್ಕೆ ಬೇಡಿಕೊಂಡರು.

ಪೋಪರು ವ್ಯಾಟಿಕಾನಿನಲ್ಲಿ ಸೆರೆಯಾಳಾಗುವುದು ಸ್ವಬುದ್ಧಿಯಿಂದ, ಸ್ವೇಚ್ಛೆಯಿಂದ. ಅವರ ಇಡಿ ಜೀವನವೂ ಪವಿತ್ರ ಕರ್ಮಗಳಿಗೆ ಮೀಸಲು. ಕ್ವಿರಿನಲ್ಲರೊಡನೆ ಒಪ್ಪಂದ ಮಾಡಿಕೊಂಡಂದಿನಿಂದ ಈಗಿನ ಪೋಪರು ಸೆರೆಯಾಳು ಸಂಚಿತದ ಸುಖವಾಸಿಯೇ ಇದ್ದಾರೆ. ಆದರೂ ಈಗ ಸುಮಾರು ಹೆಚ್ಚು ವರ್ಷಗಳಿಂದ ಪೋಪರಿಗೆ ಅಂಥ ಜಗದ್ವಿಖ್ಯಾತ ಶ್ರೀಮಂತಿಕೆಯು ತಪಸಿನಲ್ಲಿ ಸನ್ಯಾಸಿ ಜೀವನವನ್ನೇ ನಡೆಸುತ್ತ ಬಂದಿದ್ದಾರೆ.

ವ್ಯಾಟಿಕಾನಿನ ಪೂರ್ವ ಭಾಗದಲ್ಲಿ ಪೋಪರ ವಸತಿಸ್ಥಳವಿದೆ. ಮೇಲಟ್ಟದಲ್ಲಿರುವ ಅವರ ಮಲಗುವ ಮನೆ ಸನ್ಯಾಸಿಗೆ ಯೋಗ್ಯವಾದ ಮಾದರಿಯಲ್ಲಿ ವ್ಯವಸ್ಥಿತವಾಗಿದೆ. ಎಲ್ಲರೂ ನಿದ್ದೆ ಮಾಡಿದ ಬಳಿಕ ನಡುರಾತ್ರಿಯಲ್ಲಿ ಅವರು ತಮ್ಮ ವ್ಯಾಸಂಗಶಾಲೆಯಿಂದ ಮಲಗಲು ಮೆಟ್ಟಿಲಿಳಿದು ಹೋಗುವರು.

ಭೋಜನಶಾಲೆಯಲ್ಲಿ ಯಾವ ಅತಿಥಿಯೂ ಪೋಪರಿಗೆ ಎದುರಾಗಿ ಕುಳಿತುಕೊಳ್ಳುವಂತಿಲ್ಲ. ಜಗತ್ತಿನಲ್ಲಿ ದೇವರಿಗೆ ಅತಿ ಹತ್ತಿರದಲ್ಲಿರುವ ಅವರ ಪುಗ್ಗುಲ ನೋಟವಷ್ಟೇ ಕುಳಿತವರಿಗೆ ಲಭ್ಯ. ರಾಜರೂ ಅಧ್ಯಕ್ಷರೂ ಕೆಲಸವಿದ್ದರೆ ಅವರನ್ನು ಬರಲು ಯಾಚಿಸಬೇಕು. ರಾಜಪುತ್ರರೂ ಇತರ ಅಧಿಕಾರಿಗಳೂ ಅವರ ನಿಮಂತ್ರಣದ ಮೇರೆಗೆ ಅವರಿಗಾಗಿ ಕಾದಿರಬೇಕು. ಸೇಂಟ್ ಪೀಟರನ ಗದ್ದುಗೆಯಲ್ಲಿ ಅವರು ಕುಳಿತುಕೊಳ್ಳುವರು; ಕೈಬೆರಳಲ್ಲಿ ಎಲ್ಲ ಅಧಿಕಾರಗಳನ್ನು ಚಿಹ್ನಿಸುವ ಉಂಗುರವನ್ನು ಧರಿಸಿರುವರು.

ಅಳೆಯಲಾಗದ ಐಶ್ವರ್ಯ

೧೮,೭೦೦ ಕೋಣೆಗಳಿರುವ ವ್ಯಾಟಿಕನ್ನಿಗೆ ಅವರೇ ಅಧಿಪತಿಗಳು. ಚರ್ಚಿನ ಅಪಾರ ಆಸ್ತಿಗೆ ಅವರೇ ಒಡೆಯರು. ಆ ಆಸ್ತಿ ಎಷ್ಟೆಂಬುದು ಯಾರಿಗೂ ಗೊತ್ತಿಲ್ಲ. ಅಮೂಲ್ಯ ಪದಾರ್ಥಗಳು ವ್ಯಾಟಿಕನ್ನಿನ ಗೋಡೆಗಳ ನಡುವೆ ಭದ್ರವಾಗಿ ಅಡಗಿವೆ. ಒಮ್ಮೆ ದುರಸ್ತು ಮಾಡುವ ಸಂದರ್ಭದಲ್ಲಿ ಪೋಪರ ಅರಮನೆಯ ಒಂದು ಗೋಡೆಯಲ್ಲಿ ೧೫೦ ಪೌಂಡು ತೂಕದ ಒಂದು ಚಿನ್ನದ ಸರಳು ದೊರಕಿತು. ಅದನ್ನು ಹಿಂದಿನ ಪೋಪರಿಗೆ ರಾಣಿಯೊಬ್ಬಳು ಕೊಟ್ಟಿದ್ದಳೆಂದು ತಿಳಿದುಬಂತು.

ಪೋಪರ ತ್ರಿರತ್ನಯುಕ್ತ ಕಿರೀಟ ಸನಾತನ ಶಿಲ್ಪವಾಗಿದೆ. ಆ ರತ್ನಗಳು ಭಕ್ತರಿತ್ತ ಕಾಣಿಕೆಯವು. ಅವರ ಕೋಶಾಗಾರದಲ್ಲಿ ೬೦ ಕೋಣೆಗಳ ತುಂಬ ಚಿನ್ನದ ವಸ್ತು, ಬೆಳ್ಳಿಯ ಪೆಟ್ಟಿಗೆಗಳು ತುಂಬಿವೆ. ವಿಶಿಷ್ಟ ಸಂದರ್ಶಕರಿಗೆ ಮಾತ್ರ ಅವನ್ನು ತೋರಿಸಲಾಗುವುದು.

ಮ್ಯೂಸಿಯಂ ಪಟ್ಟಿದ ಮೆಟ್ಟಿಲುಗಳು ಅಮೃತ ಶಿಲೆಯವು. ಇವು ಜಗತ್ತಿನಲ್ಲಿಯೇ ಅಪೂರ್ವವಾದುವು. ಇನ್ನೂ ಅತಿ ಎಂಟು ಉಪ್ಪರಿಗೆ ಮೆಟ್ಟಿಲುಗಳ ಪಂಕ್ತಿಗಳಿವೆ. ಪ್ರತಿಯೊಂದು ಕೋಣೆಯ ಮುಚ್ಚಿಗೆಯಲ್ಲೂ (ಮಾಳಿಗೆ) ಪ್ರಸಿದ್ಧ ಚಿತ್ರಕಾರರ ವರ್ಣಚಿತ್ರಗಳಿವೆ. ಚಿತ್ರಗಳೆಲ್ಲ ಪವಿತ್ರಭಾವ ವ್ಯಂಜಕಗಳಾಗಿವೆ. ಆದರೆ ಬೋರ್ಜಿಯ ಕೋಣೆಗಳಲ್ಲಿ ಮಾತ್ರ ಅಭಿಜಾತ ರೀತಿಯ ಅರ್ಥವನ್ನು ಸಮರ್ಥಿಸುವ ವಿವಾಹ ಸಂಭ್ರಮದ ಚಿತ್ರಗಳಿವೆ. ಅವರ ಅವಾವರೂ ಮೇಲ್ಛಾವಣಿಯೂ ಸುಂದರವೂ ಜೀವಕಳೆ ತುಂಬಿದವೂ ಆಗಿವೆ. ಮೈಕೇಲ್ ಏಂಜೆಲೋ ಚಿತ್ರಿಸಿದ ಅದ್ಭುತ ರಮ್ಯ ನಗ್ನ ಚಿತ್ರಗಳೂ ಮೊದಲಿಗೆ ಅಲ್ಲಿ ಕಾಣಸಿಗುತ್ತಿದ್ದುವು. ಆದರೆ ಅವಕ್ಕೆ ಅನಂತರ ಬಟ್ಟೆ ಉಡಿಸಿ ಕೊಡಿಸಲಾಯಿತು.

ಚಿತ್ರಕಲೆಯಂತೆ ಸಾಹಿತ್ಯಕ್ಕೆ ಪೋಪರ ಆಶ್ರಯವೂ ಪ್ರಸಿದ್ಧವಾಗಿದೆ. ಜಗತ್ತಿನಲ್ಲಿಯೇ ಅತ್ಯುತ್ತಮವೆನಿಸುವಂತೆ ಉತ್ತಮ ಗ್ರಂಥಗಳ ಉತ್ತಮ ಹಸ್ತ ಪ್ರತಿಗಳು ಅಲ್ಲಿಯ ಪುಸ್ತಕ ಶಾಲೆಯಲ್ಲಿ ಕಾಣಸಿಗುವುವು. ಇದರಂತೆಯೇ ಮಾನವನ ಜಾಣ್ಮೆಯನ್ನು ಪ್ರದರ್ಶಿಸುವ ಇನ್ನೂ ಹಲವಾರು ಕಲೆಗೆಲಸಗಳು ಅಲ್ಲಿ ಎಲ್ಲೆಂದರಲ್ಲಿ ಕಂಡುಬರುತ್ತವೆ. ಪವಿತ್ರ ಅವಶೇಷಗಳಂತೂ ಲೆಕ್ಕ ಸಂಖ್ಯೆಯಿಲ್ಲ.

ಮೇಲೆ ಹೇಳಿದ ಎಲ್ಲ ವಸ್ತುಗಳೂ ಪೋಪರಿಗೆ ಸೇರಿರುವಂತೆ ಪೋಪರು ವ್ಯಾಟಿಕಾನಿಗೆ ಸೇರಿದವರು. ಅವರ ದೇಹ ಮತ್ತು ಆತ್ಮಗಳೆರಡೂ ಅವರ ಸ್ವತ್ತುಗಳು. ಅವರ ಮರಣಾನಂತರ ಕಾರ್ಡಿನಲ್ಲನು ಮುದ್ರೆಯನ್ನೊಡೆದು ಅವರ ಬೆರಳಿಂದ ಉಂಗುರವನ್ನು ಕಳಚಿ ತೆಗೆದು ಮುಂದಿನ ಪೋಪರಿಗೆ ಅರ್ಪಿಸುವನು.

ಮರಣೋತ್ತರ ವ್ಯವಸ್ಥೆ

ಪೋಪರ ಹೆಣಕ್ಕೆ ಅತ್ತರಿಂದ ಅಭಿಷೇಕ ಮಾಡಿ ಕರುಳನ್ನು ತೆಗೆದು ಮಣ್ಣಿನ ಪಾತ್ರೆಯೊಂದರಲ್ಲಿಟ್ಟು ಅನಂತರ ಶರೀರಕ್ಕೆ ಗುರುತ್ವ ಸೂಚಕವಾದ ಎಲ್ಲ ವಸ್ತ್ರಾಲಂಕಾರವನ್ನು ಮಾಡಿ ತಲೆಯ ಮೇಲೆ ಬಿಳಿ ಮುಸುಕನ್ನು ಹಾಕಲಾಗುತ್ತದೆ. ಅನಂತರ ಒಂದು ದೊಡ್ಡ ಕೆಂಪಾದ ಗೋರಿಯಾಕಾರದ ಪೆಟ್ಟಿಗೆಯಲ್ಲಿ ಅದನ್ನಿಟ್ಟು ಪಾದರಕ್ಷೆಯನ್ನು ಕಳಚಿಬಿಡಲಾಗುವುದು. ಆಗ ಶ್ರದ್ಧಾಳುಗಳು ಅದರ ಕಾಲಿನ ಹೆಬ್ಬೆರಳುಗಳನ್ನು ಮುತ್ತಿಡುವರು. ಇದೇ ಸ್ಥಿತಿಯಲ್ಲಿ ೩-೪ ದಿನ ಆ ಹೆಣವನ್ನು ಇಡಲಾಗುವುದು. ಆಗ ಸಾವಿರ ಪೌಂಡು ತೂಕದಷ್ಟು ಮೇಣದ ಬತ್ತಿಯನ್ನು ಉರಿಸಿ ಅವರ ಆತ್ಮದ ಸಂತೃಪ್ತಿಗಾಗಿ ಸೂಕ್ತಿಗೀತಗಳನ್ನು ಎತ್ತರಿಸಿ ಹಾಡಲಾಗುವುದು. ಅದಾದ ಮೇಲೆ ಹೆಣವನ್ನು ಹೂಳಲು ಒಯ್ಯುವ ಒಂದರೊಳಗೊಂದರಂತೆ ಇಟ್ಟ ಮೂರು ತೊಟ್ಟಿಲಂಥ ಪೆಟ್ಟಿಗೆಯೊಳಗೆ ಇಡಲಾಗುವುದು. ಆ ಪೆಟ್ಟಿಗೆಗಳಲ್ಲಿ ಒಂದನೆಯದು ಸೈಪ್ರೆಸ್ ಮರದಿಂದ ಮಾಡಿದ್ದು, ಎರಡನೆಯದು ಸೀಸದ್ದು, ಮೂರನೆಯದು (ಒಳಗಿನದು) ಓಕ್‌ಮರದ್ದು. ಪೆಟ್ಟಿಗೆಯನ್ನು ಮುಚ್ಚಿ ಮೊಳೆ ಜಡಿಯುವ ಮೊದಲು ಕಾರ್ಡಿನಲ್ಲರು ಕುರಿಯ ಅಥವಾ ಆಡಿನ ಚರ್ಮದ ಪತ್ರದಲ್ಲಿ ಮೃತ ಗುರುಗಳ ಆಳಿಕೆಯಲ್ಲಿ ನಡೆದ ಸಂಗತಿಗಳನ್ನು ಬರೆದು ಒಳಗಿಡುತ್ತಾರೆ. ಇನ್ನೊಬ್ಬ ಕಾರ್ಡಿನಲ್ಲನು ಅವರ ಕಾಲದಲ್ಲಿ ಬಂದ ಚಿನ್ನ, ಬೆಳ್ಳಿ, ಕಂಚುಗಳ ಮೆಡಲುಗಳನ್ನು ಚಿಕ್ಕ ಚೀಲವೊಂದರಲ್ಲಿ ತುಂಬಿ ಚಟ್ಟದ ಪೆಟ್ಟಿಗೆಯಲ್ಲಿ ಹಾಕುವನು. ಆಗ ಬಾಗಿಲು ಮುಚ್ಚಿ ಅದನ್ನು ಸೇಂಟ್ ಪೀಟರ್ ಚರ್ಚಿನ ಒಂದು ಭಾಗಕ್ಕೆ ಒಯ್ಯಲಾಗುತ್ತದೆ. ಅಲ್ಲಿ ಅದನ್ನು ಗೋಪುರದ್ವಾರದೊಂದರಲ್ಲಿ ಎತ್ತರದಲ್ಲಿ ಹೂಳಿ ಮೇಲೆ ಅಮೃತ ಶಿಲಾಫಲಕವೊಂದನ್ನಿಟ್ಟು ಆ ಪೋಪರ ಹೆಸರನ್ನು ಬಿರುದನ್ನೂ ಅದರ ಮೇಲೆ ಕೊರೆಯಲಾಗುವುದು. ಸುಮಾರು ನಾಲ್ಕು ವರ್ಷಗಳ ವರೆಗೆ ಅದು ಅಲ್ಲಿರುವುದು. ಅಷ್ಟರಲ್ಲಿ ಅವರ ದೊಡ್ಡ ಗೋರಿ ನಿರ್ಮಿತವಾಗುವುದು. ಆಗ ಅದನ್ನು ಅಲ್ಲಿಗೊಯ್ದು ಹೂಳಲಾಗುವುದು; ಮಿಕ್ಕ ಪೋಪರ ಗೋರಿಗಳ ಜೊತೆಗೆ ಇವರ ಗೋರಿಯನ್ನು ಆಗ ಕಾಣಬಹುದು. ಗೋಪುರದ್ವಾರದ ಮೇಲ್ಭಾಗದಲ್ಲಿ ಮೃತ ಪೋಪರ ಹೆಣವನ್ನು ಹೂಳಿಟ್ಟ ಬಳಿಕ ಕಾರ್ಡಿನಲ್ಲರು ಹೊಸ ಚುನಾವಣೆಯನ್ನು ನಡೆಸುವರು. ಆ ಚುನಾವಣೆಯಲ್ಲಿ ಹೊಸ ಪೋಪರ ಆಯ್ಕೆಯಾದದ್ದನ್ನು ಅವರು ಜನರಿಗೆ ಸಾರುವರು. ಹೊಸ ಪೋಪರು ಬಂದು ಜನರೆದುರು ನಿಂತು ನಾಲ್ಕೂ ದಿಕ್ಕುಗಳತ್ತ ವರಹಸ್ತಗಳನ್ನು ನೀಡಿ ಆಶೀರ್ವಾದ ಮಾಡುವರು. ಕಾರ್ಡಿನಲ್ಲರು ಮೂರು ಸಲ ಮಂಡಿಯೂರಿ ನಮಸ್ಕರಿಸುವರು. ಆಗ ಹೊಸ ಪೋಪರು ತಮ್ಮ ಕೋಣೆಗೆ ಮರಳುವರು.

—ಅರ್ಜುನ

ಮದ್ರಾಸಿನಲ್ಲಿ ಶಾಂತಾರಾಮರು

ಮದ್ರಾಸ್ ಥಿಯೇಟರಿನಲ್ಲಿ ಪತ್ರಿಕಾ ಪ್ರತಿನಿಧಿಗಳೆದುರು ಭಾಷಣ ಮಾಡುವಾಗ ಚಿತ್ರ ನಿರ್ಮಾಪಕರ ಮೇಲೆ ಸಾಂಸ್ಕೃತಿಕ ಮತ್ತು ದೇಶಪ್ರೇಮಬದ್ಧವಾದ ಚಿತ್ರಗಳನ್ನು ತಯಾರಿಸುವ ಹೊಣೆಯಿದೆ ಎಂದು ವಿದೇಶದಲ್ಲಿ ತಿರುಗಾಡಿ ಬಂದ ಪ್ರಸಿದ್ಧ ಚಲಚ್ಚಿತ್ರ ದಿಗ್ದರ್ಶಕರಾದ ಶ್ರೀ ವಿ. ಶಾಂತಾರಾಮರು ಒತ್ತಿ ಹೇಳಿದರು. ಇತ್ತೀಚಿಗೆ ನಿರ್ಮಿಸಲಾದ ಚಿತ್ರಗಳು ಗುಣದಲ್ಲಿ ಬಹಳ ಕೆಳಗಿಳಿದು ಹೋಗಿವೆಯೆಂದು ಅವರು ಅಭಿಪ್ರಾಯಪಟ್ಟರು.

ಮುಂದುವರಿಯುತ್ತ "ವಿದೇಶಗಳಿಗೆ ಕಳಿಸುವಾಗ ಚಿತ್ರಗಳನ್ನು ಎಚ್ಚರಿಕೆಯಿಂದ ಆಯ್ದು ಕಳಿಸಬೇಕು. ಇಲ್ಲಿ ಬಹಳ ರೊಕ್ಕವನ್ನು ಸಂಪಾದಿಸಿಕೊಟ್ಟಿತೆಂಬ ಕಾರಣದಿಂದ ಒಂದು ಚಿತ್ರ ವಿದೇಶದಲ್ಲಿ ಜನಪ್ರಿಯವಾದೀತೆಂದು ಹೇಳಲು ಬರದು. ಭಾರತಕ್ಕೆ ವಿಶಿಷ್ಟವಾಗಿರುವ ಮತ್ತು ಭಾರತದಲ್ಲಿ ಮಾತ್ರ ಸಂಭವಿಸಬಹುದಾದ ಸಂಗತಿಗಳನ್ನು ಒಳಗೊಂಡ ಚಿತ್ರಗಳೇ ಹೆಚ್ಚಾಗಿ ವಿದೇಶದಲ್ಲಿ ಪ್ರಿಯವಾಗುವವು. ಅಮೇರಿಕದಲ್ಲಿ ಪ್ರೇಕ್ಷಕರು ತಾರೆಯರನ್ನು ನೋಡಿಕೊಂಡು ಸಿನೆಮ ನೋಡಹೋದರೆ ಭಾರತದಲ್ಲಿ ಅವರು ದಿಗ್ದರ್ಶಕರಾರೆಂದು ತಿಳಿದುಕೊಂಡು ಅದರ ಮೇಲಿಂದ ಸಿನೆಮ ನೋಡಲು ಹೋಗುವರು. ಅಮೇರಿಕದವರಿಗೂ ಭಾರತದವರಿಗೂ ಅಭಿರುಚಿಭೇದ ಬಹಳವಿದೆ. ಇಲ್ಲಿ ಜನಪ್ರಿಯವಾದ "ಸ್ನಾನಾಸಕ್ತ ಸುಂದರಿ"ಯ ಚಿತ್ರ ಅಮೇರಿಕದಲ್ಲಿ ಅಸಹ್ಯವೆಂದು ಗಣಿಸಲಾಯಿತು. ಭಾಷಾಭೇದದಿಂದ ಸಿನೆಮ ರೀಲುಗಳ ಉದ್ದಳತೆ ಬದಲಾಗಲು ಕಾರಣವಿಲ್ಲ. ಕಥಾ ವಸ್ತುವೇ ರೀಲಿನ ಉದ್ದಳತೆಗೆ ನಿರ್ಣಾಯಕವಾಗಬೇಕು. ಸರಕಾರ ನಿರ್ದೇಶಿದಷ್ಟು ಉದ್ದದ ಫಿಲ್ಮಿನಲ್ಲಿ ಮಹಾತ್ಮಾ ಗಾಂಧಿಯವರ ಜೀವನ ಚಿತ್ರವನ್ನು ಕೊಡಲು ಸಾಧ್ಯವಿಲ್ಲ. ಮಿಕ್ಕ ನಿರ್ಮಾಪಕರು ಮತ್ತು ದಿಗ್ದರ್ಶಕರಂತೆ ನನಗಾದರೂ ದೇಶದ ತಂದೆಯಾದ ಗಾಂಧಿಯವರ ಜೀವನ ಚಿತ್ರವನ್ನು ಚಿತ್ರಿಸುವ ಆಶೆಯಿದೆ"— ಎಂದು ಶಾಂತಾರಾಮರು ನುಡಿದರು.

ಸಿನೆಮದಲ್ಲಿ ದೇವತೆಗಳನ್ನು ಅಭಿನಯದಲ್ಲಿ ತರಲು ಆಕ್ಷೇಪವಿಲ್ಲ. ಆದರೆ ಮಾತಿನಲ್ಲಾಗಲಿ, ಕೃತಿಯಲ್ಲಾಗಲಿ, ಅವರು ಅಸ್ವಾಭಾವಿಕವಾಗಿ ತೋರದಂತೆ ನೋಡಿಕೊಳ್ಳಬೇಕು. ಇನ್ನೊಂದು ವಿಷಯವೆಂದರೆ, ಇತ್ತೀಚಿಗೆ ಭಾರತ ಸರಕಾರವು ಮಕ್ಕಳಿಗೆ ಬೇರೆ ದೊಡ್ಡವರಿಗೆ ಬೇರೆ ಎಂದು ಚಿತ್ರಗಳನ್ನು ವರ್ಗೀಕರಿಸುವ ವಿಧಿಯನ್ನು ಮಾಡಿದ್ದು ಅನವಶ್ಯಕ. ಪತ್ರಿಕಾಕರ್ತರೂ ಸಾರ್ವಜನಿಕರೂ ಸ್ವತಂತ್ರ ಹಿಂದುಸ್ಥಾನದ ಸಂದೇಶವನ್ನು ಪ್ರಸಾರ ಪಡಿಸುವ ಕಾರ್ಯದಲ್ಲಿ ಸಿನೆಮದವರೊಡನೆ ಸಹಕರಿಸಬೇಕು, ಇವೇ ಮುಂತಾದ ವಿಚಾರಗಳನ್ನು ಸಭೆಯ ಮುಂದಿಟ್ಟು ಶ್ರೀ ಶಾಂತಾರಾಮರು ಮಾತು ಮುಗಿಸಿದರು.

ಈ ಭಾರತ!

ವ.ಎಂ.ಜಿ.ಯ ಗೌರವ (ಬಿನ್‌ಪಗಾರಿ) ಮ್ಯಾಜಿಸ್ಟ್ರೇಟರು ತಮ್ಮನ್ನು ಅಲಂಕಾರ ವಸ್ತುಗಳೆಂದು ಬಗೆಯಬಾರದೆಂದೂ ತಮಗೆ ಹೆಚ್ಚು ಕೆಲಸ ಕೊಡಬೇಕೆಂದೂ ಮುಂಬಯಿ ಮಂತ್ರಿಗಳಿಗೆ ಮನವಿ ಮಾಡಿಕೊಂಡಿದ್ದಾರೆ. ಹೆಚ್ಚು ಕೆಲಸ ಬೇಡುವವರಿಗೆ ಕೆಲಸ ಕೊಡಲು ಯಾರು ಆಕ್ಷೇಪಿಸುತ್ತಾರು? ಎಂದು ಮುಖ್ಯ ಮಂತ್ರಿ ಖೇರರು ಅವರಿಗೆ ಕೆಲಸ ಕೊಡುವ ಆಶ್ವಾಸನವಿತ್ತಿದ್ದಾರೆ.

ಕಚ್ಛದ ಮಹಾರಾಜರು ಕಳೆದ ವಾರ ಅಮೇರಿಕೆಯಿಂದ ಮರಳಿದಾಗ ಮುಂಬಯಿ ಧಕ್ಕೆ ಅಧಿಕಾರಿಗಳು ನಿಯಮದಂತೆ ಅವರ ಪೆಟ್ಟಿಗೆಗಳನ್ನು ಜಡತಿ ಮಾಡಲುದ್ಯುಕ್ತರಾದರು. ಆದರೆ ಮಹಾರಾಜರು ತಮ್ಮ ರಾಜತ್ವದ ವೈಯಕ್ತಿಕ ಹಕ್ಕು ಬಾಧ್ಯತೆಗಳು ಈ ಪ್ರಕಾರದ ಜಡತಿಯಿಂದ ತಮ್ಮನ್ನು ಮುಕ್ತ ಮಾಡಿವೆಯೆಂದು ಸಾಧಿಸಿದರು. ಅಧಿಕಾರಿಗಳು ಅವರ ಪೆಟ್ಟಿಗೆಯನ್ನು ಹಾಗೆಯೆ ಮೊಹರು ಬಂದ್ ಮಾಡಿಟ್ಟು ಈ ಸ್ವಾರಸ್ಯದ ಕಾಯದೆಯ ಮುದ್ದೆಯ ನಿರ್ಣಯಕ್ಕಾಗಿ ಸರಕಾರಕ್ಕೆ ಬರೆದುಕೊಂಡಿದ್ದಾರೆ.

ಕಳೆದ ವಾರ ಮರಣ ಹೊಂದಿದ ಅಲಂಶಹಾನೆಂಬ ಮುಸ್ಲಿಮ ಫಕೀರನ ಅಂತ್ಯಕ್ರಿಯೆಯನ್ನು ಸನವೇರ ಗ್ರಾಮದ (ಮಧ್ಯಭಾರತ) ಹಿಂದುಗಳು ಮುಸ್ಲಿಂ ವಿಧಿಯಂತೆ ನೆರವೇರಿಸಿದರು. ಈಚೆಗೆ ಒಂದು ಹಿಂದೂ ಸ್ಮಾರಕದ ಪ್ರಕರಣದಲ್ಲಿ ಮುಸ್ಲಿಮರ ಹಿತಕ್ಕೆ ವಿರುದ್ಧವಾಗಿ ನ್ಯಾಯಸ್ಥಾನದಲ್ಲಿ ಅವನು ಸಾಕ್ಷ್ಯ ಹೇಳಿದ್ದನೆಂದು ಅವನ ಅಂತ್ಯಕ್ರಿಯೆಯನ್ನು ಸ್ಥಾನಿಕ ಮುಸ್ಲಿಮರು ಬಹಿಷ್ಕರಿಸಿದ್ದರು.

ಯುಕ್ತ ಪ್ರಾಂತದಲ್ಲಿ ಇಂದು ಪೋಲೀಸರಿಗೆ ಎಲ್ಲರಿಗಿಂತಲೂ ಹೆಚ್ಚು "ಬೇಕಾದವ"ನೆಂದರೆ ಬೀರೇ ಎಂಬ ಡಕಾಯತಿಗಾರ. ಅವನು ಈ ವರೆಗೆ ೪೦ ಕೊಲೆಗಳನ್ನೂ ೧೦೦ ಡಕಾಯತಿಗಳನ್ನೂ ಮಾಡಿದ್ದಾನೆ. ಕಳೆದ ವರ್ಷ ಪೋಲೀಸರ ಗುಂಡಿಗಾಹುತಿಯಾದ ಗಿರೇಂದ ಸಿಂಗನೆಂಬ ಸುಲಿಗೆಗಾರನ ಪಟ್ಟಶಿಷ್ಯನಾದ ೩೫ ವರ್ಷದ ಈ ಬೀರೆ ಈ ವರೆಗೆ ಪೋಲೀಸರಿಗೆ ಎರಡು ಬಾರಿ ಮಾತ್ರ ನೋಡಸಿಕ್ಕಿದ್ದು ಎರಡೂ ಸಲ ಅವನು ತಪ್ಪಿಸಿಕೊಂಡು ಹೋಗಿದ್ದ. ಅವನನ್ನು ಹಿಡಿದು ಕೊಟ್ಟವರಿಗೆ ೫೦೦೦ ರೂಪಾಯಿ ಇನಾಮು ಜಾಹೀರಾಗಿದೆ.

ಚಿಕ್ಕ ಕತೆ

ಮಗುವಿನ ಮನಸ್ಸು

ಲೇ:- ಬಾಳೆಕುದುರು ಲಕ್ಷ್ಮೀನಾರಾಯಣ ಕೆದಲಾಯ

ಬಹುದಿನಗಳಿಂದ ನಿರೀಕ್ಷಿಸುತ್ತಿದ್ದ ತೇರು ಹಬ್ಬ ಇಂದು ಬಂದಿದೆ. ಅದೆಷ್ಟು ಮನೋಹರ, ಸುರಮ್ಯ ಪ್ರಭಾತವಿಂದು. ಪ್ರಕೃತಿಮಾತೆ ಯಿಂದು ಸುಶೋಭಿತೆಯಾಗಿದ್ದಾಳೆ. ಇಂದಿನ ಸೂರ್ಯನು ಜನರ ಆನಂದದಲ್ಲಿ ತಾನೂ ಭಾಗ ವಹಿಸುತ್ತಿರುವನೋ ಎಂಬಂತಿದೆ. ಅದೆಷ್ಟು ಸಂಭ್ರಮ ಜನರಲ್ಲಿ! ಕೆಲವರ ಅಂಗಿಗಳಲ್ಲಿ ಗುಂಡಿಯಿಲ್ಲ. ಕೆಲವರು ನೆರೆಮನೆಯ ಕಡೆಗೆ ಸೂಜಿಯನ್ನು ತರಲು ಓಡುತಿದ್ದಾರೆ. ಕೆಲವರ ಪಾದರಕ್ಷೆಗಳು ಹಾಳಾಗಿವೆ. ಸರಿಪಡಿಸಲು ಸಮಗಾರರಲ್ಲಿ ಹೋಗುತ್ತಿರುವರು. "ಬೇಗನೆ ಎತ್ತುಗಳಿಗೆ ನೀರುಕೊಡಿ. ಹಬ್ಬದಿಂದ ಹಿಂತಿರು ಗುವಾಗ ತಡವಾದೀತು. ಮೂರು ಮೈಲುಗಳ ಕಾಲುದಾರಿ ಅಲ್ಲದೇ ನೂರಾರು ಜನರೊಡನೆ ಮಾತುಕತೆ; ಮಧ್ಯಾಹ್ನದೊಳಗೆ ಹಿಂತಿರುಗು ವುದು ಅಸಂಭವವೇ" ಎಂದು ಕೆಲವರ ಗಲಾಟೆ.

ಮಕ್ಕಳು ಎಲ್ಲರಿಗಿಂತ ಹೆಚ್ಚು ಸಂತೋಷ ದಲ್ಲಿದ್ದಾರೆ. ಹಬ್ಬಕ್ಕೆ ಹೋಗುವ ಸಂಭ್ರಮ ದಲ್ಲಿ ಊಟ ಬೇಡಾದವರೆಷ್ಟುಮಂದಿ? ತಂದೆ ತಾಯಿಗಳನ್ನು ಪೀಡಿಸಿ ಹಣ ತೆಗೆದುಕೊಂಡು ಸ್ನೇಹಿತರಿಗೆ ತೋರಿಸಿ ಸಂತೋಷ ಪಡುವರು ಹಲವರು. ಯಾಕೆ ಇನ್ನೂ ಹಬ್ಬಕ್ಕೆ ಹೊರ ಡುವುದಿಲ್ಲವೆಂದು ಇನ್ನು ಕೆಲವರು. ಅಂತೂ ಇಂದು ಜನರಲ್ಲಿ ಒಂದು ನವೋತ್ಸಾಹ. ವರುಷ ಕ್ಕೊಮ್ಮೆ ಜರಗುವ ತೇರುಹಬ್ಬ ಎಲ್ಲರಲ್ಲೂ ಉತ್ಸಾಹವನ್ನು ಹುಟ್ಟಿಸುವುದು ಸ್ವಾಭಾವಿಕ. ಕೆಲವು ಮಕ್ಕಳು ತಮ್ಮ ಹಣವನ್ನು ಲೆಕ್ಕಿಸು ವರು. ಜೇಬಿನಲ್ಲಿ ಇಡುವರು. ಗೋಪಾಲನು ಎಣಿಸಿದ— "ಒಂದು-ಎರಡು-ಹತ್ತು-ಹನ್ನೆ ರಡು. ಅವನ ಹತ್ತಿರ ಹನ್ನೆರಡು" ಬಿಲ್ಲೆಗಳಿವೆ. ಅದರಿಂದ ಲೆಕ್ಕವಿಲ್ಲದಷ್ಟು ವಸ್ತುಗಳನ್ನು ಕೊಂಡುಕೊಳ್ಳಬೇಕು ಎಂದು ಅವರ ಯೋಚನೆ. ತರತರದ ಆಟದ ಸಾಮಾನುಗಳು, ಮಿಠಾಯಿ ಎಲ್ಲಾ ಅವರ ಅವಶ್ಯದ ವಸ್ತುಗಳು.

ಎಲ್ಲರಿಗಿಂತಲೂ ಹೆಚ್ಚು ಶೇಖರನು ಇಂದು ಸಂತೋಷದಲ್ಲಿದ್ದಾನೆ. ಅವನು ನಾಲ್ಕೈದು ವಯಸ್ಸಿನ ಸುಂದರ ಕೃಶಶರೀರಿ. ಅವನ ತಂದೆ ಕಳೆದ ವರ್ಷ ವಾಂತಿಭೇದಿಯಿಂದ ಮೃತ್ಯುವಿನ ತುತ್ತಾದ. ತಾಯಿ ಹೆಸರಿಲ್ಲದ ಕಾಹಿಲೆಯಿಂದ ಇಹಲೋಕ ತ್ಯಜಿಸಿದಳು. ಯಾರಿಗೂ ಕಾಹಿಲೆಯಾವುದೆಂದು ತಿಳಿಯಲಿಲ್ಲ. ತಿಳಿದು ಹೇಳಿದರೂ ಕೇಳುವವರು ಯಾರು? ಹೃದಯದ ಮೂಕವೇದನೆ ಸಹಿಸಲಸಾಧ್ಯ ವಾದಾಗಲೇ ಮೃತ್ಯುಅವಳನ್ನು ಆಹ್ವಾನಿಸಿತು. ಈಗ ಶೇಖರನು ತನ್ನ ಮುದಿಯಜ್ಜಿಯೊಡನೆ ಸಂತೋಷದಿಂದ ಕಾಲಯಾಪನೆಮಾಡುತ್ತಿ ದ್ದಾನೆ. ಅವನ ಸಂತೋಷವಿಷ್ಟೆ-ಅವನ ತಂದೆ ಹಣಸಂಪಾದಿಸಲು ಎಲ್ಲಿಗೋ ಹೋಗಿರುವನು. ಹಣದ ಗಂಟುಗಳನ್ನೇ ತರಬಹುದು. ತಾಯಿ ಸ್ವರ್ಗಕ್ಕೆ ಹೋಗಿದ್ದಾಳೆ. ಅಮೂಲ್ಯ ಒಡವೆ ಗಳನ್ನು ತರುವಳು. ಶೇಖರನಿಗೆ ಪಾದರಕ್ಷೆ ಗಳಿಲ್ಲ' ಹಳೆಯ ಟೋಪಿಯೊಂದಿದೆ. ಅದರೂ ಅವನ ಸಂತೋಷ ಕುಗ್ಗಿರಲಿಲ್ಲ.

ಅಭಾಗಿನಿ; ಮುದಿಯಜ್ಜಿ ಕೋಣೆಯಲ್ಲಿ ಕುಳಿತು ಅಳುತ್ತಿದ್ದಳು. ಇಂದು ತೇರು ಹಬ್ಬ, ಆದರೆ ಮನೆಯಲ್ಲಿ ಧಾನ್ಯದ ಕಾಳಿಲ್ಲ. ಹೌದು, ಇಂದು ವಿಶೇಷ ದಿನ, ವರುಷಕ್ಕೊಮ್ಮೆ ಬರುವ ಹಬ್ಬ. ಆದರೆ ಮಾಡುವುದು ಏನು? ಈ ನಿರಾಶೆ ಯಲ್ಲಿ ಅವಳು ಮುಳುಗಿದ್ದಳು.

ಶೇಖರ ಒಳಗೆ ಬಂದು ಹೇಳಿದ, "ಅಮ್ಮಾ, ನೀನು ಅಳಬೇಡ. ನಾನು ಎಲ್ಲರಿಗಿಂತ ಮೊದಲೇ ಬರುವೆ. ನೀನು ಭಯಪಡಬೇಡ."

ಮುದುಕಿಯ ಹೃದಯ ಇನ್ನಿಷ್ಟು ನೊಂದಿತು. ಊರಿನ ಮಕ್ಕಳು ತಮ್ಮ ತಂದೆತಾಯಿಗಳ ಸಂಗಡ ಸಂತೋಷದಿಂದ ಹೋಗುತ್ತಿದ್ದಾರೆ. ಶೇಖರನ ತಂದೆ? ಅವನ ಅಜ್ಜಿಯ ವಿನಾ ಅವನಿಗೆ ಯಾರು? ಅವನೊಬ್ಬನನ್ನೇ ಉತ್ಸ ವಕ್ಕೆ ಕಳಿಸುವುದಾದರೂ ಹೇಗೆ? ಆ ದೊಡ್ಡ ಜನಸಮೂಹದಲ್ಲಿ ಅವನೆಲ್ಲಿಗಾದರೂ ದಾರಿ ತಪ್ಪಿ ಹೋದರೇನು ಗತಿ? ನಡೆದು ನಡೆದು ಕಾಲು ನೋವಾಗಬಹುದು. ಪಾದರಕ್ಷೆ ಮೊದಲೇ ಇಲ್ಲ. ಎತ್ತಿಕೊಂಡು ಹೋಗೋಣ ವೆಂದರೆ ಏನಾದರೂ ಅಡಿಗೆ ಮಾಡಬೇಕಲ್ಲ!

ಮುದುಕಿಗೆ ಯಾರ ಮನೆಯಲ್ಲೋ ವಸ್ತ್ರ ಒಗೆದುದರ ಪ್ರತಿಫಲವಾಗಿ ಎಂಟು ಆಣೆಗಳು ಸಿಕ್ಕಿದ್ದವು. ಹಬ್ಬಕ್ಕಾಗಿ ಅದನ್ನು ಪ್ರಯತ್ನ ದಿಂದ ಕಾದಿರಿಸಿದ್ದಳು. ಆದರೆ ನಾಳೆ ಹಾಲಿ ನವಳು ಬಂದಾಳು. ಕೇಳುವವರಾರು ಅವಳ ರಂಪಾಟ? ಶೇಖರನಿಗೆ ಹಬ್ಬಕ್ಕೇನೂ ಇಲ್ಲ. ಕೊನೆಗೆ ಇದ್ದುದರಲ್ಲೇ ಮೂರು ಬಿಲ್ಲೆ ಗಳನ್ನು ಅವನ ಕೈಯಲ್ಲಿಟ್ಟಳು.

ಹಳ್ಳಿಯಿಂದ ಉತ್ಸವಕ್ಕೆ ಗುಂಪೊಂದು ಹೊರಟಿತು. ಅದರಲ್ಲಿ ಮಕ್ಕಳಿಂದ ಮುದುಕರ ವರೆಗೆ ಎಲ್ಲ ಬಗೆಯವರೂ ಇದ್ದರು. ಮಕ್ಕಳ ಸಂಗಡ ಶೇಖರನೂ ಹೋಗುತ್ತಿದ್ದ. ಒಮ್ಮೊಮ್ಮೆ ಕೆಲವು ಹುಡುಗರು ಮುಂದೆ ಓಡಿ ಹೋಗುವರು. ಕೊನೆಗೆ ಮರದನೆರಳಲ್ಲಿ ನಿಂತು ಸಂಗಡಿಗರನ್ನು ನಿರೀಕ್ಷಿಸುವರು. ಪಟ್ಟಣವು ಸಮೀಪಿಸಿತು. ರಸ್ತೆಯ ಇಕ್ಕೆಡೆಗಳಲ್ಲೂ ಹಣ್ಣು ಹಂಪಲುಗಳ ಮರಗಳಿವೆ. ಹಣ್ಣುಗಳನ್ನು ಕಂಡ ಹುಡುಗರು ಕಲ್ಲನ್ನೆರಯುವರು ಆದರ ಮಾಲಿಕನು ಬಯ್ಯುತ್ತಾ ಹೊರಗೆ ಬರುವಷ್ಟ ರಲ್ಲೇ ಇವರು ಒಂದೆರಡು ಫರ್ಲಾಂಗು ದೂರದಲ್ಲಿ ನಿಂತು ನಗುವರು. ಅವರ ಸಂತೋ ಷಕ್ಕೆ ಪಾರವಿದೆಯೇ?

ದೊಡ್ಡ ದೊಡ್ಡ ಕಟ್ಟಡಗಳು ಕಾಣತೊಡ ಗಿದವು. ಇದು ಕೋರ್ಟು, ಇದು ಕಾಲೇಜು, ಇದು ಕ್ಲಬ್ಬು ಎಂದು ಮಕ್ಕಳು ತಮ್ಮತಮ್ಮೊ ಳಗೆಮಾತನಾಡುತ್ತ ಮುಂದುವರಿಯುತಿದ್ದಾರೆ. "ಇಷ್ಟು ದೊಡ್ಡ ಕಾಲೇಜಿನಲ್ಲಿ ಎಷ್ಟು ಹುಡು ಗರು ಓದುತ್ತಿರಬಹುದು?" ಎಂದು ಶೇಖರನ ಪ್ರಶ್ನೆ.

"ಇಲ್ಲಿ ಓದುವವರುಹುಡುಗರಲ್ಲ. ಎಲ್ಲರೂ ದೊಡ್ಡವರು. ಅವರಿಗೆ ಮೀಸೆ ಸಹ ಇದೆ. ಇಷ್ಟು ದೊಡ್ಡವರಾದರೂ ಓದಲು ಹೋಗು ವರು. ಏನು ಓದುವರೋ?" ಎಂದು ಇನ್ನೊಬ್ಬ. ಶೇಖರನ ಶಾಲೆಯಲ್ಲಿ ಮೂರು ನಾಲ್ಕು ಮಂದಿ ದೊಡ್ಡವರು ಹುಡುಗರಿದ್ದರು. ಬಹಳ ದಡ್ಡರು. ಪ್ರತಿದಿನ ಉಪಾಧ್ಯಾಯ ರಿಂದ ಪೆಟ್ಟುತಿನ್ನುವರು. ಕೆಲಸಗಳ್ಳರು. ಅಂತೆಯೇ ಇಲ್ಲಿಯವರಿರಬಹುದೆಂದು ಅವನ ಎಣಿಕೆ.

ಇನ್ನೂ ಮುಂದುವರಿದರು. ಮಿಠಾಯಿಯ ಅಂಗಡಿ ಬಂತು. ಅಂಗಡಿಯು ಒಳ್ಳೆಯ ರೀತಿ ಯಿಂದ ಅಲಂಕರಿಸಲ್ಪಟ್ಟಿತ್ತು. "ಇಷ್ಟು ಮಿಠಾಯಿಯನ್ನು ತಿನ್ನುವವರು ಯಾರು? ಒಂದೊಂದು ಅಂಗಡಿಗಳಲ್ಲಿ ಸ್ವಲ್ಪವಿದೆಯೇ?" ಎಂದು ಒಬ್ಬ. "ರಾತ್ರಿಭೂತಗಳು ಬಂದು ಕೊಂಡುಕೊಳ್ಳುವುವಂತೆ. ಮಧ್ಯರಾತ್ರಿ ಸಮಯ. ಮನುಷ್ಯರೂಪದಲ್ಲೇ ಬಂದು ಪ್ರತಿ ಅಂಗಡಿಯಲ್ಲಿ ಮಾರಾಟವಾಗದೆ ಉಳಿದ ವಸ್ತು ಗಳನ್ನೆಲ್ಲ ಕೊಂಡುಕೊಳ್ಳುವವು. ನಿಜವಾದ ರೂಪಾಯಿಗಳನ್ನೇ ಕೊಡುವುವು" ಎಂದ ಇನ್ನೊಬ್ಬ.

ಶೇಖರನಿಗೆ ವಿಶ್ವಾಸ ಹುಟ್ಟಲಿಲ್ಲ. ಅವ ನೆಂದ- "ಇಂಥ ರೂಪಾಯಿಗಳು ಭೂತಗಳಿಗೆ ಎಲ್ಲಿಂದ ಸಿಗುವುವು?"

ಭೂತಗಳಿಗೆ ಹಣದ ಕೊರತೆಯಿದೆಯೆ? ಯಾವ ಖಜಾನೆಗಳಿಗೂ ಅವು ಹೋಗಬಲ್ಲವು. ಕಬ್ಬಿಣದ ಬಾಗಿಲುಗಳೂ ಅವನ್ನು ತಡೆಯ ಲಾರವು. ವಜ್ರವೈಡೂರ್‍ಯಾದಿಗಳು ನವರತ್ನ ಗಳು ಅವುಗಳ ಹತ್ತಿರವಿವೆ. ಯಾರಲ್ಲಿ ಅವು ಗಳಿಗೆ ಸಂತೋಷವಾಗುತ್ತದೆಯೋ, ಅವರಿಗೆ ಬೇಕಾದ್ದನ್ನು ಅವು ಕೊಡಬಲ್ಲವು. ಈಗ ಇಲ್ಲಿ ಕುಳಿತಿದ್ದರೆ ಐದು ಮಿನಿಟಿನಲ್ಲಿ ಕಲ್ಕತ್ತೆಗೆ ಹೋಗುವುವು.

ಶೇಖರ ಕೇಳಿದ- "ಅವು ಬಹಳ ದೊಡ್ಡದಾಗಿ ರುತ್ತವೆಯೇ?"

"ನೆಲದಲ್ಲಿ ನಿಂತರೆ ತಲೆಯು ಆಕಾಶಕ್ಕೆ ಮುಟ್ಟುವುದು. ಇಚ್ಛಿಸಿದರೆ ಅತಿ ಚಿಕ್ಕದಾಗ ಬಲ್ಲವು."

"ಜನರು ಅವುಗಳನ್ನು ಹೇಗೆ ಒಲಿಸಿ ಕೊಳ್ಳುವರು? ಏನಾದರೂ ಮಂತ್ರ ತಂತ್ರಗಳ ವ್ವರೆ ತಿಳಿಸು. ನಾನು ಪ್ರಯತ್ನಿಸುವೆ."

"ಈ ವಿಚಾರ ನನಗೆ ಗೊತ್ತಿಲ್ಲ. ಆದರೆ ಶಾಸ್ತ್ರಿ ಗಳ ಸ್ವಾಧೀನದಲ್ಲಿ ತುಂಬ ಭೂತಗಳಿವೆ. ಯಾವ ವಸ್ತುವಿನ ಕಳವಾದರೂ ಪತ್ತೆ ಮಾಡು ವರು. ಕಳ್ಳನ ಹೆಸರನ್ನೂ ಹೇಳಬಲ್ಲರು. ರಾಯರ ದನವೊಂದು ಮೊನ್ನೆ ಕಳೆದು ಹೋಯಿತು. ಮೂರು ದಿನಗಳ ತನಕ ಎಷ್ಟು ಹುಡುಕಿದರೂ ಸಿಗಲಿಲ್ಲ. ಕೊನೆಗೆ ಶಾಸ್ತ್ರಿಗಳನ್ನು ಬಂದು ಕೇಳಿದಾಗ, ಅವರು ಹೇಳಿದ ಸ್ಥಳ ದಲ್ಲೇ ದನವು ಸಿಕ್ಕಿತು. ಭೂತದ ಪ್ರಭಾವ ದಿಂದ ಅವರಿಗೆ ಏನೆಲ್ಲಾ ತಿಳಿಯುವುದು!"

ಶಾಸ್ತ್ರಿಗಳು ಶ್ರೀಮಂತರಾದುದು ಯಾವ ಕಾರಣದಿಂದ? ಎಂಬುದು ಈಗ ಎಲ್ಲರ ಮನ ಸ್ಸಿಗೂ ಹೊಳೆಯಿತು.

ಇನ್ನೂ ಮುಂದೆ ಹೋದರು. ಇದು ಪೋಲೀಸು ಠಾಣ್ಯ. ಪೋಲೀಸರನ್ನು ಕುರಿತು ವಿಮರ್ಶೆ ನಡೆಯಿತು.

ಅಗಲೇ ತೇರು ಹೊರಟಿತ್ತು. ಸಾವಿ ರಾರು ಜನರ ಬಾಯಿಯಿಂದ "ಗೋವಿಂದಾ ಗೋವಿಂದ" ಎಂಬ ಸ್ವರವು ದಿಕ್ಕುದಿಕ್ಕುಗಳಲ್ಲಿ ಹಬ್ಬಿ ಪ್ರತಿಧ್ವನಿಸುತ್ತಿತ್ತು. ಜನರೆಲ್ಲರೂ ತಲೆಬಾಗಿ ದೇವರಿಗೆ ನಮಸ್ಕರಿಸುತ್ತಿದ್ದರು. ಎಷ್ಟು ಸಂತೋಷದಾಯಕ ದೃಶ್ಯವದು. ಮಕ್ಕಳೆಲ್ಲರೂ ಉತ್ಸವದಲ್ಲಿ ತಲ್ಲೀನರಾದರು.

× × ×

ಉತ್ಸವ ಮುಗಿಯಿತು. ಎಲ್ಲರೂ ತಮ್ಮ ತಮ್ಮ ಮನೆಗಳಿಗೆ ಹೋಗುವುದಕ್ಕೆ ಮುಂಚೆ ತಮಗೆ ಬೇಕಾದ ಸಾಮಾನುಗಳನ್ನು ಕೊಂಡು ಕೊಳ್ಳುತ್ತಿದ್ದರು. ಮಕ್ಕಳ ಮನಸ್ಸು ತಿಂಡಿ ಮತ್ತು ಆಟದ ಸಾಮಾನುಗಳ ಮೇಲೆ ಹರಿ ದಿದೆ. ತರತರದ ಆಟದ ಸಾಮಾನುಗಳಿವೆ- ಸೈನಿಕ, ರಾಜ, ಅಗಸ, ವಕೀಲ, ಸಾಧು, ಗೊಲ್ಲಗಿತ್ತಿ, ತರತರದ ಬೊಂಬೆಗಳು. ಗೋಪಾ ಲನು ಶಿಪಾಯಿಯನ್ನು ಕೊಂಡುಕೊಂಡ. ಖಾಕಿ ಬಟ್ಟೆಯನ್ನು ಧರಿಸಿ ಕೆಂಪು ರುಮಾಲನ್ನು ಸುತ್ತಿ ಭುಜದ ಮೇಲೆ ಕೋವಿ ಇಟ್ಟಿರುವು ದನ್ನು ನೋಡಿದರೆ ಈಗ ತಾನೇ ಕಸರತ್ತು ಮಾಡಿ ಬಂದಂತಿದೆ. ಸೈನಿಕನಂತೆಯೇ ಇದೆ. ಮೋಹನ ಮುದುಕಿಯ ಬೊಂಬೆಯನ್ನು ಖರೀದಿ ಮಾಡಿದ. ಅದು ನೋಟಕ್ಕೆಷ್ಟು ಸೊಗ ಸಾಗಿದೆ! ಬಾಗಿದ ನಡು, ತಲೆಯ ಮೇಲೆ ನೀರಿನ ಪಾತ್ರೆ. ಪಾತ್ರೆಯನ್ನು ಒಂದು ಕೈಯಲ್ಲಿ ಹಿಡಿದು, ಏನೋ ಹಾಡುತ್ತಿರುವಳೋ ಎಂಬಂ ತಿದೆ. ರಂಗನಿಗೆ ವಕೀಲ ಚೆನ್ನಾಗಿ ತೋರಿತು. ಅವನ ಮುಖದ ಕಾಂತಿ, ಕಪ್ಪು ನಿಲುವಂಗಿ, ಬಿಳಿಯ ಗುಂಡಿ. ಅದಕ್ಕೆ ಸಿಕ್ಕಿಸಿರುವ ಕಿಸೆ ಗಡಿಯಾರದ ಸರಪಣಿ, ಇವೆಲ್ಲಾ ಯಾರನ್ನು ಆಕರ್ಷಿಸವು? ಎಲ್ಲವೂ ಎರಡೆರಡು ಬಿಲ್ಲೆಗಳ ಆಟದ ಗೊಂಬೆಗಳು. ಶೇಖರನಹತ್ತಿರ ಕೇವಲ ಮೂರು ಬಿಲ್ಲೆಗಳಿವೆ. ಅವನು ಈ ಗೊಂಬೆ ಗಳನ್ನು ಕೊಂಡುಕೊಳ್ಳುವನೇ? ಕೈಯಿಂದ ತಪ್ಪಿ ಬಿದ್ದಿತೆಂದರೆ ಚೂರು. ಒಂದು ಬೊಟ್ಟು ನೀರು ಬಿತ್ತೆಂದರೆ ಬಣ್ಣ ಮಾಸುವುದು. ಇಂತಹ ಒಗನೆಗಳಿಂದ ಏನು ಪ್ರಯೋಜನ ಎಂದು ಅವನ ಆಲೋಚನೆ.

ಆಟದ ಸಾಮಾನಿನ ಅಂಗಡಿಗಳ ನಂತರ ತಿಂಡಿ ತಿನಿಸಿನಂಗಡಿ ಕಾಣಿಸಿತು. ಒಬ್ಬೊ ಬ್ಬರು ಒಂದೊಂದು ತಿಂಡಿಯನ್ನು ಕೊಂಡು ಕೊಂಡರು. ಆದರೆ ಶೇಖರ ಏನೂ ಕೊಳ್ಳ ಲಿಲ್ಲ. ಅವನ ಆಲೋಚನೆ ಎಂಥದೋ! ಯಾರಿಗೆ ಗೊತ್ತು?

ಮೋಹನ: "ಶೇಖರ.. ಇಗೋ ಈ ಹಲ್ವಾ ತೆಗೆದುಕೋ, ಪಾಪ! ಮಧ್ಯಾಹ್ನವಾಯಿತು, ಎಷ್ಟು ಹಸಿವೆಯಾದೆಯೋ, ನಿನಗೆ. ತಿನ್ನು ತಿನ್ನು."

ಶೇಖರನಿಗೆ ಸಂದೇಹವಾಯಿತು; ಇವನು ವಿನೋದಕ್ಕಾಗಿ ಹೇಳುವನೆಂದು. ಅದರೂ ಹುಡುಗನ ಆಸೆ. ಆದೂ ತಿಂಡಿಯ ಮೇಲಿನ ಆಸೆ. ಅವನು ಮುಂದೆ ಹೋಗಿ ಕೈಚಾಚಿದ ಮೋಹನನು ಒಂದು ಚೂರು ಹಲ್ವ ತೆಗೆದು ಅವನಿಗೆ ತೋರಿಸಿ ತಾನೇ ತಿಂದು ಮೇಲಕ್ಕೆ ಕೈತೋರಿಸಿದ. ಎಲ್ಲ ಹುಡುಗರೂ ನಕ್ಕರು. ಶೇಖರನ ಮುಖ ಚಿಕ್ಕದಾಯಿತು.

ಮೋಹನ:- "ತಪ್ಪಾಯಿತು. ಈಗ ಖಂಡಿತ ಕೊಡುವೆನು. ಬಾ, ಕೊಂಡು ಹೋಗು."

ಶೇಖರ:- "ನನ್ನ ಹತ್ತಿರ ಬಿಲ್ಲೆಗಳಿಲ್ಲ ವೆಂದೇ ತಿಳಿದೆಯೋ"?

ರಂಗ:- "ಇರುವುದಾದರೂ ಮೂರು ಬಿಲ್ಲೆ ತಾನೆ? ಅದರಿಂದ ಏನು ಕೊಂಡುಕೊಳ್ಳ ಬಹುದು?"

× × ×

ಮುಂದುವರಿಯುತ್ತಿದ್ದಂತೆ ಕಬ್ಬಿಣದ ಅಂಗ ಡಿಗಳು ಕಾಣಿಸಿಕ್ಕೊಂಡವು. ಹುಡುಗರಿಗೆ ಇದು ಬೇಡವಾಗಿತ್ತು. ಅವರೆಲ್ಲ ಮುಂದೆ ಮುಂದೆ ಹೋಗುತ್ತಿದ್ದರು. ಆದರೆ ಶೇಖರ ಅಲ್ಲಿಯೆ ನಿಲ್ಲುತಿದ್ದ. ಕೆಲವು ಅಂಗಡಿಗಳಲ್ಲಿ ತುಂಬ ಚಿಮುಟಿಗಳಿದ್ದವು. ಮನೆಯಲ್ಲಿ ಒಲೆಯಿಂದ ಪಾತ್ರೆಗಳನ್ನು ಕೆಳಕ್ಕಿಳಿಸುವಾಗ ಅಜ್ಜಿಯ ಕೈಗೆ ಹಲವು ಬಾರಿ ಬೆಂಕಿ ತಗಲಿದ್ದುದನ್ನು ಅವನು ಕಂಡಿದ್ದ. ಇದನ್ನು ಕೊಂಡುಹೋದರೆ ಅವಳಿಗೆಷ್ಟು ಸಂತೋಷವಾದೀತು! ಎಂದು ಅವನ ಎಣಿಕೆ, ಅಂಗಡಿಯ ಮಾಲಕನೊಡನೆ ಅದರ ಬೆಲೆ ವಿಚಾರಿಸತೊಡಗಿದ.

"ಈ ಚಿಮುಟಿಯ ಬೆಲೆಯೇನು?" ಅಂಗ ಡಿಯವಮಾಲಿಕನು ಅವನ ಕಡೆನೋಡಿದ. ಯಾರೂ ಹತ್ತಿರವಿಲ್ಲದಿದ್ದುದನ್ನು ಕಂಡು,

"ಅದರಿಂದ ನಿನಗೇನುಪಯೋಗವಯ್ಯಾ?"

"ಇದು ಮಾರಾಟದ್ದಷ್ಟೆ?"

"ಮಾರಾಟದ್ದಲ್ಲವಾದರೆ ಇಲ್ಲಿ ಏಕೆ ಇಡು ತ್ತೇವೆ?"

"ಹಾಗಾದರೆ ಅದರ ಬೆಲೆ ಹೇಳಬಾರದೇ?"

"ಆರು ಬಿಲ್ಲೆ ಬಿದ್ದೀತು."

ಶೇಖರ ನಿರುತ್ತರನಾದ.

ಕೊನೆಗೆ "ಮೂರು ಬಿಲ್ಲೆಗಳಿಗೆ ಸಿಗ ಲಾರದೇ?" ಎಂದ.

ಮಾಲಕನು ಅವನ ಸರಳ ಸ್ವಭಾವವನ್ನು ಕಂಡು ಮೂರು ಬಿಲ್ಲೆಗೇ ಚಿಮುಟಿಯನ್ನು ಕೊಟ್ಟನು. ಅದನ್ನು ಸಂತೋಷದಿಂದ ಸ್ನೇಹಿ ತರಿಗೆ ತೋರಿಸುತ್ತಾ ನಿಮ್ಮೆಲ್ಲರ ಆಟಿಗೆಗಳನ್ನೂ ಇದು ಹೊಡೆದು ಹಾಕುವುದು; ಎಂದು ಅದನ್ನು ನೆಲದ ಮೇಲೆ ಎಸೆದು ಅದರ ಶಕ್ತಿ ಪ್ರದರ್ಶನ ಮಾಡಿದನು. ಎಲ್ಲರಿಗೂ ಹೊಟ್ಟೆಯುರಿ ಮತ್ತು ಆಶ್ಚರ್ಯ. ಕಾರಣ ಅವರೆಲ್ಲರೂ ನಾಲ್ಕೈ ದಾಣೆ ಖರ್ಚು ಮಾಡಿದರೂ ಉಪಯೋಗಕ್ಕೆ ಬೀಳುವ ವಸ್ತುವನ್ನು ಕೊಂಡಿರಲಿಲ್ಲ.

× × ×

ಹೊರಗಿನಿಂದ ಅವನ ಸ್ವರ ಕೇಳುತ್ತಲೇ ಮುದುಕಿ ಓಡಿ ಬಂದು ಅವನನ್ನು ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಮುದ್ದಾಡಿದಳು. ಅವನ ಕೈಯಲ್ಲಿರುವ ಚಿಮುಟಿಯನ್ನು ಕಂಡು ಆಶ್ಚರ್ಯ ಹೊಂದಿದಳು.

"ಈ ಚಿಮುಟಿ ಎಲ್ಲಿತ್ತು ಮಗೂ?"

"ನಾನು ಉತ್ಸವದಲ್ಲಿ ಕೊಂಡುಕೊಂಡೆ."

"ಅದರ ಬೆಲೆ?"

"ಮೂರು ಬಿಲ್ಲೆ."

"ಅಯ್ಯೋ ಎಂತಹ ತಿಳಿಗೇಡಿತನ? ಇಷ್ಟು ಮಧ್ಯಾಹ್ನವಾಗಿದೆ. ಏನೂ ಕುಡಿಯದೆ, ತಿನ್ನದೆ, ಇದನ್ನು ತಂದೆಯಲ್ಲಾ? ಅಹಾ! ಏನ ನರ್ಥ!"

ಶೇಖರ ಅಪರಾಧಿಯಂತೆ ಹೇಳಿದ:— "ಅಮ್ಮಾ, ಒಲೆಯಿಂದ ಪಾತ್ರೆಗಳನ್ನು ಕೆಳಕ್ಕಿ ಳಿಸುವಾಗ ನಿನ್ನ ಕೈಗೆ ಬೆಂಕಿ ತಗಲುತಿದ್ದುದನ್ನು ಕಂಡಿದ್ದೆ. ಅದಕ್ಕಾಗಿ ತಂದೆ. ಬೇಸರವೇ?"

ಮುದುಕಿಯ ಕ್ರೋಧ ಪ್ರೀತಿಗೆ ಮಾರ್ಪ ಟ್ಟಿತು. ಅವಳ ಕಣ್ಣಿನಿಂದ ಆನಂದಾಶ್ರುಗಳು ಉದುರುತ್ತಿದ್ದುವು. ಅವಳು ಮೂಕಿಯಂತೆ ಧ್ದಳು.

(ಹಿಂದೀ ಕತೆಯನ್ನಾಧರಿಸಿ ಬರೆದುದು)

ಬಲವಂತದ ಮಾಘಸ್ನಾನ!

ರಂಜಾನ್ ತಿಂಗಳಲ್ಲಿ ಉಪವಾಸ ಮಾಡದೆ ಇರುವ ಮುಸ್ಲಿಮರಿಗೆ ಶಿಕ್ಷೆಕೊಡಬೇಕೆಂದು ಮಲಯದ ಒಂದು ಸಂಸ್ಥಾನದ ಸುಲ್ತಾನರು ಒಂದು ಆಜ್ಞೆ ಹೊರಡಿಸಿದ್ದಾರೆ.

ಕರ್ನಾಟಕ ವಿಶ್ವವಿದ್ಯಾಲಯದ ಕಾರ್ಯಾರಂಭ

ಕಾಂಗ್ರೆಸ ಸಮಿತಿಗಳು ಮಂತ್ರಿಮಂಡಲ ವಿರುದ್ಧ ಅವಿಶ್ವಾಸ ವ್ಯಕ್ತಪಡಿಸವು; ಕಾಂ. ಕಾರ್ಯಸಮಿತಿಯ ಆದೇಶ; ರಾಷ್ಟ್ರೀಯ ಸ್ವಯಂಸೇವಕ ಸಂಘದ ಹೊಣೆ

ಕರ್ನಾಟಕ ವಿಶ್ವವಿದ್ಯಾಲಯ

ಕರ್ನಾಟಕ ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿ ನೇಮಿಸಲ್ಪಟ್ಟ ಪ್ರೊ. ಜಾಗಿರದಾರ ರಂಗಾಚಾರ್ಯರು ಕಳೆದ ೧೮ ನೇ ತಾರೀಕಿನ ದಿವಸ ಅಧಿಕಾರ ಸ್ವೀಕರಿಸಿರುವರು. ಅವರು ಎರಡು ತಿಂಗಳ ಕಾಲ ಮುಂಬಯಿಯಲ್ಲಿ ಇದ್ದು ವಿಶ್ವವಿದ್ಯಾಲಯ ಆಡಳಿತದ ಅನುಭವವನ್ನು ಪಡೆಯಲಿರುವದರಿಂದ ಸಪ್ಟಂಬರ ವರೆಗೆ ಮುಂಬಯಿಯಲ್ಲಿಯೇ ಅವರ ಕಚೇರಿಯು ಉಳಿಯುವದು. ಮುಂಬಯಿ ಕೌನ್ಸಹಾಲಿನಲ್ಲಿ ಸದ್ಯಕ್ಕೆ ಕರ್ನಾಟಕ ವಿಶ್ವವಿದ್ಯಾಲಯದ ಕಚೇರಿಯು ನಡೆದಿದೆ. ಧಾರವಾಡ ಸಪ್ತಾಪುರದಲ್ಲಿ ಛೋಟಾ ಮಹಾಬಳೇಶ್ವರವೆಂದು ಖ್ಯಾತಿ ಪಡೆದ ೧೦೦ ಎಕರೆ ಭೂಮಿಯನ್ನು ಸರಕಾರದವರು ಈ ವಿಶ್ವವಿದ್ಯಾಲಯಕ್ಕಾಗಿ ಕೊಟ್ಟಿದ್ದು ಅಲ್ಲಿ ಕಟ್ಟಡಗಳ ಕಟ್ಟೋಣವು ಬೇಗನೆ ಪ್ರಾರಂಭವಾಗುವದು. ಸದ್ಯಕ್ಕೆ ವಿಶ್ವವಿದ್ಯಾಲಯದ ಕಚೇರಿ ಮತ್ತು ಭೋಜನಾಲಯಗಳ ಕಟ್ಟಡಗಳನ್ನು ಮಾತ್ರ ಕಟ್ಟಿಸುತ್ತಿದ್ದು ಉಳಿದವುಗಳನ್ನು ಕ್ರಮಶಃ ಕಟ್ಟಲಾಗುವದು. ೧೯೫೦ ನೇ ಇಸ್ವಿಯ ಮಾರ್ಚ ಎಪ್ರಿಲಗಳಲ್ಲಿ ನಡೆಯುವ ಎಲ್ಲ ಪರೀಕ್ಷೆಗಳು ಕರ್ನಾಟಕ ವಿಶ್ವವಿದ್ಯಾಲಯದ ಪರವಾಗಿಯೆ ನಡೆಯುವವು. ೧೯೫೦ ನೇ ಜೂನಕ್ಕೆ ವಿಶ್ವವಿದ್ಯಾಲಯದ ಪರವಾಗಿ ಒಂದಾದರೂ ಸ್ನಾತಕೋತ್ತರ ವಿಷಯದ ಅಭ್ಯಾಸವನ್ನು ಪ್ರಾರಂಭಿಸಬೇಕೆಂಬ ವಿಚಾರ ತಮ್ಮದಿದೆಯೆಂದು ಉಪಕುಲಗುರುಗಳು ಒಂದು ಸಂದರ್ಶನದಲ್ಲಿ ಹೇಳಿರುವರು. ಮುಂದಿನ ವರುಷದಿಂದ ಹೊಸ ವಿಶ್ವವಿದ್ಯಾಲಯದ ಅಭ್ಯಾಸಕ್ರಮವನ್ನು ಪ್ರಾರಂಭಿಸಲು ಶ್ರೀ ಜಾಗಿರದಾರರು ಆತುರರಾಗಿರುವರು. ಶ್ರೀ. ಡಿ. ಪಿ. ಪತ್ರಾವಳಿಯವರು ರಜಿಸ್ಟ್ರಾರರಾಗಿ ನೇಮಕ ಹೊಂದಿದ್ದು ಹದಿನೈದು ಜನರ ಸಹಾಯಕ ಸಮಿತಿಯನ್ನೂ ನೇಮಿಸಲಾಗಿದೆ. ವಿಶ್ವವಿದ್ಯಾಲಯಕ್ಕೆ ಸಂಬಂಧಪಟ್ಟ ಕಾಯದೆ ನಿಯಮ ನಿಬಂಧನೆಗಳಿಗೆ ಈ ಸಮಿತಿಯ ಒಪ್ಪಿಗೆ ಬೇಕಾಗುವದು. ಇದೆಲ್ಲ ನಡೆದ ಅನಂತರ ಸಿನೇಟ, ಸಿಂಡಿಕೇಟ ಮತ್ತು ಅಕ್ಯಾಡೆಮಿ ಕೌನ್ಸಿಲ್ಲುಗಳ ಆಯ್ಕೆ ನಡೆಯುವದು. ಉಪಕುಲಗುರುಗಳ ನೇಮಕವಾದ ಅನಂತರ ಆರು ತಿಂಗಳಲ್ಲಿಯೆ ಇದೆಲ್ಲ ಆಗಬೇಕಾದ್ದರಿಂದ ಕೆಲಸ ಭರದಿಂದ ಸಾಗಬೇಕಾಗಿದೆ. ಮೆಡಿಕಲ್ ಕಾಲೇಜೊಂದನ್ನು ಉಳಿದು ಎಲ್ಲ ಕಾಲೇಜುಗಳು ಈಗ ಈ ವಿಶ್ವವಿದ್ಯಾಲಯದ ಕಕ್ಷೆಯಲ್ಲಿ ಬರುವವು. ಮುಂದಿನ ವರುಷ ಆ ಕಾಲೇಜನ್ನು ಸರಕಾರವು ಸ್ಥಾಪಿಸಲಿದೆಯೆಂದು ತಿಳಿಯುತ್ತದೆ. ಶ್ರೀ ಜಾಗಿರದಾರರು ಎರಡು ವರ್ಷಗಳ ಮಟ್ಟಿಗೆ ಉಪಕುಲಗುರುಗಳಾಗಿ ನೇಮಕಹೊಂದಿದ್ದಾರೆ. ಅವರು ಇದೇ ೨೬ ನೇ ತಾರೀಕಿನ ದಿವಸ ಶ್ರೀ ಪತ್ರಾವಳಿಯವರನ್ನೊಳಗೊಂಡು ತಮ್ಮ ಕರ್ನಾಟಕ ಸಂಚಾರ ಕಾರ್ಯವನ್ನು ಪ್ರಾರಂಭಿಸುವರು. ಧಾರವಾಡ ಬೆಳಗಾವಿ ಕಾರವಾರ ಮತ್ತು ವಿಜಾಪುರ ಜಿಲ್ಲೆಗಳಲ್ಲಿ ಅವರು ಸಂಚರಿಸಿ ವಿಶ್ವವಿದ್ಯಾಲಯದ ಸರಿಯಾದ ಕಲ್ಪನೆಯನ್ನು ಶಿಕ್ಷಣ ತಜ್ಞರಿಗೆ ಮಾಡಿಕೊಟ್ಟು ವಿಶ್ವವಿದ್ಯಾಲಯಕ್ಕಾಗಿ ನಿಧಿ ಸಂಗ್ರಹದ ಕಾರ್ಯವನ್ನು ನಡೆಸುವರು. ಅವರು ೧೦ ದಿನ ಈ ಸಂಚಾರ ಮಾಡಿ ಮರಳಿ ಮುಂಬಯಿಗೆ ಬರುವಾಗ ಪುಣೆಯಲ್ಲಿ ಇಳಿದು ಮಹಾರಾಷ್ಟ್ರ ವಿಶ್ವವಿದ್ಯಾಲಯದ ಕಾರ್ಯಕಲಾಪಗಳನ್ನು ಪರಿಶೀಲಿಸುವರೆಂದು ತಿಳಿಯುತ್ತದೆ.

ಕಾಂಗ್ರೆಸ ಕಾರ್ಯಸಮಿತಿ

ಮೊದಲು ನಿರ್ಧರಿಸಿದಂತೆ ಕಾಂಗ್ರೆಸ ಕಾರ್ಯಸಮಿತಿಯ ಸಭೆಯು ಸರದಾರ ಪಟೇಲರ ನಿವಾಸ ಸ್ಥಾನದಲ್ಲಿ ಹೊಸದಿಲ್ಲಿಯಲ್ಲಿ ೧೬ ನೇ ತಾರೀಕು ಸಾಯಂಕಾಲದಿಂದ ಪ್ರಾರಂಭವಾಗಿ ೧೭ ರ ವರೆಗೆ ಕಾರ್ಯ ನಡೆದು ೨೭ ಕ್ಕೆ ಮುಂದೂಡಲಾಯಿತು. ಕಾಂಗ್ರೆಸ ಅಧ್ಯಕ್ಷರಾದ ಡಾ. ಪಟ್ಟಾಭಿ ಸೀತಾರಾಮಯ್ಯನವರು ಗೈರುಹಾಜರಿಯಿದ್ದುದರಿಂದ ಸರದಾರ ಪಟೇಲರ ಅಧ್ಯಕ್ಷತೆಯಲ್ಲಿಯೆ ಕಾರ್ಯಕಲಾಪಗಳು ನಡೆದವು. ಮೊದಲನೇ ದಿನ ಪಶ್ಚಿಮ ಬಂಗಾಲ ಪರಿಸ್ಥಿತಿಯ ಬಗ್ಗೆ ಚರ್ಚೆ ನಡೆಯಿತು. ಕಾಂಗ್ರೆಸ ಕಾರ್ಯದರ್ಶಿಗಳಾದ ಶ್ರೀ ಕಳಾ ವೆಂಕಟರಾಯರ ಮತ್ತು ಮುಖ್ಯ ಮಂತ್ರಿ ಪಂಡಿತ ಜವಾಹರಲಾಲ ನೆಹರುಗಳ ವರದಿಗಳು ಈ ಚರ್ಚೆಯ ಹಿನ್ನೆಲೆಯಾಗಿದ್ದವೆಂದು ತಿಳಿಯುತ್ತದೆ. ಇಂದು ಮೂರು ಗಂಟೆಗಳ ಕಾಲ ಚರ್ಚೆ ನಡೆದು ಮರು ದಿನಕ್ಕೆ ಮತ್ತೆ ಮುಂದರಿಸಲಾಯಿತು. ಪಶ್ಚಿಮ ಬಂಗಾಲದಲ್ಲಿ ಸಾಧ್ಯವಿದ್ದಷ್ಟು ಬೇಗ ಚುನಾವಣೆಗಳನ್ನು ನಡೆಸಬೇಕು. ಕಾಂಗ್ರೆಸ ಸಂಸ್ಥೆಯಲ್ಲಿಯ ಬೇರೆ ಬೇರೆ ಗುಂಪುಗಳನ್ನೊಳಗೊಂಡು ಮಂತ್ರಿಮಂಡಳವನ್ನು ರಚಿಸಬೇಕು. ಮತ್ತು ಪ್ರಾಂತಿಕ ಕಾಂಗ್ರೆಸ ಸಮಿತಿಗಳು ಸರಕಾರದ ಮೇಲೆ ಪ್ರಭಾವವನ್ನು ಬೀರುವಂತೆ ಅವುಗಳ ಪುನರ್ಘಟನೆಯಾಗಬೇಕು ಈ ಉಪಾಯಗಳು ಸೂಚಿತವಾಗಿವೆಯೆಂದು ತಿಳಿಯುತ್ತದೆ. ಸಾಧಕ ಬಾಧಕ ವಿಚಾರ ನಡೆದರೂ ಪ್ರಾಂತೀಯ ಮುಖ್ಯ ಮಂತ್ರಿಗಳ ಅಭಿಪ್ರಾಯವನ್ನು ತಿಳಿದುಕೊಳ್ಳದೆ ಅದನ್ನು ನಿರ್ಣಯಿಸಬಾರದೆಂದು ಬಗೆದು ನಿರ್ಣಯವನ್ನು ೨೭ ಕ್ಕೆ ಮಾಡಬೇಕೆಂದು ಗೊತ್ತಾಗಿದೆ. ಅದೇ ರೀತಿಯಾಗಿ ಮದರಾಸ ಮಂತ್ರಿಮಂಡಲದಲ್ಲಿಯ ತಿಕ್ಕಾಟದ ಬಗ್ಗೆಯೂ ಚರ್ಚೆಯಾಗಿ ಮುಖ್ಯ ಮಂತ್ರಿಗಳ ಅಭಿಪ್ರಾಯವನ್ನು ತಿಳಿದುಕೊಂಡು ಅನಂತರವೆ ನಿರ್ಣಯ ಕೈಕೊಳ್ಳಬೇಕೆಂದು ಅದನ್ನೂ ೨೭ ಕ್ಕೆ ಮುಂಬರಿಸಲಾಯಿತು. ಹದಿನೆಂಟನೆಯ ತಾ. ಕಾಂಗ್ರೆಸ ಸರಕಾರ ಮತ್ತು ಕಾಂಗ್ರೆಸ ಸಮಿತಿಗಳಲ್ಲಿ ಇರತಕ್ಕ ಸಂಬಂಧದ ಬಗ್ಗೆ ಚರ್ಚೆ ನಡೆದು ಪ್ರಾಂತಿಕ ಕಾಂಗ್ರೆಸ ಸಮಿತಿಗಳು ಕಾಂಗ್ರೆಸ ಮಂತ್ರಿಮಂಡಲಗಳ ವಿರುದ್ಧ ಅವಿಶ್ವಾಸ ಗೊತ್ತುವಳಿಗಳನ್ನು ಪಾಸು ಮಾಡತಕ್ಕದ್ದಲ್ಲೆಂಬ ಗೊತ್ತುವಳಿಯನ್ನು ಸ್ವೀಕರಿಸಲಾಯಿತು. ಅಲ್ಲದೆ ಕಾಂಗ್ರೆಸ ಮಂತ್ರಿಮಂಡಲಗಳ ಬಗೆಗೆ ಏನಾದರೂ ದೂರುಗಳಿದ್ದರೆ ಅವುಗಳನ್ನು ಕಾಂಗ್ರೆಸ್ಸಿನ ಕೇಂದ್ರ ಪಾರ್ಲಮೆಂಟರಿ ಬೋರ್ಡ ಇಲ್ಲವೆ ಕಾಂಗ್ರೆಸ ಕಾರ್ಯ ಸಮಿತಿಗೆ ತಿಳಿಸಬೇಕೆಂದೂ ಆ ಗೊತ್ತುವಳಿಯ ಮೂಲಕ ಸೂಚಿಸಲಾಯಿತು. ರಾಜಸ್ಥಾನ ಪ್ರಾಂತೀಯ ಕಾಂಗ್ರೆಸ ಸಮಿತಿಯು ಪಂ. ಹಿರಾಲಾಲ ಶಾಸ್ತ್ರಿಯವರ ನಡುಗಾಲ ಸರಕಾರದ ವಿರುದ್ಧ ಅವಿಶ್ವಾಸ ಗೊತ್ತುವಳಿಯನ್ನು ಸ್ವೀಕರಿಸುವಲ್ಲಿ ತನ್ನ ಅಧಿಕಾರ ಮೀರಿ ಹೋಗಿರುತ್ತದೆ. ಈ ಪ್ರಕಾರ ಅವಿಶ್ವಾಸದ ಗೊತ್ತುವಳಿ ಸ್ವೀಕರಿಸಿದ್ದು ಕ್ರಮಬದ್ಧವಲ್ಲ ಎಂದು ಮುಂತಾಗಿ ಮತ್ತೊಂದು ಗೊತ್ತುವಳಿಯನ್ನು ಕಾರ್ಯ ಸಮಿತಿಯು ಸ್ವೀಕರಿಸಿತು. ಕಾರ್ಯ ಸಮಿತಿಯ ಸದಸ್ಯರೂ ರಾಜಸ್ಥಾನ ಪ್ರಾಂತೀಯ ಕಾಂಗ್ರೆಸ ಸಮಿತಿಯ ಅಧ್ಯಕ್ಷರೂ ಆಗಿದ್ದ ಗೋಕುಲಭಾಯಿ ಬಟ್ಟರಲ್ಲಿ ಅವಿಶ್ವಾಸ ವ್ಯಕ್ತಪಡಿಸಿದ್ದನ್ನು ಕಾರ್ಯ ಸಮಿತಿಯು ಒಪ್ಪುವದಿಲ್ಲೆಂದು ಸೂಚಿಸಲಾಯಿತು. ಪತಿಯಾಳಾ ಮತ್ತು ಪೂರ್ವ ಪಂಜಾಬ ಸಂಸ್ಥಾನಗಳ ಒಕ್ಕೂಟದಲ್ಲಿ ಕಾಯದೆ ಮಂಡಲಗಳು ಇಲ್ಲದ್ದರಿಂದ ಅಲ್ಲಿಯ ನಡುಗಾಲ ಸರಕಾರವು ಸಂಸ್ಥಾನ ಶಾಖೆಯ ಮಾರ್ಗದರ್ಶನದಲ್ಲಿ ಕಾರ್ಯ ಮಾಡುತ್ತಿರುವದು ಉಚಿತವೆಂದು ಮನ್ನಿಸಲಾಯಿತು. ಒಕ್ಕಲತನ ಸುಧಾರಣಾ ಸಮಿತಿಯ ವರದಿಯ ಬಗ್ಗೆ ನಿರ್ಣಯ ಕೈಕೊಳ್ಳುವ ಮೊದಲು ಪರಿಶೀಲನೆಗಾಗಿ ಅದನ್ನು ಸದಸ್ಯರಿಗೆ ಕಳಿಸಿ ಕೊಡಬೇಕೆಂದು ನಿರ್ಣಯಿಸಲಾಯಿತು. ಈ ಪ್ರಕಾರ ಮಹತ್ವದ ಗೊತ್ತುವಳಿಗಳನ್ನು ಸ್ವೀಕರಿಸಿ ಸಭೆಯು ೨೭ ಕ್ಕೆ ಮುಂಬರಿಯಿತು.

ಹಿಂದುಸ್ತಾನದ ರೇಲ್ವೆಗಳು

ಹಿಂದುಸ್ತಾನದಲ್ಲಿಯ ರೇಲ್ವೆಗಳ ಅವ್ಯವಸ್ಥೆಯ ಬಗ್ಗೆ ಇತ್ತೀಚೆ ಅನೇಕ ದೂರುಗಳು ಕೇಳಬರುತ್ತವೆ. ರೇಲ್ವೆಗಳಲ್ಲಿ ಪ್ರವಾಸ ಮಾಡುತ್ತಿರುವವರಿಗೆ ಈ ಸಂಕಷ್ಟಗಳ ಕಟು ಅನುಭವವೂ ಬಂದುದುಂಟು. ಈ ಅವ್ಯವಸ್ಥೆಗೆ ಕಾರಣಗಳೇನು, ಅದನ್ನು ಸರಿಪಡಿಸುವದೆಂತು ಮುಂತಾಗಿ ವಿಚಾರಿಸುವ ಸಮಯವೀಗ ಬಂದಿದೆಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ. ಜಾಗತಿಕ ಬ್ಯಾಂಕಿನ ರೇಲ್ವೆ ತಜ್ಞರಾದ ರಾಯನ್ಸ್‌ರು ಕಳೆದ ಜನೆವರಿಯಲ್ಲಿ ಹಿಂದುಸ್ತಾನದಲ್ಲೆಲ್ಲ ಸಂಚರಿಸಿ ರೇಲ್ವೆ ಆಡಳಿತೆಯಲ್ಲಿಯ ಅವ್ಯವಸ್ಥೆಯ ಬಗ್ಗೆ ತಮ್ಮ ಅನುಭವಗಳನ್ನು ಪ್ರಸಿದ್ಧಿಸಿರುವರು. ಹಿಂದುಸ್ತಾನದ ರೇಲ್ವೆಗಳು ಸಾರಿಗೆಯ ಕಾರ್ಯವನ್ನು ನಿರ್ವಹಿಸಲು ಅಸಮರ್ಥವಾಗಿರುವವು. ಇದರಿಂದ ಹಿಂದುಸ್ತಾನದ ಆರ್ಥಿಕ ಪರಿಸ್ಥಿತಿಯ ಮೇಲೆ ತೀರ ಅನಿಷ್ಟ ಪರಿಣಾಮಗಳಾಗುವವು. ರೇಲ್ವೆ ಅಧಿಕಾರಿಗಳು ಇತ್ತ ಗಮನಿಸದೆ ರಾಷ್ಟ್ರ ವಿಭಜನೆ ಮತ್ತು ಯುದ್ಧ ಮೂಲಕ ಈ ಪರಿಸ್ಥಿತಿ ಬಂದಿದೆಯೆಂದು ಹೇಳುತ್ತಿರುವದು ಕೇವಲ ಅತ್ಮಸಮರ್ಥನೆಯ ಪೌರುಷದ ಮಾತು. ರೇಲ್ವೆ ಎಂಜಿನುಗಳ ಉಪಯೋಗವನ್ನು ಪೂರ್ಣ ಮಾಡಲಾಗುವದಿಲ್ಲ. ದುರಸ್ತಿಗಾಗಿ ಬಂದ ಎಂಜಿನುಗಳು ಕೂಡಲೆ ದುರಸ್ತಿ ಆಗಿ ಕೆಲಸಕ್ಕೆ ಹೋಗುವಂತೆ ನೋಡಿಕೊಳ್ಳುವದು ಅವಶ್ಯವಾಗಿದೆ. ಸಕಾಲದಲ್ಲಿ ದುರಸ್ತು ಆಗದಿದ್ದುದಕ್ಕಾಗಿ ೧೦೦ ಕ್ಕೆ ೬ ರಷ್ಟು ಎಂಜಿನುಗಳು ವ್ಯರ್ಥ ವರ್ಕಶಾಪಿನಲ್ಲಿ ನಿಂತಂತಾಗುವದು. ಇದೆಲ್ಲ ಸರಿಪಟ್ಟು ಸಕಾಲಕ್ಕೆ ಎಂಜಿನುಗಳು ದುರಸ್ತಿ ಆಗಿ ಹೋಗುವಂತೆ ನೋಡಿಕೊಳ್ಳಬೇಕು. ಕಾಗದ ಕುದುರೆಗಳ ಓಡಾಟ ವಿಶೇಷ ನಡೆಯುತ್ತಿರುವದನ್ನು ರಾಯನ್ಸ್‌ರು ದೂರಿದ್ದಾರೆ. ಇದರಿಂದ ಪ್ರಗತಿಗೆ ವ್ಯತ್ಯಯಬರುತ್ತಿರುವದರಿಂದ ಕಾಗದ ಪತ್ರಗಳು ದ್ರುತಗತಿಯಿಂದ ಓಡಾಡಿ ಕಾರ್ಯ ಸುಗಮವಾಗುವಂತೆ ನೋಡಿಕೊಳ್ಳಬೇಕು. ಸರಕಾರಗಳು ಸಾರಿಗೆಗೆ ಪ್ರಾಶಸ್ತ್ಯ ಕೊಟ್ಟದ್ದು ದೋಷಪೂರ್ಣವಾದ ಪದ್ಧತಿಯೆಂದು ರಾಯನ್ಸ್‌ರು ಅಭಿಪ್ರಾಯಪಟ್ಟಿದ್ದಾರೆ. ಇದು ಪ್ರತ್ಯಕ್ಷ ಆಚರಣೆಯಲ್ಲಿ ಬರುವಾಗ ಲಂಚಗುಳಿತನಕ್ಕೆ ಅವಕಾಶ ದೊರೆಯದು; ಸಾರಿಗೆಯಲ್ಲಿ ಅಸ್ತವ್ಯಸ್ತಕರವಾದ ಪರಿಸ್ಥಿತಿಯು ಇದರಿಂದ ಪ್ರಾಪ್ತವಾಗುವದು. ರೇಲ್ವೆ ಎಂಜಿನುಗಳ ಸಂಖ್ಯೆಯನ್ನು ಹೆಚ್ಚಿಸಿದ ಮಾತ್ರಕ್ಕೆ ಸಾರಿಗೆಯಲ್ಲಿಯ ದೋಷಗಳು ಹೋಗಿ ಸಮಸ್ಯೆ ಬಿಡಲಾರದು. ಎಂಜಿನು ಶೆಡ್ಡುಗಳ, ವರ್ಕಶಾಪುಗಳ ಸುಧಾರಣೆ, ಎಂಜಿನುಗಳಿಗೆ ಕಲ್ಲಿದ್ದಲಿ ಹಾಕುವದು, ನೀರು ಹಾಕುವದು ಬೂದಿ ತೆಗೆವುದು ಈ ಪದ್ಧತಿಗಳಲ್ಲಿ ಆಧುನಿಕ ಸಾಧನ ಮತ್ತು ಪದ್ಧತಿಗಳ ಉಪಯೋಗವಾಗಬೇಕು. ಎಂಜಿನುಗಳು ಶೆಡ್ಡಿನಲ್ಲಿ ಹೆಚ್ಚು ಕಾಲ ಉಳಿಯದಂತೆ ವ್ಯವಸ್ಥೆಯಾಗಬೇಕೆಂದು ರಾಯನರು ಸೂಚಿಸಿರುವರು. ಒಟ್ಟಾರೆ ಆಡಳಿತೆಯಲ್ಲಿ ಸುಧಾರಣೆಯಾಗುವದು ಅವಶ್ಯವಾಗಿದೆಯೆಂದು ರಾಯನರು ಅಭಿಪ್ರಾಯಪಟ್ಟಿದ್ದಾರೆ. ಹಿಂದುಸ್ತಾನದ ರೇಲ್ವೆ ಬೋರ್ಡಿನವರು ಈ ಸೂಚನೆಗಳತ್ತ ಗಮನಿಸುವರೆಂದು ನಂಬಲಾಗಿದೆ.

ಸಂಸ್ಥಾನ ಘಟನಾಸಮಿತಿ

ಸಂಸ್ಥಾನ ಮತ್ತು ಸಂಸ್ಥಾನದ ಒಕ್ಕೂಟಗಳು ಹಿಂದುಸ್ತಾನದ ಸ್ವತಂತ್ರ ಘಟನೆಯಲ್ಲಿ ಪ್ರಾಂತಗಳಿಗೆ ಸಮಾನವಾಗಿ ಉಳಿಯಬೇಕೆಂದು ಸಂಸ್ಥಾನ ಒಕ್ಕೂಟ ಸಭೆಯಲ್ಲಿ ನಿರ್ಣಯಿಸಲಾಯಿತು. ಈ ಸಂಬಂಧದಲ್ಲಿ ಘಟನೆಯ ಕಲಮುಗಳನ್ನು ಎಂತು ತಿದ್ದಬೇಕೆಂಬ ಬಗೆಗೆ ೧೯ ನೇ ತಾರೀಕು ಆಯುದು ಗಂಟೆಗಳ ಕಾಲ ಚರ್ಚೆ ನಡೆಯಿತು. ಪ್ರಾಂತಗಳಿಗೆ ಅನ್ವಯಿಸುವ ಕಲಮುಗಳೆಲ್ಲ ಸಂಸ್ಥಾನಗಳಿಗೆ ಅನ್ವಯಿಸಬೇಕೆಂಬ ಕಲಮನ್ನು ಜೋಡಿಸಲಾಗುವದೆಂದು ತಿಳಿಯುತ್ತದೆ. ಆದರೆ ಪ್ರಾಂತ ಮತ್ತು ಸಂಸ್ಥಾನಗಳಲ್ಲಿಯ ಅಂತರವನ್ನು ವಿಶೇಷತಃ ರಾಜ ಪ್ರಮುಖರ ನೇಮಕ ಸಂಸ್ಥಾನಿಕರ ಖಾಸಗಿ ವೆಚ್ಚ, ಒಪ್ಪಂದಗಳು ಮೊದಲಾದವುಗಳನ್ನು ಪರಿಶಿಷ್ಟದಲ್ಲಿ ವಿವರಿಸಬಹುದಾಗಿದೆ. ಈ ರೀತಿಯಾಗಿ ಸಂಸ್ಥಾನಗಳು ಪ್ರಾಂತಗಳ ಮಟ್ಟಕ್ಕೆ ಬರುವದರಿಂದ ಅಲ್ಲಲ್ಲಿ ರಚಿತವಾಗಿರುವ ಸಂಸ್ಥಾನ ಘಟನಾಸಮಿತಿಯ ಭವಿತವ್ಯವೇನು ಎಂಬ ಪ್ರಶ್ನೆ ಉದ್ಭೃತವಾಗುವದು. ಅವು ತಮ್ಮ ತಮ್ಮ ಘಟನೆಗಳನ್ನು ರಚಿಸುವ ಕಾರ್ಯವನ್ನು ಹಿಂದುಸ್ತಾನ ಘಟನಾಸಮಿತಿಗೆ ಒಪ್ಪಿಸಬಹುದು. ಘಟನಾಸಮಿತಿ ಮತ್ತು ಶಾಸನಸಭೆಗಳಿಲ್ಲದ ಸಂಸ್ಥಾನಗಳ ಮತ್ತು ಸಂಸ್ಥಾನ ಒಕ್ಕೂಟಗಳ ರಾಜರು ಪ್ರುತ್ತು ರಾಜಪ್ರಮುಖರು ತಾವೇ ಆ ಅಧಿಕಾರವನ್ನು ಹಿಂದುಸ್ತಾನ ಸರಕಾರಕ್ಕೆ ಒಪ್ಪಿಸಬಹುದು. ಹಿಂದುಸ್ತಾನದ ಘಟನಾಸಮಿತಿಯು ಆಗಷ್ಟ ತಿಂಗಳಲ್ಲಿ ಪ್ರಾರಂಭವಾಗುವ ಮೊದಲು ಈ ಅಧಿಕಾರವನ್ನು ಅದಕ್ಕೆ ಒಪ್ಪಿಸಿದ್ದಾದರೆ ಅದರಲ್ಲಿ ಇದೆಲ್ಲ ಕಲಮುಗಳ ಇತ್ಯರ್ಥವಾಗಿ ಘಟನೆ ಸುಲಭವಾಗಬಲ್ಲದು.

ಜವಳಿ ಗಿರಣಿಗಳು

ಅಹಮದಾಬಾದಿನ ಗಿರಣಿಗಳಲ್ಲಿ ಬಟ್ಟೆಯ ಸಂಗ್ರಹ ಬಹಳಷ್ಟಿದೆಯೆಂದು ಆ ಗಿರಣಿಗಾರರು ತಮ್ಮ ಗಿರಣಿಗಳನ್ನು ಮುಚ್ಚಿರುವರೆಂದು ಸುದ್ದಿ ಬಂದಿದೆ. ಅದೇ ರೀತಿಯಾಗಿ ಅರಳೆಯಿಲ್ಲೆಂದು ಮತ್ತು ಕೂಲಿಕಾರರ ಚಿಕ್ಕಪುಟ್ಟ ತೊಂದರೆಗಳನ್ನು ಸಹಿಸದೆ ಸೊಲ್ಲಾಪುರದಲ್ಲಿಯ ಗಿರಣಿಗಾರರು ತಮ್ಮ ಗಿರಣಿಗಳನ್ನು ಮುಚ್ಚುವ ಸಂಭವವಿದೆಯೆಂದು ತಿಳಿಯುತ್ತದೆ. ಸದ್ಯದ ಪರಿಸ್ಥಿತಿಯಲ್ಲಿ ಇಂತು ಗಿರಣಿಗಳು ಮುಚ್ಚಲ್ಪಟ್ಟರೆ ಕೂಲಿಕಾರರ ಸ್ಥಿತಿ ಏನಾಗಬಹುದು, ಸಾರ್ವಜನಿಕ ಜೀವನದ ಮೇಲೆ ಅದರ ದುಷ್ಪರಿಣಾಮವೇನಾಗಬಲ್ಲದು? ಮುಂಬಯಿ ಪ್ರಾಂತದಲ್ಲಿಯ ಇಟ್ಟ ಗಿರಣಿಗಳಲ್ಲಿ ಸಂಗ್ರಹವಾಗಿ ಬಿದ್ದ ಬಟ್ಟೆ ಬೇಗನೆ ವಿತರಣವಾಗಿ ಹೆಚ್ಚು ಸಂಗ್ರಹವಾಗದಂತೆ ನೋಡಿಕೊಳ್ಳುವದಾಗಿ ಜವಳಿ ಕಮಿಶನರರ ಕಚೇರಿಯಲ್ಲಿಯ ವಕ್ತಾರನೊಬ್ಬನು ಹೇಳಿದನೆಂದು ಪ್ರಸಿದ್ಧವಾಗಿದೆ. ಅಹಮದಾಬಾದದಲ್ಲಿ ವಿಪರೀತ ಸಂಗ್ರಹ ಬಿದ್ದಿದೆ ಎಂಬುದನ್ನೂ ಈ ವಕ್ತಾರನು ಅಲ್ಲಗಳೆದು ಸ್ವಲ್ಪ ಸಂಗ್ರಹ ಅಲ್ಲಿ ಉಳಿದುದೇನೋ ನಿಜ ಆದರೆ ಅದೇನು ಹಿಂದಿನ ಅವಧಿಗಿಂತ ಹೆಚ್ಚಾಗಿಲ್ಲ ಎಂದು ಹೇಳಿರುವನು. ಪ್ರತಿವರುಷ ಮಳೆಗಾಲದಲ್ಲಿ ಇಷ್ಟು ಸಂಗ್ರಹ ಉಳಿಯುವದು ಸಹಜವೆಂದೂ ಅವನ ಅಭಿಪ್ರಾಯ. ಅಹಮದಾಬಾದದ ಗಿರಣಿಗಳಲ್ಲಿ ಆರು ವಾರಗಳ ಸಂಗ್ರಹ ಮಾತ್ರವಿದೆಯೆಂದೂ ಅವನ ಅಭಿಪ್ರಾಯ. ಇದಲ್ಲದೆ ಈ ಸಂಗ್ರಹಕ್ಕೆ ಗಿರಣಿಗಾರರೆ ಹೊಣೆಗಾರರೆಂದೂ ಅವನ ಆರೋಪ. ಬೆಲೆ ಕಡಮೆ ಇದ್ದಾಗ ಕಡಮೆ ಗಂಟು ಕಟ್ಟುವ ಮತ್ತು ಬೆಲೆ ಹೆಚ್ಚು ಏರಿದಾಗ ಹೆಚ್ಚು ಗಂಟು ಕಟ್ಟುವ ಪ್ರವೃತ್ತಿಯು ಗಿರಣಿಗಾರರದಾಗಿರುವದರಿಂದ ಸಂಗ್ರಹ ಹೆಚ್ಚಾಗಿದೆ. ಮೇ ಜೂನದಲ್ಲಿ ಬೆಲೆಗಳು ಸ್ವಲ್ಪ ಏರಿದ್ದರಿಂದ ಆ ತಿಂಗಳು ಹೆಚ್ಚು ಗಂಟುಗಳನ್ನು ಕಟ್ಟಿದ್ದರಿಂದ ಸಂಗ್ರಹವು ಹೆಚ್ಚು ಉಳಿದಿದೆಯೆಂದು ಸರಕಾರೀ ವಕ್ತಾರನು ಅಭಿಪ್ರಾಯಪಟ್ಟಿದ್ದಾನೆ. ಗಿರಣಿಗಾರರು ಈ ರೀತಿಯಾಗಿ ಕೇವಲ ಲಾಭದ ಕಡೆಗೇ ಹೆಚ್ಚು ಗಮನಕೊಟ್ಟು ಬೆಲೆ ಹೆಚ್ಚು ಇದ್ದಾಗ ಉತ್ಪಾದನೆ ಹೆಚ್ಚಿಸಿ ಹಿಂದುಗಡೆ ಸಂಗ್ರಹ ಬಹಳವೆಯೆಂದು ಗಿರಣಿಗಳನ್ನು ಮುಚ್ಚುವ ಬೆದರಿಕೆ ಹಾಕುವದು ಸಮಂಜಸವಲ್ಲ. ತಪ್ಪು ಯಾರದೇ ಇದ್ದರೂ ಸರಳು ಅದನ್ನು ಬೇಗ ವಿತರಣವಾಗುವಂತೆ ನೋಡಿಕೊಳ್ಳುವದಾಗಿ ಅಧಿಕಾರಿಗಳು ಆಶಿಸಿರುವದರಿಂದ ಗಿರಣಿಗಾರರು ಗಿರಣಿ ಮುಚ್ಚುವ ಮೊದಲಾದ ಸಂಕುಚಿತ ಧೋರಣವನ್ನು ತಾಳದಿರುವದು ವಿಹಿತವಾಗಿದೆ.

ನೆರೆಹಾವಳಿ ಮತ್ತು ಅತಿವೃಷ್ಟಿಗಳ ಸತ್ವಣಾಮವಾಗಿದ್ದರೂ ಪಾಕಿಸ್ತಾನದಲ್ಲಿ ಹೊಸ ಸಣಬಿನ ಬೆಳೆ ೭೦ ಲಕ್ಷ ಬೇಲುಗಳಿಗಿಂತ ಕಡಮೆ ಬಂದಿಲ್ಲೆಂದು ಹೊಸದಿಲ್ಲಿಯಲ್ಲಿಯ ಅಧಿಕೃತ ವರ್ಗಗಳಲ್ಲಿ ಹೇಳಲಾಗುತ್ತದೆ. ಬೆಲೆಯನ್ನು ಏರಿಸಬೇಕೆಂದು ಕಡಮೆ ಬೆಳೆ ಬಂದಿದೆಯೆಂದು ಪೂರ್ವ ಪಾಕಿಸ್ತಾನವು ಹೇಳುತಿದೆ. ಆದರೆ ನಿರ್ಯಾತ ಕರವನ್ನು ಕಡಮೆ ಮಾಡಿದರೆ ಮಾತ್ರ ಸಣಬು ಬೆಳೆವವರಿಗೆ ಲಾಭವಾಗಬಹುದು.

ಪ್ರಸಿದ್ಧ ಸಿನೆಮಾ ತಾರೆ ಸ್ನೇಹಪ್ರಭಾ ಪ್ರಧಾನಳು ಪುನಃ ವಿದ್ಯಾರ್ಥಿ ಜೀವನವನ್ನು ಪ್ರಾರಂಭಿಸಿದ್ದಾಳೆ. ಹತ್ತು ವರ್ಷದ ಕೆಳಗೆ ಅವಳು ವೈದ್ಯಕ ಕಾಲೇಜಿನಲ್ಲಿ ತನ್ನ ವಿದ್ಯಾಭ್ಯಾಸವನ್ನು ಅರ್ಧಕ್ಕೇ ಬಿಟ್ಟು "ರಜತ ಪರದೆ"ಯ ಮೋಹದಿಂದ ಹೊರಟು ಹೋಗಿದ್ದಳು. ಅವಳೀಗ ಲಾ ಕಾಲೇಜಿಗೆ ಸೇರಿದ್ದಾಳೆಂದು ಪುಣೆಯಿಂದ ಸುದ್ದಿ ಬಂದಿದೆ.

ಗೌಡ ಸಾರಸ್ವತ ಸಮಾಜದ ಗುರುವರ್ಯರಾದ ಶ್ರೀ ಸುಕೃತೀಂದ್ರತೀರ್ಥರು ದಿವಂಗತರಾದ ನಿಮಿತ್ತ ಮಂಗಳೂರಿನ ಹಾಸೂ ಜಿಲ್ಲೆಯ ವಿವಿಧ ಕೇಂದ್ರಗಳಲ್ಲಿ ಆ ಸಮಾಜದವರು ಅಂಗಡಿ, ಹೋಟ್ಲುಗಳನ್ನು ಮುಚ್ಚಿ ತಮ್ಮ ದುಃಖವನ್ನು ಪ್ರದರ್ಶಿಸಿದರು.

ಗಾಂಧೀಜಿ — ಟಾಲ್‌ಸ್ಟಾಯ ಸಂಪರ್ಕ

ಮಹಾತ್ಮರ ಗುರುವೆನಿಸಿದ ಆ ರಶಿಯನ್ ಋಷಿ ಗಾಂಧೀಜಿಗಿತ್ತ ಆಶೀರ್ವಾದ- ಕ್ರೈಸ್ತ ಜಗತ್ತಿನಲ್ಲಿ ಪೂರ್ತಿ ವಿಶ್ವಾಸಪ್ರದರ್ಶನ

(ಲೇಖಕರು: ಲುಯಿ ಫಿಶರ)

ಮೋಹನದಾಸ ಗಾಂಧಿಯವರು ಲಂಡನ್ನಿನಲ್ಲಿ ಕಾಯದೆಯನ್ನು ಓದುತ್ತಿದ್ದಾಗ, ೧೮೮೯ ರಲ್ಲಿ ನಡೆದ ಪ್ರಚಂಡ ಪ್ಯಾರಿಸ್ ಪ್ರದರ್ಶನವನ್ನು ನೋಡಲು ಫ್ರಾನ್ಸಿಗೆ ಹೋದರು. ಅವರು ಕಂಡ ಅನೇಕ ವಸ್ತುಗಳಲ್ಲಿ ಅದೇ ಆಗ ಹೊಸದಾಗಿದ್ದ ಐಫೆಲ್ ಗೋಪುರವೂ ಒಂದಾಗಿತ್ತು. ರಶಿಯನ್ ಕಾದಂಬರಿಕಾರರಾದ ಕೌಂಟ್ ಲಿಯೋ ಟಾಲ್‌ಸ್ಟಾಯರು ಆ ಗೋಪುರವನ್ನು ಮಾನವ ಮೌಢ್ಯದ ಸ್ಮಾರಕ ಸ್ತಂಭವೆಂದು ಕರೆದಿದ್ದರು. ಈ ಕಿಡುನುಡಿಯನ್ನೋದಿ ಗಾಂಧಿಯವರು ಸೈಸೈ ಯೆಂದರು. ಗಾಂಧಿಯವರಿಗೆ ಟಾಲಸ್ಟಾಯರೊಡನಾದ ಅಲ್ಪ ಪರಿಚಯದ ಪ್ರಾರಂಭವಿದು.

ಟಾಲ್‌ಸ್ಟಾಯರ ಪ್ರಭಾವ

ಆದರೆ ದಕ್ಷಿಣ ಆಫ್ರಿಕೆಯಲ್ಲಿ ಗಾಂಧಿಯವರು ಕಳೆದ ೨೦ ವರ್ಷಗಳಲ್ಲಿ ಟಾಲಸ್ಟಾಯರು ಅವರ ಜೀವನದ ಮೇಲೆ ನಿಶ್ಚಿತವಾದ ಪ್ರಭಾವ ಬೀರಿದವರಲ್ಲೊಬ್ಬರಾದರು.

ಜೊಹಾನ್ಸಬರ್ಗಿನ ಗಾಂಧಿಯವರ ವಕೀಲಿ ಕಚೇರಿಯಲ್ಲಿ ಧಾರ್ಮಿಕ ವಿಷಯಗಳ ಮೇಲೆ ಟಾಲ್‌ಸ್ಟಾಯರ ಅನೇಕ ಪುಸ್ತಕಗಳಿದ್ದವು. ಆದರೆ ಅವರು ಟಾಲ್‌ಸ್ಟಾಯರ ಉಪದೇಶಗಳನ್ನು ಪೂರ್ತಿಯಾಗಿ ಗ್ರಹಿಸಿದ್ದು ಸೆರೆಮನೆಯಲ್ಲಿ.

೧೮೨೮ ರಲ್ಲಿ ಹಳೆರಶಿಯನ್ ಶ್ರೀಮಂತಕುಲದಲ್ಲಿ ಜನಿಸಿದ ಲಿಯೋ ಟಾಲಸ್ಟಾಯರಿಗೆ ಸಂಪತ್ತಿತ್ತು; ಉಚ್ಚವರ್ಗದ ಸಮಾಜದಲ್ಲಿ ಹೊಕ್ಕು ಬಳಕೆ ಅವರಿಗಿತ್ತು; ಅವರು ಪ್ರೇಮ, ಕಲಹ, ಜೀವನಗಳನ್ನು ಕುರಿತು ಅಭೂತಪೂರ್ವ ಇಂಗಿತಜ್ಞತೆಯಿಂದಲೂ ಜಾಣ್ಮೆಯಿಂದಲೂ ಬರೆಯುತ್ತಿದ್ದರು. ಜಗತ್ತಿನಲ್ಲೇ ಶ್ರೇಷ್ಠತಮ ಕಾದಂಬರಿಯೆನಿಸಿದ War and Peace (ಸಮರ-ಶಾಂತಿ), ಅನ್ನಾ ಕೆರೆನೀನಾ, ರಿಸರೆಕ್ಷನ್ (ಪುನರ್ಜನ್ಮ) ಮೊದಲಾದ ಅವರ ಕೃತಿಗಳು ಅದ್ಭುತ ಸಾಫಲ್ಯವನ್ನೂ ಜಗತ್ಪ್ರಸಿದ್ಧಿಯನ್ನೂ ಸಂಪಾದಿಸಿದ್ದವು. ಆದರೆ ಅವರ ಆತ್ಮಯಾತನೆಗಳೂ ಅವರನ್ನು ಕಾಡುತ್ತಿತ್ತು. ಕ್ರಿಸ್ತಧರ್ಮಕ್ಕೂ ಕ್ರಿಸ್ತನಿಗೂ ಇರುವ ಅಂತರವನ್ನು ನೋಡಿ ಅವರು ನೊಂದಿದ್ದರು. ಪ್ರಾಯ ಪ್ರಬುದ್ಧರಾದಂದಿನಿಂದಲೂ ಅವರು ಸುಧಾರಕ ಪಂಥದವರಾಗಿದ್ದರು; ಮುಂದೆ ಅವರು ತಮ್ಮ ಜೀವನವನ್ನೇ ಸುಧಾರಣೆ ಮಾಡಿಕೊಂಡರು.

ದಕ್ಷಿಣ ಆಫ್ರಿಕೆಯಲ್ಲಿ ಒಬ್ಬ ಹಿಂದೂ ವಕೀಲನು ಬಿಡಿಸಲು ಹೆಣಗುತ್ತಿದ್ದ ಸಮಸ್ಯೆಗಳನ್ನೇ ಮಧ್ಯ ರಶಿಯದಲ್ಲಿ ರಶಿಯನ್ ಶ್ರೀಮಂತನೊಬ್ಬನು ಹಣಿಯುತ್ತಿದ್ದನು.

೧೮೮೪ ರಲ್ಲಿ ಟಾಲ್‌ಸ್ಟಾಯರು ತಮ್ಮ "ನನ್ನ ಧರ್ಮ" ಎಂಬ ಪುಸ್ತಕದಲ್ಲಿ ತಮ್ಮ ಧರ್ಮವನ್ನು ಪ್ರತಿಪಾದಿಸಿದರು. ಆದರೆ ರಶಿಯದ ಕಠೋರ ಸಾಹಿತ್ಯನಿಯಂತ್ರಣದ ಫಲವಾಗಿ ಅದರ ೫೦ ಪ್ರತಿಗಳು ಮಾತ್ರ ಮುದ್ರಿಸಲ್ಪಟ್ಟವು. ಅದೇ ವರ್ಷ ಅವರು ತಮ್ಮ ಆಸ್ತಿಯನ್ನು ಹೆಂಡತಿಗೆ ಕೊಟ್ಟುಬಿಟ್ಟು "ಅಸಹ್ಯ ವಿಲಾಸಲೋಲುಪತೆ" ಯಿಂದ ಮುಕ್ತರಾಗಲು ಪ್ರಯತ್ನ ಪಟ್ಟರು. ೧೮೮೫ ರಲ್ಲಿ ಅವರು ಧೂಮಪಾನವನ್ನೂ ಮಾಂಸಾಹಾರವನ್ನೂ ಬೇಟೆಯಾಡುವದನ್ನೂ ತ್ಯಜಿಸಿದರು ಮತ್ತು ದೇಶಾದ್ಯಂತ ಕಾಲ್ನಡಿಗೆಯ ಪ್ರವಾಸಗಳನ್ನು ಕೈಕೊಂಡರು. ಸರಳ ಜೀವನವನ್ನು ಅಭ್ಯಸಿಸಿ ಅವರು ಬರಿಗಾಲಲ್ಲಿ ನಡೆಯುತ್ತ ರೈತನ ಸಾಮಾನ್ಯ ಉಡುಪುಗಳನ್ನು ಧರಿಸಿ, ಹೊಲ ಉತ್ತು-ಬಿತ್ತು, ಕಷ್ಟ ಜೀವನ ನಡೆಸತೊಡಗಿದರು. ೧೮೯೧ ರಲ್ಲಿ ಅವರು ಆಸ್ತಿಯನ್ನು ನಿಜವಾಗಿ ಹೆಂಡತಿ ಮಕ್ಕಳಿಗೆ ಹಂಚಿಕೊಟ್ಟುಬಿಟ್ಟು ಜನತಾಶಿಕ್ಷಣ, ಕ್ಷಾಮಪರಿಹಾರ ಕಾರ್ಯಗಳಲ್ಲಿ ಮತ್ತು ಸಸ್ಯಾಹಾರ, ವಿವಾಹ, ಧರ್ಮಗಳನ್ನು ಕುರಿತು ಲೇಖ ಬರೆಯುವದೇ ಮೊದಲಾದ ಕೆಲಸಗಳಲ್ಲಿ ಪ್ರಸಕ್ತರಾದರು. ಅವರು ಕ್ರೈಸ್ತಮಠ ಸಂಸ್ಥೆಗಳನ್ನು ತೀಕ್ಷ್ಣವಾಗಿ ದೂಷಿಸಿದರು. ಸತ್ಯಾನ್ವೇಷಕರು ಅವರ ಯಾಸ್ನಾ ಪೊಲಿಯಾನವನ್ನು ತಮ್ಮ ಕಾಶಿಯಾಗಿ ಮಾಡಿಕೊಂಡರು. ಕ್ರೈಸ್ತರು, ಯಹೂದ್ಯರು, ಮುಸ್ಲಿಮರು, ಹಿಂದುಗಳು ಮತ್ತು ಬೌದ್ಧರು ಜಗತ್ತಿನ ಮೂಲೆಮೂಲೆಗಳಿಂದ ಐಹಿಕಭೋಗಗಳನ್ನೆಲ್ಲ ಸವಿದು ಈಗ ೮೦ ರ ವಯಸ್ಸಿನಲ್ಲಿ ಪರಮಾತ್ಮ ಚಿಂತನದಲ್ಲಿ ನಿರತನಾದ ಈ ಪ್ರಸಿದ್ಧ ಕುಲೀನನ ಪಾದಮೂಲದಲ್ಲಿ ಕುಳ್ಳಿರುತ್ತಿದ್ದರು.

ಗಾಂಧೀಜಿ ಶಿಷ್ಯರಾದುದು

೧೮೯೩ ರಲ್ಲಿ ಟಾಲ್‌ಸ್ಟಾಯರು "ಸ್ವರ್ಗವಿರುವದು ನಿಮ್ಮ ಅಂತರಂಗದಲ್ಲಿ" ಎಂಬೊಂದು ಪುಸ್ತಕ ಬರೆದರು. ಲೇಖಕನ ಉಪದೇಶ ಅದರ ಹೆಸರಲ್ಲೆ ಅಡಕವಾಗಿದೆ. ಗಾಂಧಿಯವರು ಸೆರೆಮನೆಯಲ್ಲಿದ್ದಾಗ ಓದಿದ್ದು ಈ ಪುಸ್ತಕ. ಅದು ಅವರನ್ನು ಟಾಲ್‌ಸ್ಟಾಯರ ಶಿಷ್ಯನಾಗಿ ಮಾಡಿತು.

"(ಕ್ರೈಸ್ತ) ಧರ್ಮಪೀಠಗಳ ಚರಿತ್ರೆಯೆಂದರೆ ಕ್ರೌರ್ಯ ಭಯಾನಕತೆಗಳ ಚರಿತ್ರೆಯೇ ಆಗಿದೆ" ಎಂದು ಅವರು ಆ ಪುಸ್ತಕದಲ್ಲಿ ನಿರ್ದಾಕ್ಷಿಣ್ಯವಾಗಿ ಸಾರಿದ್ದರು. "ಅಮುಷ್ಮಿಕ ದೃಷ್ಟಿಯಿಂದ ಧರ್ಮಪೀಠಗಳಿಗೂ ಕ್ರೈಸ್ತಧರ್ಮಕ್ಕೂ ಏನೂ ಸಂಬಂಧವಿಲ್ಲವಷ್ಟೇ ಅಲ್ಲ; ಅವುಗಳಲ್ಲಿ ಅನೇಕಸಂಗತಿಗಳು ಒಂದಕ್ಕೊಂದು ವಿರುದ್ಧವಾಗಿವೆ." ಅಲ್ಲದೆ, "ಉದ್ಧಾರ ಮತ್ತು ಮೋಕ್ಷ ಎಂಬೀ ಸಿದ್ಧಾಂತಗಳಿಂದ ಪ್ರತಿಯೊಂದು ಧರ್ಮಪೀಠವೂ ಅದರಲ್ಲಿಯೂ ಮೂರ್ತಿಪೂಜೆಯನ್ನು ಪುರಸ್ಕರಿಸುವ ರಶಿಯನ್ ಸಾಂಪ್ರದಾಯಿಕ ಧರ್ಮಪೀಠವಂತೂ ಕ್ರಿಸ್ತನ ತತ್ವಗಳನ್ನು ದೂರೀಕರಿಸಿಬಿಟ್ಟವೆ."

ಪ್ರಥಮ ಪತ್ರ

ಟಾಲ್‌ಸ್ಟಾಯರೊಡನೆ ಗಾಂಧಿಯವರಿಗೆ ವ್ಯಕ್ತಿಗತವಾಗಿ ಸಂಪರ್ಕವುಂಟಾದದ್ದು "ವೆಸ್ಟ್‌ಮಿನಿಸ್ಟರ್ ಪ್ಯಾಲೇಸ್ ಹಾಟಿಲ್, ೪, ವಿಕ್ಟೋರಿಯಾ ಸ್ಟ್ರೀಟ್, ಎಸ್. ಡಬ್ಲ್ಯು. ಲಂಡನ್"ನಿಂದ ಅಕ್ಟೋಬರ ೧, ೧೯೦೯ ರಲ್ಲಿ ಗಾಂಧಿಯವರು ಇಂಗ್ಲಿಷಿನಲ್ಲಿ ಬರೆದು ಅಲ್ಲಿಂದ ರಶಿಯದಲ್ಲಿನ ಯಾಸ್ನಾ ಪೊಲಿಯಾನಾಕ್ಕೆ ಟಪಾಲಿನಲ್ಲಿ ಕಳಿಸಿದ ಪತ್ರದ ಮೂಲಕ. ಸುಮಾರು ಮೂರು ವರ್ಷಗಳಿಂದ ಟ್ರಾನ್ಸ್‌ವಾಲದಲ್ಲಿ ನಡೆಯುತ್ತಿದ್ದ ಸತ್ಯಾಗ್ರಹದ ವಿಚಾರವನ್ನು ಆ ಕಾದಂಬರಿಕಾರರಿಗೆ ತಿಳಿಸುವದೇ ಪತ್ರದ ಉದ್ದೇಶವಾಗಿತ್ತು. ಟ್ರಾನ್ಸ್‌ವಾಲದಲ್ಲಿದ್ದ ೧೩೦೦೦ ಬ್ರಿಟಿಶ—ಹಿಂದೀಯರಲ್ಲಿ ಅರ್ಧದಷ್ಟು ಜನರು ಅಪಮಾನಜನಕವೆಂದು ತಾವು ಭಾವಿಸಿರುವ ಕಾಯದೆಗೆ ತಲೆವಾಗಲೊಲ್ಲದೆ ಅಲ್ಲಿಂದ ಹೊರಟು ಹೋಗಿದ್ದಾರೆಂದು ಗಾಂಧಿಯವರು ತಿಳಿಸಿದ್ದರು. ಉಳಿದ ಅರ್ಧದಲ್ಲಿ ಆತ್ಮಸಾಕ್ಷಿಗೆ ಅನುಸಾರವಾಗಿ ೨೫೦೦ ಜನರು ಕೆಲ ಪ್ರಸಂಗಗಳಲ್ಲಿ ಐದೈದು ಬಾರಿ ಸೆರೆಮನೆ ಸೇರಿದ್ದರೆಂದೂ ಅವರು ಬರೆದಿದ್ದರು.

ಗಾಂಧಿಯವರ ಈ ದೀರ್ಘ ಪತ್ರದಲ್ಲಿ ಭಾರತದಲ್ಲಿನ ಆಂದೋಲನದ ಬಗ್ಗೆ ಟಾಲ್‌ಸ್ಟಾಯರು ಬರೆದ "ಭಾರತೀಯನಿಗೊಂದು ಪತ್ರ" ಎಂಬದರ ೨೦೦೦೦ ಪ್ರತಿಗಳನ್ನು ಮುದ್ರಿಸಿ ಪ್ರಸಾರ ಮಾಡಲು ಅಪ್ಪಣೆಯನ್ನೂ ಕೇಳಲಾಗಿತ್ತು.

ಆ "ಪತ್ರ ಪುನರ್ಜನ್ಮ"ದಲ್ಲಿ ಟಾಲಸ್ಟಾಯ ಜನ್ಮದ ಸಿದ್ಧಾಂತದ ಬಗ್ಗೆ ಕೆಲ ಟೀಕೆಗಳನ್ನು ಮಾಡಿದ್ದರು. ಗಾಂಧಿಯವರು ತಮ್ಮ ಕಾಗದದಲ್ಲಿ ಆ ಭಾಗಗಳನ್ನು ತೆಗೆದುಹಾಕಿ ಮುದ್ರಿಸಬಹುದೆ? ಎಂದು ಕೇಳಿದ್ದರು.—

ಸೆಪ್ಟೆಂಬರ ೨೪, ೧೯೦೯ ಈ ದಿನಾಂಕದ ತಮ್ಮ ದಿನಚರಿಯಲ್ಲಿ (ಆಗ ರಶಿಯದ ಪಂಚಾಂಗ ಉಳಿದ ಯುರೋಪಿನ ಪಂಚಾಂಗಕ್ಕಿಂತ ೧೩ ದಿನ ಹಿಂದೆ ಇತ್ತು) ಟಾಲಸ್ಟಾಯರು ಬರೆದುದು: "ಟ್ರಾನ್ಸ್‌ವಾಲದ ಹಿಂದುವೊಬ್ಬನಿಂದ ಒಂದು ಸಂತೋಷಕರ ಪತ್ರ ಬಂದಿದೆ" ನಾಲ್ಕು ದಿನಗಳ ನಂತರ ಅವರು ತಮ್ಮ ನಚ್ಚಿನ ಗೆಳೆಯನೂ ಮುಂದೆ ಅವರ ಗ್ರಂಥಸಂಗ್ರಹವನ್ನು ಸಂಸ್ಕರಿಸಿ ಪ್ರಕಟಿಸಿದವನೂ ಆದ ವ್ಲಾಡಿಮೀರ್ ಜಿ. ಚೆರ್ಟ್ಕೋಫನೆಂಬವನಿಗೆ ಬರೆದ ಪತ್ರದಲ್ಲಿ ಟಾಲ್‌ಸ್ಟಾಯರು "ಟ್ರಾನ್ಸ್‌ವಾಲದ ಹಿಂದುವಿನ ಪತ್ರ ನನ್ನ ಮನಮುಟ್ಟಿದೆ," ಎಂದು ಕಾಣಿಸಿದ್ದರು.

ಟಾಲ್‌ಸ್ಟಾಯರ ಆಶೀರ್ವಾದ

ಯಾಸ್ನಾ ಪೊಲಿಯಾನದಿಂದ ಅಕ್ಟೋಬರ ೭ (೨೦), ೧೯೦೯ ಕ್ಕೆ ಅವರು ಗಾಂಧಿಯವರಿಗೆ ರಶಿಯನ್ ಭಾಷೆಯಲ್ಲಿ ಉತ್ತರ ಬರೆದರು. ಅದರ ರಶಿಯನ್ ಮೂಲವನ್ನು ಇಂಗ್ಲೀಷಿಗೆ ಅನುವಾದಿಸಿ ಅವರ ಮಗಳು ತಾತಿಯಾನಳು ಗಾಂಧಿಯವರಿಗೆ ಕಳಿಸಿದಳು. ಟಾಲ್‌ಸ್ಟಾಯರು ಹೀಗೆ ಬರೆದಿದ್ದರು: "ನಿಮ್ಮ ತುಂಬ ಕುತೂಹಲಜನಕವಾದ ಪತ್ರ ಇದೀಗ ನನ್ನ ಕೈಸೇರಿದೆ. ಅದು ನನಗೆ ತುಂಬ ಸಂತೋಷವನ್ನುಂಟು ಮಾಡಿದೆ. ಟ್ರಾನ್ಸ್‌ವಾಲದಲ್ಲಿರುವ ನಮ್ಮ ಬಂಧುಗಳಿಗೂ ಸಹಕಾರ್ಯಕರ್ತರಿಗೂ ದೇವರ ಅನುಗ್ರಹವಾಗಲಿ- ಕಠೋರತೆಯ ವಿರುದ್ಧ ಮಾರ್ದವತೆ, ಗರ್ವ ಹಿಂಸೆಗಳ ವಿರುದ್ಧ ಪ್ರೇಮವಿನಯಗಳ ಹೋರಾಟ ಇಲ್ಲಿಯೂ ವರ್ಷೇ ವರ್ಷೇ ಹೆಚ್ಚು ಹೆಚ್ಚಾಗಿ ನಮ್ಮ ಅನುಭವಕ್ಕೆ ಬರತೊಡಗಿದೆ. "ಪುನರ್ಜನ್ಮ" ಶಬ್ದದ ಬಗ್ಗೆ ಹೇಳಬೇಕಾದರೆ, ನಾನಾಗಿಯೇ ಅದನ್ನು ಬಿಟ್ಟುಬಿಡಲು ಮನಸು ಮಾಡಲಾರೆ. ಏಕೆಂದರೆ, ನನ್ನ ಅಭಿಪ್ರಾಯದಲ್ಲಿ ಪುನರ್ಜನ್ಮದ ಮೇಲಿನ ವಿಶ್ವಾಸ ಎಷ್ಟೇ ಬಲವಾಗಿದ್ದರೂ ಅದು ಆತ್ಮದ ಅಮರತ್ವ ಮತ್ತು ಪರಮಾತ್ಮನ ನ್ಯಾಯಬುದ್ಧಿಯ ಮೇಲಿನ ವಿಶ್ವಾಸದಷ್ಟು ದೃಢವಾಗಿರುವದು ಅಸಾಧ್ಯ. ಹೇಗೇ ಇದ್ದರೂ ನಿಮಗೆ ಸರಿದೋರಿದಂತೆ ಮಾಡಿರಿ.... ನಿಮಗೆ ನನ್ನ ಬಂಧುಪ್ರೇಮದ ವಂದನೆಗಳು. ನಿಮ್ಮೊಡನೆ ಸಂಬಂಧ ಬೆಳೆದುದರಿಂದ ಸಂತುಷ್ಟನಾಗಿದ್ದೇನೆ. ಇತಿ ಟಾಲಸ್ಟಾಯ."

ಹಿಂದ ಸ್ವರಾಜ್ಯ

ಗಾಂಧಿಯವರಿಂದ ಟಾಲ್‌ಸ್ಟಾಯರಿಗೆ ಬಂದ ಎರಡನೆ ಪತ್ರ ಜೋಹಾನ್ಸಬರ್ಗದಿಂದ ಎಪ್ರಿಲ, ೪, ೧೯೧೦ ಕ್ಕೆ ಬರೆಯಲ್ಪಟ್ಟಿತ್ತು. ಅದರ ಸಂಗಡ ಗಾಂಧಿಯವರ "ಹಿಂದ ಸ್ವರಾಜ್ಯ"ವೆಂಬ ಚಿಕ್ಕ ಪುಸ್ತಕವೂ ಇತ್ತು. ಪತ್ರದಲ್ಲಿ ಗಾಂಧಿಯವರು ಹೀಗೆ ಬರೆದಿದ್ದರು: "ನಿಮ್ಮ ವಿಧೇಯಶಿಷ್ಯನಾದ ನಾನು ಇದರ ಸಂಗಡ ನಾನು ಬರೆದೊಂದು ಪುಟ್ಟ ಪುಸ್ತಕವನ್ನು ಕಳಿಸಿದ್ದೇನೆ. ಇದು ನಾನೇ ಬರೆದ ಗುಜರಾಥಿಬರಹದ ಇಂಗ್ಲೀಷ್ ಅನುವಾದ. ಮೂಲ ಬರಹಕ್ಕೆ ಭಾರತದಲ್ಲಿರುವ ಬ್ರಿಟಿಶ ಸರಕಾರದವರು ವಿಚಿತ್ರವೆನಿಸುವಂತೆ ಮುಟ್ಟುಗೋಲು ಹಾಕಿದ್ದಾರೆ. ಅದ್ದರಿಂದ (ನಾನು) ಇದರ ಪ್ರಕಾಶನವನ್ನು ಬೇಗನೆ ಕೈಕೊಂಡೆ ನಿಮಗೆ ತೊಂದರೆ ಕೊಡಲು ನನಗೆ ಸರ್ವಥಾ ಮನಸಿಲ್ಲ. ಆದರೆ ನಿಮ್ಮ ಆರೋಗ್ಯ ಸರಿಯಾಗಿದ್ದರೆ ಮತ್ತು ಈ ಪುಸ್ತಕವನ್ನು ಅವಲೋಕಿಸಲು ನಿಮಗೆ ಅವಕಾಶವಾದರೆ, ನನ್ನ ಬರಹದ ಬಗ್ಗೆ ನಿಮ್ಮ ವಿಮರ್ಶೆಯನ್ನು ನಾನು ಅಮೂಲ್ಯವೆಂದು ಭಾವಿಸುತ್ತೇನೆಂದು ಹೇಳಲೇಬೇಕಾಗಿಲ್ಲ. ನೀವು ನನಗೆ ಪ್ರಕಟಿಸಲು ಅನುಮತಿ ಕೊಟ್ಟ ನಿಮ್ಮ "ಹಿಂದುವಿಗೊಂದು ಪತ್ರ"ದ ಕೆಲ ಪ್ರತಿಗಳನ್ನೂ ಕಳಿಸಿದ್ದೇನೆ. ಅದು ಒಂದು ಭಾರತೀಯ ಭಾಷೆಗೆ ಅನುವಾದಿಸಲ್ಪಟ್ಟಿದೆ. ನಿಮ್ಮ ವಿಧೇಯ ಸೇವಕ, ಮೋ. ಕ. ಗಾಂಧಿ."

ಟಾಲ್‌ಸ್ಟಾಯರ ಪ್ರಶಂಸೆ

೧೯೧೦, ಎಪ್ರಿಲ್ ೧೦ ನೆ ದಿನದ ದಿನಚರಿಯಲ್ಲಿ ಟಾಲ್‌ಸ್ಟಾಯರು ಹೀಗೆ ಬರೆದರು: "ಇಂದು ಮುಂಜಾನೆ ಇಬ್ಬರು ಜಪಾನಿಗಳು ಬಂದರು. ಯುರೋಪ್ಯ ನಾಗರಿಕತೆಯ ಮೋಹದಿಂದ ಉನ್ಮತ್ತರಾಗಿದ್ದಾರೆ. ಆದರೆ ಹಿಂದುವಿನಿಂದ ಬಂದ ಪತ್ರವೂ ಪುಸ್ತಕವೂ ಯುರೋಪ್ಯ ನಾಗರಿಕತೆಯ ಎಲ್ಲ ದೋಷಗಳನ್ನು, ಏಕೆ, ಅದರ ಶುದ್ಧ ನಿರುಪಯುಕ್ತತೆಯನ್ನು ಚನ್ನಾಗಿ ಅರ್ಥಮಾಡಿಕೊಂಡಿವೆ."

ಮರುದಿನದ ಟಾಲ್‌ಸ್ಟಾಯರ ದಿನಚರಿಯಲ್ಲಿ ಇನ್ನೊಂದು ಉಲ್ಲೇಖವಿದೆ. "ಸಿನ್ನೆ ಗಾಂಧಿ ನಾಗರಿಕತೆಯನ್ನು ಕುರಿತು ಬರೆದುದನ್ನೋದಿದೆ. ಉತ್ತಮವಾಗಿದೆ." ಅದರ ಮರುದಿನ ಪುನಃ ಒಂದು ಉಲ್ಲೇಖ ಕಾಣಿಸುತ್ತದೆ. "ಗಾಂಧಿಯನ್ನು ಕುರಿತ ಒಂದು ಪುಸ್ತಕ ಓದಿದೆ. ಬಹಳ ಪ್ರಾಮುಖ್ಯದ್ದು. ಅವನಿಗೆ ಬರೆಯಲೇ ಬೇಕು." ಗಾಂಧಿಯವರನ್ನು ಕುರಿತ ಪುಸ್ತಕವೆಂದರೆ ಅವರೇ ಕಳಿಸಿದ ಜೆ. ಜೆ. ಡೋಕ್‌ಕೃತ "ಗಾಂಧೀ ಚರಿತ್ರೆ".

ಅದರ ಮರುದಿನ ಅವರು ತಮ್ಮ ಗೆಳೆಯ ಚೆರ್ಟಕೋಫನಿಗೆ ಬರೆದ ಪತ್ರದಲ್ಲಿ ಗಾಂಧಿಯವರ ಪತ್ರದ ಮತ್ತು ದಕ್ಷಿಣ ಆಫ್ರಿಕದ ಅವರ ಸತ್ಯಾಗ್ರಹದ ಮಾತೆತ್ತಿದ್ದರು. ಗಾಂಧಿಯವರ ಬಗ್ಗೆ ಅವರು ಹೇಳಿದ್ದು: "ಅವರು ನಮಗೆ, ನನಗೆ, ತೀರ ಸಮೀಪದವರು."

ಟಾಲ್‌ಸ್ಟಾಯರು ಗಾಂಧಿಯವರಿಗೆ ಎಪ್ರಿಲ ೨೫ (ಮೇ ೮) ೧೯೧೦ ರಿದ ಯಾಸ್ನಾ ಪೊಲಿಯಾನದಿಂದ ಉತ್ತರ ಕಳಿಸಿದರು. ಅವರು ಬರೆದುದು: "ಪ್ರಿಯ ಮಿತ್ರ, ನಿಮ್ಮ ಪತ್ರ ನಿಮ್ಮ 'ಹಿಂದ ಸ್ವರಾಜ್ಯ' ಎಂಬ ಪುಸ್ತಕ ಇದೇ ಕೈಸೇರಿದವು. ನಿಮ್ಮ ಪುಸ್ತಕವನ್ನು ತುಂಬ ಕೌತುಕದಿಂದ ಓದಿದೆ, ಏಕೆಂದರೆ ನೀವು ಅದರಲ್ಲಿ ಮಹತ್ವದ ವಿಷಯ ವಿವೇಚಿಸಿದ್ದೀರಿ. ಸತ್ಯಾಗ್ರಹವು ಅತ್ಯಂತ ಮಹತ್ವದ ಪ್ರಶ್ನೆ— ಭಾರತಕ್ಕೆ ಮಾತ್ರವಲ್ಲ ಮಾನವ ಕುಲಕ್ಕೇ.

"ನಿಮ್ಮ ಹಿಂದಿನ ಪತ್ರಗಳು ಈಗ ಲಭ್ಯವಾಗುವದಿಲ್ಲ. ಆದರೆ ಜೆ. ಡಾಕರು (ಇದು ಟಾಲ್‌ಸ್ಟಾಯರ ತಪ್ಪು) ಬರೆದ ನಿಮ್ಮ ಚರಿತ್ರೆಯನ್ನೋದಿದೆ. ಅದು ನನಗೆ ತುಂಬ ಹಿಡಿಸಿತಲ್ಲದೆ, ನಿಮ್ಮ ಪತ್ರವನ್ನು ಸರಿಯಾಗಿ ತಿಳಿದುಕೊಳ್ಳಲು ಸಹಾಯವಾಯಿತು. ಈಗ ನನ್ನ ಆರೋಗ್ಯ ಸರಿಯಾಗಿಲ್ಲ. ಆದುದರಿಂದ ನಿಮ್ಮ ಪುಸ್ತಕ ಮತ್ತು ನಿಮ್ಮ ಕಾರ್ಯವನ್ನು ಕುರಿತು ನನಗೆ ಹೇಳಬೇಕಾದ್ದನ್ನೆಲ್ಲ ಇಲ್ಲಿ ಬರೆಯಲಾರೆ. ಆದರೆ ಅವುಗಳನ್ನು ನಾನು ತುಂಬ ಮೆಚ್ಚಿದ್ದೇನೆ. ನನಗೆ ಸ್ವಲ್ಪ ಸ್ವಸ್ಥವಾದ ಕೂಡಲೆ ಬರೆಯುವೆ. ನಿಮ್ಮ ಗೆಳೆಯ ಮತ್ತು ಬಂಧು ಎಲ್ ಟಾಲ್‌ಸ್ಟಾಯ."

ಗಾಂಧಿಯವರು ಟಾಲ್‌ಸ್ಟಾಯರಿಗೆ ಆ ಮೇಲೆ ಬರೆದದ್ದು "೨೧-೨೪ ಕೋರ್ಟ್ ಚೇಂಬರ್ಸ್, ಕಾರ್ನರ್ ರಿಸಿಕ್ ಮತ್ತು ಅಂಡರ್ಸನ್ ರಸ್ತೆ, ಜೊಹಾನ್ಸಬರ್ಗ"ನಿಂದ ಆಗಸ್ಟ ೧೫, ೧೯೧೦ ನೆ ದಿನ. ಈ ಪತ್ರದಲ್ಲಿ ಗಾಂಧಿಯವರು ಟಾಲ್‌ಸ್ಟಾಯರ ಮೇಲಿನ ಪತ್ರವನ್ನು ಸ್ವೀಕರಿಸಿ ಅದಕ್ಕಾಗಿ ಧನ್ಯವಾದವನ್ನು ಅರ್ಪಿಸಿದ್ದಲ್ಲದೆ, "ನೀವು ನಿಮ್ಮ ಪತ್ರದಲ್ಲಿ ಮಾತು ಕೊಟ್ಟಂತೆ ನನ್ನ ಪುಸ್ತಕದ ವಿವರವಾದ ವಿಮರ್ಶೆಯನ್ನು ನಿರೀಕ್ಷಿಸುತ್ತಿದ್ದೇನೆ," ಎಂದು ಹೇಳಿದ್ದರು. ತಾವೂ ಕಾಲೆನ್‌ಬಾಕರು ಸೇರಿ ಟಾಲ್‌ಸ್ಟಾಯ ಆಶ್ರಮವನ್ನು ಸ್ಥಾಪಿಸಿ... ಸುದ್ದಿಯನ್ನೂ ಉಲ್ಲೇಖಿಸಿದ್ದರು. ಕಾಲೆನ್‌ಬಾಕರ ಮತ್ತು ಗಾಂಧಿಯವರ ಪತ್ರಗಳು ಅವುಗಳ ಸಂಗಡ ಬಂದ ಗಾಂಧಿಯವರ "ಇಂಡಿಯನ್ ಒಪಿನಿಯನ್" ವಾರ ಪತ್ರಿಕೆಯ ಅನೇಕ ಸಂಚಿಕೆಗಳೂ ಟಾಲ್‌ಸ್ಟಾಯರ ಗಾಂಧಿಯವರನ್ನು ಕುರಿತ ಕುತೂಹಲವನ್ನು ಹೆಚ್ಚಿಸಿದವು. ಸೆಪ್ಟೆಂಬರ ೬ (೧೯) ೧೯೧೦ ರ ತಮ್ಮ ದಿನಚರಿಯಲ್ಲಿ ಅವರು ಬರೆದುದು: "ಟ್ರಾನ್ಸ್‌ವಾಲ ಸತ್ಯಾಗ್ರಹ ಆಶ್ರಮದಿಂದ ಆನಂದದಾಯಕ ಸುದ್ದಿ ಬಂದಿದೆ." ಟಾಲ್‌ಸ್ಟಾಯರು ಆ ಸಮಯದಲ್ಲಿ ತುಂಬ ಮಾನಸಿಕ ವ್ಯಥೆ ಮತ್ತು ದೈಹಿಕ ಜಾಡ್ಯದಿಂದ ಬಳಲುತ್ತಿದ್ದರು. ಆದರೂ ಅವರು ಗಾಂಧಿಯವರ ಪತ್ರ ಬಂದ ದಿನವೇ ಅದಕ್ಕೆ ಉತ್ತರ ಬರೆದರು. ಅವರು ಸೆಪ್ಟೆಂಬರ ೫, ೬ (೧೮, ೧೯) ದಿನಗಳ ಸಂಜೆ ಹೊತ್ತಿಗೆ ಆ ಪತ್ರವನ್ನು ಹೇಳಿ ಬರೆಸಿದರು. ತಾ. ೭ (೨೦) ಕ್ಕೆ ಅದನ್ನು ತಿದ್ದಿ ಇಂಗ್ಲಿಷಿಗೆ ಅನುವಾದಿಸಲು ಚೆರ್ಟಕೋಫರಿಗೆ ಕಳಿಸಿದರು.

ಕೊನೆಯ ಪತ್ರ

ಚೆರ್ಟಕೋಫರು ಅದರ ಅನುವಾದದೊಂದಿಗೆ ತಮ್ಮ ಒಂದು ಪತ್ರವನ್ನೂ ಇರಿಸಿ ಗಾಂಧಿಯವರಿಗೆ ಕಳಿಸಿದರು. "ನನ್ನ ಮಿತ್ರ ಲಿಯೋ ಟಾಲ್‌ಸ್ಟಾಯರು ನಿಮ್ಮ ಆಗಸ್ಟ ೧೫ ರ ಪತ್ರವನ್ನು ಸ್ವೀಕರಿಸಿ ತಾವು ಸೆಪ್ಟೆಂಬರ ೭ ರಂದು ಬರೆದ ಉತ್ತರವನ್ನು ರಶಿಯನ್ ಮೂಲದಿಂದ ಅನುವಾದಿಸಲು ನನ್ನನ್ನು ಕೇಳಿಕೊಂಡಿದ್ದಾರೆ.

"ಶ್ರೀ ಕಾಲೆನ್‌ಬಾಕರ ವಿಷಯವಾಗಿ ನೀವು ಬರೆದುದೆಲ್ಲ ಟಾಲ್‌ಸ್ಟಾಯರಿಗೆ ತುಂಬ ಕುತೂಹಲವನ್ನುಂಟುಮಾಡಿದೆ. ಟಾಲ್‌ಸ್ಟಾಯರು ನಿಮಗೂ ನಿಮ್ಮ ಸಹಕಾರಿಗಳಿಗೂ ... ಶ್ಯತ್ಪೂರ್ವಕ ಶುಭಾಕಾಂಕ್ಷೆಗಳನ್ನು ... ಕಾರ್ಯಗಳಿಗೆ ಯಶಸ್ಸು ದೊರೆಯಲೆಂಬ ... ವಾದಗಳನ್ನೂ ಕಳಿಸಬಯಸುತ್ತಾರೆ. ... ಕಾರ್ಯಗಳ ಬಗ್ಗೆ ಅವರಿಗಾದ ಸಂತೋಷವನ್ನು ನೀವು ಸಂಗಡ ಇರುವ ಅವರ ಪತ್ರದ ... ವಾದದಿಂದ ತಿಳಿದು ಕೊಳ್ಳಬಲ್ಲಿರಿ ... ಅನುವಾದ ಮಾಡುವಾಗ ... ಆಗಿರಬಹುದು...

—ಮುಂದೆ ಪುಟ ...

ವಿಚಾರ ದ್ವಂದ್ವ

"ವರ್ಣ ವಿಮರ್ಶೆ"

ತಾರೀಖು ೨೦-೬-೪೯ ರ ಮತ್ತು ೪—೭—೪೯ ರ "ಕರ್ಮವೀರ" ಪತ್ರಿಕೆಯಲ್ಲಿ ಬರೆದ "ಜಾತಿಯು (ವರ್ಣವು) ಜನ್ಮದಿಂದಲೋ ಗುಣಕರ್ಮದಿಂದಲೋ" ಎಂಬ ವಿಷಯವನ್ನೋದಿ ಅನೇಕರಲ್ಲಿ ಜಾತಿಯು ಏತರಿಂದ ನಿರ್ಣಯಿಸಲ್ಪಡತಕ್ಕದ್ದೆಂದು ಸಂಶಯವುಂಟಾಗಿದೆ.

ನಮ್ಮ ಪ್ರಾಚೀನರು "ಪ್ರತಿಯೊಂದು ಜೀವಿಗೆ ಹಿಂದೆ ಜನ್ಮವಿತ್ತು. ಮುಂದೆಯೂ ಜನ್ಮವುಂಟು" ಎಂಬ ತಳಹದಿಯ ಮೇಲೆ ಸಂಪೂರ್ಣ ವರ್ಣಾಶ್ರಮಗಳ ವ್ಯವಸ್ಥೆಯನ್ನು ಮಾಡಿದ್ದಾರೆ. ಎಂದಿಗೂ ತಮ್ಮ ಮತ ಕೆಳಗಾಗುತ್ತದೆಂಬ ಭಯ ಅವರಿಗಿರಲಿಲ್ಲ. ಅಂಥಾ ಅಪವಾದಕ್ಕೆ ಪಾತ್ರರೂ ಅಲ್ಲ. ಶೂದ್ರರು ಬ್ರಾಹ್ಮಣಾಚಾರದಿಂದಲೂ ಬ್ರಾಹ್ಮಣರು ಶೂದ್ರಾಚಾರದಿಂದಲೂ ಪತಿತರಾಗುವರೆಂದು ಅವರಿಗೆಲ್ಲರಿಗೂ ಪ್ರಾಯಶ್ಚಿತ್ತ ವಿಧಿಸಿದ್ದಾರೆಯೇ ಹೊರತು ಕೇವಲ ಶೂದ್ರರಿಗೇ ಹಾಗೆ ವಿಧಿಸಲಿಲ್ಲ. ನಮ್ಮ ಮನಸ್ಸೇ ಧರ್ಮ ನಿರ್ಣಯಕ್ಕೆ ಕಾರಣವೆನ್ನುವ ಜನ್ಮ ಜನ್ಮಾಂತರಗಳ ತಿಳವು ತಿಳಿಯದಿರುವ ಸುಧಾರಕರೆನ್ನುವ ನವರಿಗೆ ಮಹರ್ಷಿಗಳ ಮನೋವೇಗವು ಹೇಗೆ ತಿಳಿಯಬೇಕು?

ಸಮಸ್ಯೆ ಮುಗಿಯದು

ಶ್ರೀಯುತರು ಬರೆಯುವರ ಸಿದ್ಧಾಂತವೆಂದು ಬರೆದು "ಅದು—ಮಾನವನ ವಿಶಾಸಕ್ಕೆ ಕೊಡಲಿ ಪೆಟ್ಟು ಹಾಕುವಂಥ ಘಾತಕ ಮನೋವೃತ್ತಿಯನ್ನು ಸೂಚಿಸುತ್ತದೆ" ಎಂದಿದ್ದಾರೆ. ಕಮ್ಮಾರ ವೃತ್ತಿಯಾದ ಕಬ್ಬಿಣ ಕುಟ್ಟುವದು, ಚಮ್ಮಾರ ವೃತ್ತಿಯಾದ ಚರ್ಮ ಹೊಲಿಯುವದು ನಿಂದ್ಯವೆಂದು ಬರೆಯುವರು ಬರೆದಿದ್ದಿಲ್ಲ. ಅವರವರಿಗೆ ಆಯಾ ವೃತ್ತಿಗಳು ಶ್ರೇಷ್ಠಗಳೆಂದೇ ಅವರಅಂಬೋಣ ಗೀತಾದಿ ಧರ್ಮಗ್ರಂಥಗಳಲ್ಲೂ ಇದನ್ನೇ ಹೇಳಿದೆ. ಓರ್ವಸ್ತ್ರೀಗೆ ತನ್ನ ಪತಿಯಲ್ಲದೆ ಬೇರೆಯವನು ಶ್ರೇಷ್ಠನೆನಿಸಲಾರನು. ಇವರ ಅಂಬೋಣವು "ಕಮ್ಮಾರರಿಗೆ ಕಬ್ಬಿಣ ಕುಟ್ಟುವಂತಹ, ಚಮ್ಮಾರರಿಗೆ ಚರ್ಮ ಹೊಲಿಯುವಂತಹ ನೀಚವೃತ್ತಿಯನ್ನು ವಿಭಾಗಿಸಿಕೊಟ್ಟು ಜನತೆಯನ್ನು ಹಾಳುಮಾಡಿ ಬಿಟ್ಟಿದ್ದಾರೆ" ಎಂದು ನಮ್ಮ ಪ್ರಾಚೀನರ ಮೇಲೆ ಆರೋಪ ಮಾಡುವಂತಿದೆ. ಇವರಾದರೂ ಆ ಆ ಕಾರ್ಯಗಳನ್ನು ಯಾರಿಗೆ ಹಂಚುವರು? ಅದು ನಿಂದ್ಯವೆಂದು ಇಂಥ ಮಹನೀಯರ ಅಭಿಪ್ರಾಯವನ್ನು ತಿಳಿದರೆ ಯಾರೂ ಆ ಕೆಲಸದಲ್ಲಿ ಪ್ರವೃತ್ತರಾಗಲಿಕ್ಕಿಲ್ಲ. ಯಾರು ಬೇಕಾದರೂ ತಮ್ಮ ತಮ್ಮ ಮನಸ್ಸಿಗೆ ಬಂದಂತಹ ವೃತ್ತಿಯಲ್ಲಿರಬಹುದೆಂದು ಇವರ ಅಂಬೋಣವಾದರೆ "ಗುಣಕರ್ಮದಿಂದಲೇ ಜಾತಿಭೇದ" ಎನ್ನುವ ವ್ಯವಸ್ಥಾಪಕರಾದವರಿಗೆ ಈ 'ಆರೋಪವು ತಪ್ಪಿದ್ದೇ? ವೇದಾಧ್ಯಯನಾದಿಗಳನ್ನು ವೃತ್ತಿಯನ್ನಾಗಿಟ್ಟುಕೊಂಡವರು ಚಪ್ಪಲಿ ಹೊಲಿಯುವ ವೃತ್ತಿಯನ್ನು ಕಂಡು ಹೀಯಾಳಿಸಲಿಕ್ಕಿಲ್ಲವೇ? ಅಂದಮೇಲೆ "ಗುಣಕರ್ಮಗಳಿಂದಲಾದರೂ ವರ್ಣವ್ಯವಸ್ಥೆ" ಎಂಬುವದು ಏತಕ್ಕೆ? "ದ್ರೋಣಾಶ್ವತ್ಥಾಮರು ಆ ಕಾಲದಲ್ಲಿ ಕ್ಷತ್ರಿಯ ವೃತ್ತಿಯವರಾದರೂ ಜನ್ಮತಃ ಬ್ರಾಹ್ಮಣರಾದ್ದರಿಂದ ಬ್ರಾಹ್ಮಣರೆಂದೇ ಕರೆಯುವ ರೂಢಿ ಇತ್ತು ಎಂದು ನಾವು ಈಗ ಹೇಳಿದರೆ ಮುಂದಿನ ಸುಧಾರಕರು ನಮ್ಮ ಸುಧಾರಣೆಯು ಸಂದೋರದೆ ಹಿಂದಿನ ಕಾಲದ ರೂಢಿಯೆಂದು ಇದನ್ನು ಆದರ್ಶವಾಗಿಟ್ಟುಕೊಳ್ಳದೆ ಬಿಟ್ಟುಬಿಡಲಿಕ್ಕಿಲ್ಲವೆ? ವರ್ಣವ್ಯವಸ್ಥೆಗೆ ಆಕೃತಿಯೇ ಕಾರಣವೆಂದು ಅವರು ಮೂಲಿಯುಬ್ಬಿಸಿ ಒಂದೇ ತಂದೆಯಲ್ಲಿ ಜನಿಸಿದ ಈರ್ವರನ್ನು ಅಥವಾ ಒಂದೇ ವೃತ್ತಿಯನ್ನು ಅನುಸರಿಸಿದ ಇಬ್ಬರನ್ನು ಆಕಾರ ಭಿನ್ನತೆಯಿಂದ ಭಿನ್ನ ಜಾತಿಯವರು ಎಂದರೆ ನಾವೇನು ಮಾಡುವದು?

ವಿಚಾರ್ಯ

ಶ್ರೀಕೃಷ್ಣನು "ವಿದ್ಯಾವಿನಯಸಂಪನ್ನೇ" "ಮಾಂಹಿ ಪಾರ್ಥ ವ್ಯಪಾಶ್ರಿತ್ಯ" ಎಂಬಿವೇ ಮೊದಲಾದ ಶ್ಲೋಕಗಳನ್ನು ಪರಸ್ಪರವಿರುದ್ಧವಾಗಿ ಹೇಳಿರುವನೆಂದು ಟೀಕಿಸಿದ್ದಾರೆ. "ಬ್ರಾಹ್ಮಣಕ್ಷತ್ರಿಯರನ್ನುಳಿದು ಬೇರಾವ ವಿಚಾರಶೀಲರೂ ಆ ಮಾತು ಯೋಗ್ಯ ಅನ್ನಲಿಕ್ಕಿಲ್ಲ" ಎಂದೂ ಉಲ್ಲೇಖಿಸಿದ್ದಾರೆ.

"ವಿದ್ಯಾವಿನಯ ಸಂಪನ್ನೇ" ಎಂಬ ಶ್ಲೋಕದ ಸಮತ್ವದ ಆದರ್ಶವು ಶ್ರೀಯುತ ಸುಧಾಕರರು ಬಗೆದಂತಿಲ್ಲ. ಅಲ್ಲಿ ವರ್ಣಿಸಿದ ಸಮತ್ವವೇ ಬೇರೆ. ಒಂದು ಸಭೆಯಲ್ಲಿ ಕೂಡಿದವರಲ್ಲಿ ಒಬ್ಬ ಗಾಯಕನಿರಬಹುದು. ಒಬ್ಬನರ್ತಕನಿರಬಹುದು. ಇನ್ನೊಬ್ಬ ವೈದಿಕನಿರಬಹುದು. ಮತ್ತೊಬ್ಬ ಮಾಯಿಕ (ಇಂದ್ರಜಾಲಿಕ) ನಿರಬಹುದು. ಇವರೆಲ್ಲರಿಗೂ ಸಮವಾಗಿ ನಡಕೊಳ್ಳಬೇಕೆಂದು ಅಂದರೆ ಅದು ಹೇಗೆ? ಒಬ್ಬನು ೧/೨ ಪೌಂಡು ಅಹಾರದವನಿರಬಹುದು. ಮತ್ತೊಬ್ಬನು ಎರಡು ಪೌಂಡು ಆಹಾರವನಿರಬಹುದು. ಇವರಿಬ್ಬರಿಗೂ ಸಮತೂಕದಿಂದ ಆಹಾರ ಕೊಡುವದೇ? ಅಥವಾ ಅವರವರಿಗೆ ಸಾಕಾಗುವಷ್ಟು ಅಹಾರ ಕೊಡುವದು ಸಮತ್ವವೇ? ಇವರಂತೆ ಗಾಯಕನಿಗೆ ವೈದಿಕ ಸಾಮಗ್ರಿಯನ್ನು ನರ್ತಕನಿಗೆ ಗಾಯನ ಸಾಮಗ್ರಿಯನ್ನೂ ವೈದಿಕನಿಗೆ ಗಾಯನ ಸಾಮಗ್ರಿಯನ್ನೂ ಅಥವಾ ಇವರೆಲ್ಲರಿಗೆ ಮಾಯಿಕನ ಸಾಮಗ್ರಿಗಳನ್ನೂ ಒದಗಿಸಿಕೊಟ್ಟು ನೀವೆಲ್ಲ ನಿಮ್ಮ ನಿಮ್ಮ ಕಾರ್ಯಗಳನ್ನು ಮಾಡಿತೋರಿಸಿರಿ ಎಂದು ಹೇಳಿದರೆ ಅವರೇನು ಮಾಡ್ಯಾರು? ಅಥವಾ ಅವರವರಿಗೆ ಯೋಗ್ಯ ಸಾಮಗ್ರಿಗಳನ್ನೊದಗಿಸುವದು ಸಮತ್ವವೋ? "ಮಾಂಹಿ ಪಾರ್ಥ ವ್ಯಪಾಶ್ರಿತ್ಯ" ಎಂಬ ಶ್ಲೋಕದಲ್ಲಿ ಯಾದರೂ ಕೃಷ್ಣನು ಇವರ –ಸಮತ್ವಕ್ಕೆ ವಿರೋಧವಾದ ಮಾತನ್ನೇನೂ ಹೇಳಲಿಲ್ಲ. "ಯಾರೇ ಆದರೂ ಆಗಲಿ. ನನ್ನನ್ನು ಶರಣು ಹೊಂದಿದವರು ಸದ್ಗತಿಯನ್ನು ಪಡೆಯುವರು" ಎಂದು ಅದರ ಅರ್ಥವೇ ಹೊರತು ಬೇರಿಲ್ಲ. ಲೋಕಪ್ರಸಿದ್ಧವಾದ ಉಚ್ಚನೀಚ ಭಾವವನ್ನವಲಂಬಿಸಿ ಆಯಾ ಜನರನ್ನು ಆಯಾ ಶಬ್ದಗಳಿಂದ ಬೋಧಿಸಿದ್ದಾನೆ. ಸ್ತ್ರೀಯರು, ವೈಶ್ಯರು, ಶೂದ್ರರು, ಪಾಪಯೋನಿಗಳೆಂದು ಅಂದಿಲ್ಲ. ಮನುಷ್ಯರ ಹೊರತಾದ ಪ್ರಾಣಿಗಳಿಗೆ ಹಾಗೆಂದು ಅಂದಿದ್ದಾನೆ.

ಲೋಕದಲ್ಲಿ ಉಚ್ಚ ನೀಚ ಕರ್ಮಗಳನ್ನು ಒಪ್ಪುತ್ತೀರಲ್ಲವೆ? ಆಯಾ ಕರ್ಮಗಳಿಗೆ ಬೋಧಕ ಶಬ್ದಗಳಿವೆಯಲ್ಲವೆ? ಆ ಆ ಶಬ್ದಗಳಿಂದ ಅವರವರನ್ನು ಸಂಬೋಧಿಸಿವರೆ ಮಹಾಪರಾಧವೇ? ಇನ್ನು ಉಚ್ಚನೀಚ ಕರ್ಮ ಭಾವನಾದಿಗಳನ್ನೊಪ್ಪದಿದ್ದಲ್ಲಿ ಪಾಪಯೋನಿ ಶಬ್ದವು ನಿಮಗೆ ಯಾವ ಅರ್ಥವನ್ನು ಕೊಟ್ಟಿತು? "ತೇಪಿ ಯಾಂತಿ ಪರಾಂ ಗತಿಂ" ಎಂಬಲ್ಲಿ ಪರಗತಿ ಯಾವದು? ಇಷ್ಟಿರುವಾಗ ಶ್ರೀಕೃಷ್ಣನು ತಮ್ಮ ಪಾಂಡಿತ್ಯಕ್ಕೆ ಸೊನ್ನೆ ಸುತ್ತುವಂತೆ ಹೇಳಿದನೆಂದು ವ್ಯರ್ಥವಾಗಿ ಅವನಲ್ಲಿ ಅಪವಾದ ಹೊರಿಸಬಾರದು.

ಜಾತಿ—ಹೃದಯ

ಜಾತಿ ಬೇರೆಯಾದಾಗ ಹೃದಯ ಒಂದಾಗುವದಿಲ್ಲವೆಂಬ ಮಾತು ಇವರಿಗೆ ಪಲ್ಲವಿಯಾಗಿದೆ. ಇದು ಕೇವಲ ಅನುಭವವಿರುದ್ಧವಾದ ಮಾತಲ್ಲವೇ? ಗುಣಕರ್ಮಗಳಿಂದಲಾದರೂ ಜಾತಿಭೇದ ವ್ಯವಸ್ಥಾಪನೆಗೆ ಹೊರಟಿ ಇವರು ಆ ರೀತಿ ಭಿನ್ನ ಭಿನ್ನ ಗುಣಕರ್ಮಗಳುಳ್ಳವರೊಳಗೆ ಹೊಂದಿಕೆಯಾಗಿರುವದೂ ಒಂದೇ ಗುಣಕರ್ಮಗಳುಳ್ಳವರೊಳಗೆ ಕದನಗಳಾಗುತ್ತಿರುವದೂ ಇವರಿಗೆ ತಿಳಿದಿರಲಿಲ್ಲವೇ? ಇದನ್ನೆಲ್ಲ ಮುಚ್ಚಿಟ್ಟು ಹೀಗೆ ಬರೆಯುತ್ತಿರುವದು ವಂಚಕತನವಲ್ಲದೆ ಮತ್ತೇನು?

"ಹುಟ್ಟುವ ಮಕ್ಕಳು ಮಕ್ಕಳಾಗಿಯೇ ಹೊರತು ಬ್ರಾಹ್ಮಣಾದಿ ನಾಮಧಾರಿಗಳಾಗಿ ಹುಟ್ಟುವದಿಲ್ಲ" ಎಂದು ಬರೆದಿದ್ದಾರೆ. ಆ ಮಕ್ಕಳು ತಾವು ಮಕ್ಕಳೆಂದು ತಿಳಿಯುತ್ತಲೇ ಹುಟ್ಟುತ್ತಾರೆಯೋ? ಇದೆಂಥ ಮಾತು? ತಾವು ಮನುಷ್ಯರು ಎನ್ನುತ್ತಾರೆಯೋ? ಅಯ್ಯೋ ಪಾಪ! ಆ ಮಕ್ಕಳು ಪಶುಪ್ರಾಣಿಗಳಲ್ಲ, ಮನುಷ್ಯರು, ಮಕ್ಕಳು, ಬ್ರಾಹ್ಮಣರು, ಶೂದ್ರರು, ಈ ಎಲ್ಲಾ ವಿಷಯವನ್ನೂ ಕ್ರಮವಾಗಿ ತಿಳಿದುಕೊಳ್ಳುವರೇ ಹೊರತು ತಮ್ಮ ಗುಣಕರ್ಮಗಳ ಅರಿವಾಗಲಿ ಅದರಿಂದ ಜಾತಿಯ ತಿಳವಳಿಕೆಯಾಗಲಿ ಅವರಿಗಾಗುವದಿಲ್ಲ. ಯಾವ ಅರಿವೂ ಇಲ್ಲದಿರುವ ಆ ಮಕ್ಕಳಿಗೆ ಬ್ರಾಹ್ಮಣಾದಿ ನಾಮಗಳು ಮಾತ್ರ ತಿಳಿಯುವದಿಲ್ಲವೆಂದು ಆ ಬ್ರಾಹ್ಮಣಾದಿ ನಾಮಗಳ ಮೇಲೆ ಮಾತ್ರ ಯಾಕೆ ಇಂಥ ಕೃಪಾಕಟಾಕ್ಷ?

ಜನ್ಮದಿಂದಲೇ ವರ್ಣವ್ಯವಸ್ಥೆಯಾದ್ದರಿಂದ "ನಮ್ಮ ಹಿಂದುಗಳನ್ನೆಲ್ಲ ಬಲಾತ್ಕರಿಸಿ ಮುಸಲ್ಮಾನರನ್ನಾಗಿಯೂ ಕ್ರಿಶ್ಚಿಯನ್ನರನ್ನಾಗಿಯೂ ಮಾಡಿರುತ್ತಾರೆ. ಅದಲ್ಲದಿದ್ದರೆ ಅವರ ಸಂಖ್ಯೆ ಇಷ್ಟು ಹೆಚ್ಚಾಗುತ್ತಿರಲಿಲ್ಲ. ಅದರಿಂದಲೇ ಭಾರತಾಂಬೆಯು ಇಂದು ಚೂರು ಚೂರಾಗಿ ಹೋಗಿದ್ದಾಳೆ" ಎಂಬಿವೇ ಮುಂತಾದ ದೋಷಾರೋಪಣೆ ಮಾಡಿದ್ದಾರೆ. ಅಯ್ಯೋ ಇವರಿಗೇಕೆ–ಇಷ್ಟು ಸಂಕುಚಿತ ಭಾವನೆ? ನಮ್ಮೀ ಭರತ ಭೂಮಿಯಲ್ಲಿ ಜನಿಸಿದವರಲ್ಲಿ ಹಿಂದು, ಮುಸ್ಲಿಮ್, ಕ್ರಿಸ್ತ ಎಂಬ ಭೇದ ಭಾವನೆ ಏಕೆ ಮಾಡಬೇಕು? ಎಲ್ಲರೂ ಭಾರತಾಂಬೆಯ ಪುತ್ರರು. ಭಾರತೀಯರು, ಹಿಂದುಗಳು ಹೀಗೆ ಒಂದೇ ಭಾವನೆಯನ್ನು ಪ್ರಥಮತಃ ಹಬ್ಬಿಸಿದ್ದರೆ ಈ ಭಾರತಾಂಬೆಯು ಯಾಕೆ ಚೂರುಚೂರಾಗುತ್ತಿದ್ದಳು? ಆಹಾ! ಎಂಥ ತಿಳವಳಿಕೆಯಿದು? ಪರರಿಗೆ "ನೀವು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂದು ಭೇದಭಾವನೆಯನ್ನು ಮಾಡಬಾರದು. ಮನುಷ್ಯರೊಂದೇ ಜಾತಿಯವರು" ಎಂಬ ಬೋಧವನ್ನು ಹೇಳುತ್ತ ತಾವು ಮಾತ್ರ ಮುಸ್ಲಿಮ್, ಕ್ರೈಸ್ತ, ಹಿಂದು ಮುಂತಾಗಿ ಭೇದವೆಣಿಸಬಹುದೇ?

— ರಾಮಚಂದ್ರಶಾಸ್ತ್ರಿಸೂರಿ

ಬುದ್ಧಿಶಕ್ತಿ ಮಾಪನ

ಈ ವಾರದ "ಕರ್ಮವೀರ" ವಾರ ಪತ್ರಿಕೆಯಲ್ಲಿ ಮನುಷ್ಯನ ಬುದ್ಧಿಶಕ್ತಿ ಅಳೆಯುವ ಯಂತ್ರದ ವಿಚಾರವನ್ನು ಮತ್ತು ಸದರಿ ಯಂತ್ರದ ಪರೀಕ್ಷೆಯಿಂದ ಅನೇಕ ವಿಶ್ವ ಮೇಧಾವಿಗಳಿಗೆ ದೊರೆತ ನಂಬರ್‌ಗಳನ್ನೂ ಗಮನಿಸಿ ನೋಡಿದ್ದಾಯಿತು. ಪ್ರಪಂಚದಲ್ಲಿ ಅನೇಕ ಬುದ್ಧಿವಂತರ ನಂಬರುಗಳನ್ನೆಲ್ಲಾ ನೋಡಿದೆವು. ಬೆಂಗಳೂರಿನ ಸರ್ ಸಿ. ವಿ. ರಾಮನ್‌ರಿಗೆ ದೊರೆತ ನಂಬರುಗಳನ್ನು ನೋಡಿ[redacted]ದೇ ಬೆಂಗಳೂರಿನಲ್ಲಿ ಇರುವ ಮಹಾ ಪ್ರಖ್ಯಾತಿ ಹೊಂದಿದ ಶ್ರೀಮಾನ್ ಗೋಪಾಲರಾಯರು ಸರ್ ಸಿ. ವಿ. ರಾಮನ್‌ರನ್ನು ತಮ್ಮ ಬಲೆಗೆ ತಮ್ಮ ಬುದ್ಧಿಶಕ್ತಿಯಿಂದ ಬಹು ಸುಲಭವಾಗಿ ಹಾಕಿದ ವಿಷಯವು ಎಲ್ಲರಿಗೂ ತಿಳಿದಿದೆ. ಅಂಥಾ ಮಹಾ ಮೇಧಾಶಕ್ತಿಯುಳ್ಳ ಶ್ರೀಮಾನ್ ಗೋಪಾಲರಾಯರಿಗೆ ಸದರಿ ಬುದ್ಧಿಶಕ್ತಿ ಅಳೆಯುವ ಯಂತ್ರದ ಮೂಲಕ ಎಷ್ಟು ನಂಬರು ಬರುತ್ತದೆ?

— ಎಸ್. ಗಂಗಾಧರ ಶಾಸ್ತ್ರಿ

[ಶ್ರೀ ಶಾಸ್ತ್ರಿಯವರ ಜಿಜ್ಞಾಸೆ ಸ್ವಾರಸ್ಯವೇ ಆಗಿದೆ. ಆದರೆ ಗೋಪಾಲರಾಯರು ಆ ಯಂತ್ರದ ಮುಂದೆ ಪರೀಕ್ಷೆಗೊಳಗಾಗಲು ಸಿದ್ಧರಿರುವರೆ ಎಂಬುದೀಗ ಪ್ರಶ್ನೆ! ಕನಿಷ್ಠ ಅವರ ಕೈಬರಹವಾದರೂ ಸಿಕ್ಕಿದರೆ ಆ ಲೇಖದ ಕರ್ತೃಗಳಾದ ಡಾಕ್ಟರ ಮಹಾಶಯರು ಒಂದು ಕೈ ನೋಡಿಬಿಡಬಹುದೇನೊ!

— ಸಂ]

ಆಹಾರ ಕೊರತೆಯನ್ನು ಹೋಗಲಾಡಿಸುವದು

(೧)

ಕೊರತೆ

ನಿಯಂತ್ರಣವನ್ನು ಹೇರಿದ್ದು ಮತ್ತು ಸೀದಾ ಪದ್ಧತಿಯನ್ನು ಪ್ರಾರಂಭಿಸಿದ್ದು ದೊಡ್ಡ ತಪ್ಪು ಎಂದು ನನ್ನ ನಾಲ್ಕು ವರ್ಷಗಳ ಅನುಭವಗಳಿಂದ ನನ್ನ ಮನವರಿಕೆಯಾಗಿದೆ. ಆಹಾರ ಕೊರತೆಯು ನೂರಕ್ಕೆ ೧೦ ರಷ್ಟೆಂದು ಪಂಡಿತರು ಅಂದಾಜುಮಾಡಿದರೆ, ಸರಕಾರದವರು ಇದು ೧೦೦ ಕ್ಕೆ ೬ ರಷ್ಟೆಂದು ಹೇಳುವರು. ಆದರೆ ಹಿರಿಯೋಲಗದಲ್ಲಿ ಇತ್ತೀಚೆ ಕೊಟ್ಟ ಅಂಕಿ ಸಂಖ್ಯೆಗಳನ್ನು ನೋಡಿದರೆ ಆ ಕೊರತೆ ನೂರಕ್ಕೆ ೬ ರಷ್ಟೆಂದೆನಿಸುವದು. ಹಿಂದುಸ್ಥಾನದಂಥ ವಿಶಾಲದೇಶದಲ್ಲಿ ಈ ಕೊರತೆಯನ್ನು ಹಿಂಗಿಸಿಕೊಳ್ಳುವದೇನು ಅಸಾಧ್ಯವಲ್ಲ.

ಅಕ್ಕಿ ಮತ್ತು ಗೋದಿ

ಹೆಚ್ಚಿನ ಉತ್ಪಾದನೆಯನ್ನು ಬಿಟ್ಟುಗೊಟ್ಟರೂ ಆಹಾರ ಪದಾರ್ಥಗಳ ಉಪಯೋಗದಲ್ಲಿ ಹೆಚ್ಚು ದಕ್ಷತೆಯನ್ನು ತೆಗೆದುಕೊಂಡದ್ದಾದರೆ ಈ ಕೊರತೆಯನ್ನು ಹೋಗಲಾಡಿಸಬಹುದು. ದೇಶದಲ್ಲಿ ಅಕ್ಕಿ ಮತ್ತು ಗೋದಿ ಇವೆರಡು ಮಹತ್ವದ ಆಹಾರ ಪದಾರ್ಥಗಳು. ಕೈಯಿಂದ ಕುಟ್ಟಿದ ಅಕ್ಕಿಯಿಂದ ನೂರಕ್ಕೆ ೨೦ ರಷ್ಟು ಅಕ್ಕಿಯು ಉಳಿತಾಯವಾಗುವದೆಂದು ಮಗನವಾಡಿಯಲ್ಲಿಯ ನಮ್ಮ ಆಶ್ರಮದಲ್ಲಿಯ ಅನುಭವದಿಂದ ಹೇಳಬಹುದು. ಇದರಿಂದ ಆಹಾರ ಪದಾರ್ಥಗಳ ಉಳಿತಾಯವಾಗುವದಲ್ಲದೆ ಪೌಷ್ಟಿಕತೆಯೂ ಹೆಚ್ಚುವದು. ಮನೆಯಲ್ಲಿ ಬೀಸೂಕಲ್ಲಿನಲ್ಲಿ ಬೀಸಿದ ಹಿಟ್ಟಿನಿಂದ ಸ್ವಲ್ಪ ಉಳಿತಾಯವಾಗುವದು. ಮಧ್ಯಪ್ರಾಂತ ಸರಕಾರದ ಮಂತ್ರಿಗಳೊಬ್ಬರು ಕೊಟ್ಟ ಅಂಕಿ ಸಂಖ್ಯೆಗನುಸಾರವಾಗಿ ಶ್ರೀ ವಿನೋಬಾ ಇವರು ಈ ಉಳಿತಾಯವು ನೂರಕ್ಕೆ ೧೫ ರಷ್ಟು ಎಂದು ಸಾರಿರುವರು. ಉಳಿತಾಯದ ಈ ಅಂಕೆಯು ನೂರಕ್ಕೆ ೧೫ ರಷ್ಟೋ ೨೦ ರಷ್ಟೋ ಎಂಬುದರ ವಿಚಾರ ಮಾಡುವದಕ್ಕೆ ನಾವೇನು ತಲೆಯುಬೇಕಿಲ್ಲ. ಏನೇ ಆದರೂ ಕಳೆದ ವರುಷ ಬಂದ ೧೦೦ ಕ್ಕೆ ೬ ರಷ್ಟು ಕೊರತೆಗಿಂತ ಅದು ಹೆಚ್ಚಾಗಿದೆ ಎಂಬುದು ನಿರ್ವಿವಾದವಾಗಿದೆ.

ಅದುದರಿಂದ ಅಕ್ಕಿ ಮತ್ತು ಗೋದಿಯನ್ನು ಗಿರಣಿಗಳಲ್ಲಿ ಹಾಕಿಸಬಾರದೆಂದು ಕೇಂದ್ರ ಮತ್ತು ಪ್ರಾಂತೀಯ ಸರಕಾರದವರು ವಿಧಿಸುವದು ಕರ್ತವ್ಯವಾಗಿದೆ. ಅಖಿಲ ಭಾರತ ಗ್ರಾಮೋದ್ಯೋಗಸಂಘದವರು ಸೂಚಿಸಿದಷ್ಟು ವಿಧಾನಗಳನ್ನು ಜಾರಿಯಲ್ಲಿ ತರಲಿಕ್ಕೆ ಬೇಕೆಂದೂ ವಿಧಿಸುವದವಶ್ಯವಾಗಿದೆ. ಕೂಡಲೆ ಇವೆರಡು ಉಪಾಯಗಳನ್ನು ಜಾರಿಯಲ್ಲಿ ತಂದದ್ದಾದರೆ ನಿಯಂತ್ರಣಗಳ ಅವಶ್ಯಕತೆಯೂ ಉಳಿಯದು. ಸೀದಾಪದ್ಧತಿಯೂ ತಂತಾನೆ ಅನವಶ್ಯವೆನಿಸುವದು, ಅಲ್ಲದೆ ನಮ್ಮ ಬಡ ರಾಷ್ಟ್ರದ ಸಂಪತ್ತಿನೊಳಗಿಂದ ಪ್ರತಿವರುಷ ೨೫-೩೦ ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿ ಹೊರಗಿನಿಂದ ಆಹಾರ ಪದಾರ್ಥಗಳನ್ನು ತರಿಸುವ ಅವಶ್ಯಕತೆಯೂ ಉಳಿಯದು. ನಿಯಂತ್ರಣಗಳನ್ನು ತೆಗೆದು ಹಾಕಿ ಸೀದಾ ಪದ್ಧತಿಗೆ ಅರ್ಧಚಂದ್ರ ಕೊಟ್ಟದ್ದಾದರೆ ಕೋಟಿಗಟ್ಟಲೆ ರೂಪಾಯಿಗಳನ್ನು ಸಂಬಳ ಮತ್ತು ತುಟ್ಟಿ ಭತ್ತೆಗಾಗಿ ಹೀರುವ ಅನವಶ್ಯಕ ಅಧಿಕಾರಿಗಳನ್ನೂ ಮನೆಗೆ ಕಳಿಸಲು ಅನುಕೂಲವಾಗುವದು. ಈ ಪದ್ಧತಿಯನ್ನು ಬಿಟ್ಟುಗೊಡುವದರಿಂದ ನರಳುವವರಿಗೆ ಬೇರೆ ರೀತಿಯಿಂದ ಸಹಾಯ ಸಿಕ್ಕುವದು. ತಲೆ ತಲೆಮಾರುಗಳಿಂದ ಸಣ್ಣ ಕಾಳುಗಳನ್ನು ತಿನ್ನುತ್ತಿದ್ದ ದೇಶದಲ್ಲಿಯ ಬಡ ವರ್ಗವು ಈ ಸೀದಾಪದ್ಧತಿ ಜಾರಿಯಲ್ಲಿ ಬಂದಂದಿನಿಂದ ಅದೊಂದು ಬಗೆಯ ದೊಡ್ಡತನವೆಂದು ಪಾಲಿಶ್ ಮಾಡಿದ ಅಕ್ಕಿಯನ್ನು ತಿನ್ನಹತ್ತಿರುವದು- ಪಾಲಿಶ ಮಾಡಿದ ಅಕ್ಕಿಯನ್ನು ತಿನ್ನುವುದು ಕಡಮೆ ಪುಷ್ಟಿಕರವಾಗಿರುವದಲ್ಲದೆ ಪೌಷ್ಟಿಕ ಆಹಾರವಿಲ್ಲದ್ದಕ್ಕಾಗಿ ಬಗೆಬಗೆಯ ಬೇನೆಗಳಿಗೂ ಅವರು ತುತ್ತಾಗುವರು. ಈ ಜನರು ಮತ್ತೆ ಸಣ್ಣ ಕಾಳುಗಳನ್ನು ತಿನ್ನಹತ್ತುವರು.

ಸಣ್ಣ ಕಾಳುಗಳು

ಈ ಪ್ರಾಂತದಲ್ಲಿ ಜೋಳ, ಸಜ್ಜೆ, ಕೋರಾ, ವರಿಗಾ, ಸಾವಿ ಮೊದಲಾದ ಸಣ್ಣ ಧಾನ್ಯಗಳ ಅಂಕಿ ಸಂಖ್ಯೆಗಳ ಪರಿಸ್ಥಿತಿ ಇಂತಿದೆ. ೧೯೪೭-೪೮ ರಲ್ಲಿ ೫೩.೮೮ ಲಕ್ಷ ಎಕರೆ ಭೂಮಿಯಲ್ಲಿ ಈ ಕಾಳುಗಳನ್ನು ಬಿತ್ತಲಾಗಿದ್ದರೆ ೧೯೪೮-೪೯ ರಲ್ಲಿ ೫೨.೨೪ ಲಕ್ಷ ಎಕರೆ ಭೂಮಿಯಲ್ಲಿ ಇವನ್ನು ಬಿತ್ತಲಾಯಿತು. ಇದರಿಂದ ೧.೬೩ ಲಕ್ಷ ಎಕರೆ ಭೂ ಪ್ರದೇಶ ಮಾತ್ರ ಕಡಿಮೆಯಾದಂತಾಯಿತು. ಅದೇ ರೀತಿ ಭತ್ತ ಬೆಳೆದ ಭೂ ಪ್ರದೇಶವೂ ೧.೨೬ ಲಕ್ಷ ಎಕರೆಯಷ್ಟು ಕಡಮೆಯಾಯಿತು. ಈ ಮೂರು ಲಕ್ಷ ಎಕರೆ ಭೂಮಿಯಲ್ಲಿ ರೊಕ್ಕದ ಬೆಳೆಯನ್ನು ಬೆಳೆದಿರಲಿಕ್ಕೆ ಬೇಕು, ಆಹಾರ ಪದಾರ್ಥಗಳನ್ನು ಬೆಳೆವ ಭೂಮಿಯನ್ನು ಇಂತು ಕಡಮೆ ಮಾಡಿದ್ದಕ್ಕೆ ಸರಕಾರ ಮತ್ತು ಸಾರ್ವಜನಿಕರಿಬ್ಬರೂ ಹೊಣೆಗಾರರಿರುವರು.

ತಂಬಾಕು

ತಂಬಾಕು ಬೆಳೆಯಲಿಕ್ಕೆ ಪೂರ್ಣ ನಿರ್ಬಂಧ ಹಾಕದಿದ್ದರೂ ಅದರ ಉತ್ಪಾದನೆಯನ್ನು ಬಹಳಮಟ್ಟಿಗೆ ಕಡಮೆ ಮಾಡುವದು ಅವಶ್ಯವಾಗಿದೆ. ತಂಬಾಕಿನ ಉತ್ಪಾದನೆಯನ್ನು ನಿಯಮಿತಗೊಳಿಸುವತ್ತ ಪ್ರಕಾಶಂ ಮಂತ್ರಿಮಂಡಳವು ಲಕ್ಷ ತೆಗೆದುಕೊಳ್ಳುತಿದ್ದಿತು. ಆದರೆ ಈ ಧೋರಣವನ್ನು ಮುಂಬರಿಸಲು ಪರಿಸ್ಥಿತಿ ಅನನುಕೂಲವಾಯಿತು. ಕೇಂದ್ರ ಮತ್ತು ಪ್ರಾಂತೀಯ ಸರಕಾರಗಳೆರಡೂ ತಂಬಾಕು ಉತ್ಪಾದನೆಯನ್ನು ನಿರ್ಬಂಧಿಸಬೇಕೆಂದು ಕೇಳಿಕೊಳ್ಳುತ್ತೇನೆ. ಕೂಡಲೆ ಹಾಗೆ ಮಾಡುವದು ಸಾಧ್ಯವಿಲ್ಲದಿದ್ದರೆ ಬಹಳ ಮಟ್ಟಿಗೆ ಅದನ್ನು ಕಡಮೆ ಮಾಡತಕ್ಕದ್ದು.

ಕಬ್ಬು

ಮದ್ರಾಸ ಸರಕಾರದವರು ಸಂಪೂರ್ಣ ಮದ್ಯಪಾನ ಪ್ರತಿಬಂಧದವನ್ನು ಜಾರಿಯಲ್ಲಿ ತಂದಿರುವರು. ಕೆಲವರು ವಿಲಂಬ ಧೋರಣವನ್ನು ಇಟ್ಟುಕೊಂಡಿದ್ದರೂ ಕೇಂದ್ರ ಮತ್ತು ಪ್ರಾಂತೀಯ ಸರಕಾರಗಳು ಮದ್ಯಪಾನ ಪ್ರತಿಬಂಧ ಧೋರಣಕ್ಕೆ ಬದ್ಧವಾಗಿರುವವು. ದೇಶದಲ್ಲೆಲ್ಲ ಕೂಡಲೆ ಮದ್ಯಪಾನವನ್ನು ಪ್ರತಿಬಂಧಿಸಬೇಕೆಂದು ನಾನು ಪ್ರತಿಪಾದಿಸುತ್ತೇನೆ. ಹಾಗೆ ಮಾಡಿದ್ದಾದರೆ ಕೋಟಿಗಟ್ಲೆ ಶಿಂದಿ ಗಿಡಗಳು, ಟೆಂಗಿನ ಮತ್ತು ಇತರ ಗಿಡಗಳು ಬೆಲ್ಲ ಮತ್ತು ಸಕ್ಕರೆ ತಯಾರಮಾಡಲಿಕ್ಕೆ ಲಭ್ಯವಾಗುವವು. ಇದರಿಂದ ನಮಗೆ ಬೇಕಾದಷ್ಟು ಬೆಲ್ಲ ಸಕ್ಕರೆ ಉತ್ಪಾದಿತವಾಗುವದಲ್ಲದೆ ಹೊರಗೆ ಕಳಿಸಲೂ ಸ್ವಲ್ಪ ಉಳಿಯುವದು. ಅತ್ಯಂತ ಫಲವತ್ತಾದ ಭೂಮಿಯಲ್ಲಿ ಇಂದು ಕಬ್ಬು ಬೆಳೆಯಲಾಗುತ್ತದೆ. ಕಬ್ಬು ಬೆಳೆಯುವದಕ್ಕಾಗಿ ಪ್ರತಿ ವರ್ಷ ಬಹಳ ಹಣವನ್ನು ವೆಚ್ಚ ಮಾಡಬೇಕಾಗುವದು. ಮೇಲೆ ಹೇಳಿದಂತೆ ಶಿಂದಿಬೆಲ್ಲವನ್ನು ತಯಾರು ಮಾಡುವದರಿಂದ ಇದೆಲ್ಲ ಹಣದ ಉಳಿತಾಯವಾಗುವದಲ್ಲದೆ ಆಹಾರ ಪದಾರ್ಥಗಳನ್ನು ಬೆಳೆವುದಕ್ಕೆ ಈ ಫಲವತ್ತಾದ ಭೂಮಿಗಳೂ ದೊರೆಯುವವು. ಈ ಶಿಂದೀ ಗಿಡಗಳಾದರೋ ಹಲವಾರು ವರುಷಗಳವರೆಗೆ ಏನೂ ವೆಚ್ಚ ಮತ್ತು ಶ್ರಮವಿಲ್ಲದೆ ಉಪಯೋಗಕ್ಕೆ ಬರುವವು. ಕಬ್ಬು ಬೆಳೆವುದನ್ನು ಬಿಟ್ಟುಗೊಡುವದರಿಂದ ಕೆಲವೊಂದು ವಿಶಿಷ್ಟ ಹಿತಸಂಬಂಧಗಳ ಲಾಭದಲ್ಲಿ ಕೈಹಾಕಿದಂತಾಗುವದು. ಆದರೆ ಇಂದು ಆಹಾರ ಪದಾರ್ಥಗಳಿಗೆ ಇಡೀ ರಾಷ್ಟ್ರದಲ್ಲಿ ಪ್ರಥಮ ಪ್ರಾಶಸ್ತ್ಯವನ್ನು ಕೊಡಬೇಕಾಗಿದ್ದುದರಿಂದ, ಇಡೀ ದೇಶದ ಲಾಭದ ದೃಷ್ಟಿಯಿಂದ ಕೆಲ ಗಿರಣಿಗಾರರು ಮತ್ತು ಕಬ್ಬು ಬೆಳೆವವರು ಸ್ವಾರ್ಥತ್ಯಾಗ ಮಾಡಲು ಸಿದ್ಧರಿರಲಿಕ್ಕೆ ಬೇಕಾಗುವದು.

ಬೀಜ ಮತ್ತು ಗೊಬ್ಬರ

ಅಧಿಕ ಆಹಾರ ಪದಾರ್ಥಗಳನ್ನು ಬೆಳೆಯಿರಿ ಎಂಬ ಚಳವಳಿಯ ಕಾಲಕ್ಕೆ ಬೀಜ ಮತ್ತು ಗೊಬ್ಬರದ ಪೂರೈಕೆಯತ್ತ ಮತ್ತು ನೀರಾವರಿ ಹಾಗು ಗಟಾರ ನೀರಿನ ಸೌಕರ್ಯದ ಕಡೆಗೂ ಹೆಚ್ಚು ಗಮನವನ್ನು ಕೊಡಲಾಗಿತ್ತು. ಕೊನೆಯದನ್ನು ಈಗ ಸಂಪೂರ್ಣವಾಗಿ ಅಲಕ್ಷಿಸಿದ್ದಾಗಿದೆ; ಅಕಾಲ ವೃಷ್ಟಿಯ ಪರಿಣಾಮವಾಗಿ ಒಕ್ಕಲಿಗ ಪಟ್ಟ ಶ್ರಮವೆಲ್ಲ ನಿರರ್ಥಕವಾಗುತ್ತದೆ. ಅದೇ ರೀತಿ ನೆರೆಹಾವಳಿ ಮತ್ತು ನೀರಲ್ಲಿ ಭೂಮಿ ಮುಳುಗುವದರಿಂದಲೂ ಒಕ್ಕಲಿಗರ ಶ್ರಮ ವ್ಯರ್ಥವಾಗುತ್ತದೆ. ಆದುದರಿಂದ ತಾತ್ಪೂರ್ತಿಕ ಗಟಾರಗಳ ಸೌಕರ್ಯವನ್ನಾದರೂ ಒದಗಿಸಿ ಕೊಡುವ ಉಪಾಯಗಳನ್ನು ಕೂಡಲೆ ಕೈಕೊಳ್ಳಬೇಕು.

ಅವಶ್ಯಕ ಗುಣಕಾರಿಯಾದ ಗೊಬ್ಬರವನ್ನು ಸಾಕಷ್ಟು ಪ್ರಮಾಣದಲ್ಲಿ ಒದಗಿಸುವತ್ತ ಗಮನಿಸಬೇಕು. ನನ್ನ ಆಶ್ರಮವು ಕುಸುರು ಪ್ರದೇಶದ (ನದಿ ಮುಖ ಭೂಮಿ) ಹತ್ತರ ಇದೆ. ಸುತ್ತಲೆಲ್ಲ ತರಿ ಮತ್ತು ಕುಷ್ಕಿ ಬಿತ್ತನೆ ನಡೆಯುವದು. ಸಾಕಷ್ಟು ಪೂರೈಕೆಯು ಸಿಕ್ಕದಿದ್ದುದಕ್ಕಾಗಿ ನಾನು ಮತ್ತು ರೈತರು ಎಷ್ಟೊಂದು ತೊಂದರೆಗಳಿಗೊಳಗಾಗುತ್ತಿರುವದರ ಅನುಭವ ವ್ಯಕ್ತಿಶಃ ನನಗೆ ಇದೆ. ಅತ್ಯುತ್ತಮ ಗೊಬ್ಬರವೆಂದರೆ ಪಾಯಿಖಾನೆಯಲ್ಲಿಯ ಗೊಬ್ಬರ. ಸಾಕಷ್ಟು ಪ್ರಮಾಣದಲ್ಲಿ ಅದು ಸಿಕ್ಕುವುದಿಲ್ಲ. ಅದರ ತರುವಾಯ ಹೆಚ್ಚು ಉಪಯುಕ್ತ ಗೊಬ್ಬರವೆಂದರೆ ಹಿಂಡಿ ಗೊಬ್ಬರ. ಹೊಲಸಿನ ಗೊಬ್ಬರವನ್ನು ಇಲ್ಲಿ ತಯಾರ ಮಾಡಲಾಗುವದಿಲ್ಲ. ತೀರ ಕೆಟ್ಟ ಗೊಬ್ಬರವೆಂದರೆ ರಾಸಾಯನಿಕ ಗೊಬ್ಬರವು. ಅದರಿಂದ ಭೂಮಿಯ ಫಲವತ್ತತೆ ಕಡಮೆಯಾಗುವದಲ್ಲದೆ ಆಹಾರ ಸತ್ವಗಳ ಪೌಷ್ಟಿಕತೆಯೂ ಕಡಮೆಯಾಗುವದು. ಹಿಂಡಿಯ ಮೇಲೆ ನಿಯಂತ್ರಣ ಹಾಕುವದರಿಂದ ಮತ್ತು ತೆಗೆಯುವದರಿಂದ ನಮಗೆ ಬಹಳ ತೊಂದರೆಯಾಗಹತ್ತಿದೆ. ಅದುದರಿಂದ ಎಣ್ಣೆಕಾಳುಗಳಾದ ಔಡಲ, ಶೇಂಗಾ, ಮೊದಲಾದವುಗಳ ಬೀಜಗಳನ್ನು ದೇಶದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಸಂಗ್ರಹಿಸಿ ಇಡಬೇಕು ರೈತರ ಬೇಡಿಕೆಗಳನ್ನು ಪೂರಯಿಸಬೇಕು. ಅವಶ್ಯವೆನಿಸಿದರೆ ಉಳಿಕೆಯನ್ನು ಮಾತ್ರ ಪರದೇಶಗಳಿಗೆ ಕಳಿಸಬೇಕು. ಸಕಾಲದಲ್ಲಿ ಯೋಗ್ಯ ದರಗಳಿಗೆ ಈ ಹಿಂಡೆಯನ್ನು ಪೂರಯಿಸಿದ್ದಾದರೆ ಯಾವದೇ ಬಗೆಯ ತೊಂದರೆಯಿಲ್ಲದೆ ೧೦೦ ಕ್ಕೆ ೨೫ ರಷ್ಟು ಉತ್ಪಾದನೆಯು ಹೆಚ್ಚುವದಲ್ಲಿ ಸಂದೇಹವಿಲ್ಲ. ಆದರೆ ಈ ಸಂದರ್ಭದಲ್ಲಿಯೂ ವಿಶಿಷ್ಟ ಹಿತಸಂಬಂಧಗಳ ಗುಂಪಿನವರು ರೈತರ ವಿರುದ್ಧ ಎದ್ದು ನಿಲ್ಲುವರು. ಆದರೆ ಈಗಲೂ ಅವರು ಇಡೀ ರಾಷ್ಟ್ರದ ಹಿತದ ದೃಷ್ಟಿಯಿಂದ ಅವಶ್ಯಕ ಸ್ವಾರ್ಥತ್ಯಾಗಕ್ಕೆ ಸಿದ್ಧರಾಗಲಿಕ್ಕೆ ಬೇಕು.

(೨)

ಮೂರು ರಂಗಗಳು

ಹೆಚ್ಚು ಆಹಾರ ಪದಾರ್ಥಗಳನ್ನು ಬೆಳೆಯಿರಿ ಎಂಬ ಚಳವಳಿ ಮೂರು ರಂಗಗಳಲ್ಲಿ ನಡೆಯತಕ್ಕದ್ದು ೧) ಧಾನ್ಯ ಮತ್ತು ಬೇಳೇ ಕಾಳುಗಳ ಉತ್ಪಾದನೆ ೨) ಕಾಯಿಪಲ್ಲೆ ಮತ್ತು ಸೊಪ್ಪುಗಳ ಉತ್ಪಾದನೆ ೩) ಹಾಲಿನ ಮತ್ತು ತಜ್ಜನ್ಯ ಪದಾರ್ಥಗಳ ಉತ್ಪಾದನೆ ಈ ಮೂರು ರಂಗಗಳಲ್ಲಿ ಮೊದಲನೆಯದರಲ್ಲಿ ಏನಾದರೂ ಸತ್ಪರಿಣಾಮಗಳು ಆಗಬೇಕಾದರೆ ಮೂರು ಆರು ತಿಂಗಳುಗಳು ಬೇಕಾಗುವವು. ಎರಡನೆಯದಕ್ಕೆ ಆರುವಾರಗಳಿಂದ ಮೂರು ತಿಂಗಳು ಹತ್ತಬಹುದು ಮತ್ತು ಕೊನೆಯದು ಒಂದೆರಡು ವಾರಗಳಲ್ಲಿಯೆ ಫಲಕಾರಿಯಾಗಬಲ್ಲುದು. ಅದುದರಿಂದ ಮೊತ್ತ ಮೊದಲು ಈ ಕಡೆಗೆ ಹೆಚ್ಚು ಲಕ್ಷವನ್ನು ಕೊಡಬೇಕು. ಹಾಲು ಮತ್ತು ತಜ್ಜನ್ಯ ಪದಾರ್ಥಗಳ ಸೇವನೆಯಿಂದ ಮನುಷ್ಯ ಶರೀರದ ಮೇಲೆ ಸತ್ಪರಿಣಾಮಗಳಾಗುವವು. ಆದರೆ ಹಾಲಿನ ಪೂರೈಕೆ ಹೆಚ್ಚಬೇಕಾದರೆ ಹಿಂಡುವ ದನಗಳಿಗೆ ಗುಗ್ಗರಿಯನ್ನು ಹಾಕಬೇಕಾಗುವದು. ಸಜ್ಜೆಯನ್ನು ನೆನಿಸಿಟ್ಟು ಅದನ್ನು ಅರೆದು ಹಿಂಡುವ ದನಗಳಿಗೆ ಹಾಕಿದರೆ ಹಾಲಿನ ಪ್ರಮಾಣ ಹೆಚ್ಚುವದಲ್ಲದೆ ಬೆಣ್ಣೆಯೂ ಹೆಚ್ಚಿಗೆ ದೊರೆಯುವದು. ಇದು ಶಕ್ಯವಿಲ್ಲದಿದ್ದರೆ ಕೊಬ್ರಿ ಎಣ್ಣೆ ಹಿಂಡಿ ಮತ್ತು ಎಳ್ಳೆಣ್ಣೆಯ ಹಿಂಡಿ- ಕೊನೆಯದೆಂದರೆ ಶೇಂಗಾ ಹಿಂಡಿಯನ್ನು ನೀರಿನಲ್ಲಿ ಸ್ವಲ್ಪ ಉಪ್ಪು ಕೂಡಿಸಿ ಕುಡಿಸಿದ್ದಾದರೆ ದನಗಳು ಹೆಚ್ಚು ಹಾಲು ಕೊಡುವವು. ಶೇಂಗಾದ ಹಿಂಡಿಯನ್ನು ಹಾಕುವದಾದರೆ ಉಪ್ಪು ಅತ್ಯವಶ್ಯವಾಗಿ ಬೆರೆಸಬೇಕು. ತಾಳೆಹಣ್ಣನ್ನು ಕಣ್ಣು ತೆಗೆದು ರಸ ತೆಗೆದು ನೀರಲ್ಲಿ ಕೂಡಿಸಿ ಸ್ವಲ್ಪ ಉಪ್ಪು ಬೆರೆಸಿ ದನಗಳಿಗೆ ಕೊಟ್ಟದ್ದಾದರೆ ಅವು ಹೆಚ್ಚು ಹಾಲು ಕೊಡುವವು. ದನಗಳಿಗೆ ಸ್ವಲ್ಪ ಸಜ್ಜೆಯನ್ನು ಕೊಡಬೇಕೆಂದು ನಾನು ಸೀದಾಧಿಕಾರಿಗಳಿಗೆ ಕೇಳಿಕೊಂಡಾಗ ಅವರು ಒಮ್ಮೆಲೆ ಬೆಚ್ಚಿಬಿದ್ದರು. ಈ ದನಗಳಿಂದ ಆರೋಗ್ಯಕರವಾದ ಆಹಾರವು ಮರಳಿ ದೊರೆಯುತ್ತದೆ ಎಂಬದನ್ನು ಅವರು ಪೂರ್ಣವಾಗಿ ಮರೆತು ಬಿಟ್ಟರು. ಅದುದರಿಂದ ಹಳ್ಳಿ ಪಂಚಾಯತಿಗಳ ಇಲ್ಲವೆ ಕಾಂಗ್ರೆಸ ಸಮಿತಿಗಳ ಮುಖಾಂತರ ಹಿಂಡುವ ದನಗಳಿಗೆ ಸಜ್ಜೆ ಮತ್ತು ಹಿಂಡಿ ದೊರೆವಂತೆ ವಿಶೇಷ ವ್ಯವಸ್ಥೆಯನ್ನು ಮಾಡುವದು ಅವಶ್ಯವಾಗಿದೆ- ಈ ನಿಯಂತ್ರಣಗಳು ಜಾರಿಯಲ್ಲಿ ಇರುವವರೆಗೆ ಈ ಬಗೆಯ ವ್ಯವಸ್ಥೆಯನ್ನು ಮಾಡತಕ್ಕದ್ದು; ಈ ನಿಯಂತ್ರಣಗಳೆಲ್ಲ ಪೂರ್ಣ ರದ್ದಾಗುವದೇ ಒಳಿತೆಂದು ನನ್ನ ಅಭಿಪ್ರಾಯ.

ಕಾಯಿಪಲ್ಲೆಗಳನ್ನು ಬೆಳೆಯುವದಕ್ಕೂ ಗೊಬ್ಬರದ ಅವಶ್ಯಕತೆಯಿದೆ ಭೂಮಾತೆಯು ಸಾಕಷ್ಟು ದಯಾಪೂರ್ಣ ಇದ್ದರೂ ನಾವು ಕೊಡುವ ಬಂಗಾರದ ಬೆಳೆಯನ್ನು ಅವಳು ಅಪೇಕ್ಷಿಸುವಳು. ಬಟಾಟಿ, ಗೆಣಸು, ಸಂಚಿಕ ಪನಿಗಡ್ಡೆ, ಪಡವಲು, ಬೂದಿಕುಂಬಳಕಾಯಿ, ಕುಂಬಳಕಾಯಿ ಮೊದಲಾದವುಗಳನ್ನು ವಿವಿಧ ಖಾದ್ಯಪದಾರ್ಥಗಳನ್ನಾಗಿ ಮಾರ್ಪಡಿಸಬಹುದು. ಅಕ್ಕಿಯ ಹಿಟ್ಟು ಇಲ್ಲವೆ ಗೋದಿಯ ಹಿಟ್ಟಿನಲ್ಲಿ ಗೆಣಸು, ಪಡುವಲು, ಬೂದುಕುಂಬಳಕಾಯಿಗಳನ್ನು ಕೂಡಿಸಿ ಸುಲಭವಾಗಿ ರೊಟ್ಟಿ ಮಾಡಬಹುದು. ಅಕ್ಕಿ ಹಿಟ್ಟು ಮತ್ತು ಗೋದಿ ಹಿಟ್ಟಿನಲ್ಲಿ ಗೆಣಸನ್ನು ಕೂಡಿಸಿ ಒಳ್ಳೆ ಪದಾರ್ಥಗಳನ್ನು ಮಾಡಬಹುದು. ಇದು ಒಳ್ಳೆ ರುಚಿಕರ ಖಾದ್ಯವೆನಿಸುವದು. ಮತ್ತು ಪುಷ್ಟಿಕರ ಹಾಗೂ ಆರೋಗ್ಯಕರವೆನಿಸುವದು.

ಪೂರಕ ಆಹಾರ

ಶೇಂಗಾ ಬೆಲ್ಲ, ಕೊಬ್ರಿ ಬೆಲ್ಲ ಎಳ್ಳು ಬೆಲ್ಲ ಒಳ್ಳೆ ಪೌಷ್ಟಿಕ ಆಹಾರ. ಶೇಂಗಾಹಿಟ್ಟು ಮಾಡಿ ಸುಮಾರು ಒಂದು ಐದಾಂಶದಷ್ಟು ಬೆಲ್ಲವನ್ನು ಅದರಲ್ಲಿ ಕೂಡಿಸಿ ಅದರಲ್ಲಿ ೩-೪ ಹುಳಿನಿಂಬೆ ರಸವನ್ನು ಕೂಡಿಸಿ ತಿಂದಿದ್ದಾದರೆ ಅದೊಂದು ಒಳ್ಳೆ ಶಕ್ತಿದಾಯಕ ಆಹಾರವಾಗುವದೆಂದು ಸ್ವಂತ ಅನುಭವದಿಂದ ನಾನು ಹೇಳಬಲ್ಲೆ. ೧೯೪೮ ನೇ ಜನೆವರಿ ೩೦ ರಿಂದ ೪೮ ಗಂಟೆಗಳಲ್ಲಿ ಒಂದೇ ಊಟಮಾಡಲು ನಾನು ಪ್ರಾರಂಭಿಸಿರುವೆ. ಪರಿಣಾಮವಾಗಿ ಮೊದಲು ಕೆಲ ತಿಂಗಳು ನನ್ನ ತೂಕ ಕಡಮೆಯಾಯಿತು, ಅನಂತರ ಮೇಲೆ ಹೇಳಿದಂತೆ ಶೇಂಗಾ ಬೆಲ್ಲದ ಆಹಾರದಬಗ್ಗೆ ವಿಚಾರಮಾಡಿದೆ. ಅದನ್ನು ಸ್ವೀಕರಿಸಹತ್ತಿದಂದಿನಿಂದ ಕಡಮೆಯಾದ ತೂಕವು ಬಹಳ ಮಟ್ಟಿಗೆ ಮರಳಿಬಂದಿದೆ. ಉಳಿದವರೂ ಇದನ್ನು ತೆಗೆದುಕೊಳ್ಳಬಹುದೆಂದು ನಾನು ನಿಃಸಂದೇಹವಾಗಿ ಪುರಸ್ಕರಿಸಬಲ್ಲೆ. ನಾವು ತಿನ್ನುತಿರುವ ಬೇರೆ ಆಹಾರ ಪದಾರ್ಥಗಳಿಗಿಂತ ಶೇಂಗಾದಲ್ಲಿ ಹೆಚ್ಚು ಪಿಷ್ಟಸತ್ವ ಪ್ರೊಟೀನ ಮತ್ತು ನೆಣವಿರುವದು. ಅದರಿಂದ ಶರೀರವು ಬಲಿಷ್ಠವಾಗುವದಲ್ಲದೆ ಮನೋಬಲವೂ ಹೆಚ್ಚುವದು.

ಸೀದಾ ಪದ್ಧತಿ

ಆಹಾರ ಪದಾರ್ಥಗಳ ನಿವ್ವಳ ಕೊರತೆಯು ನೂರಕ್ಕೆ ಕೇವಲ ಆರರಷ್ಟು ಇದ್ದರೆ ಸೀದಾ ಪದ್ಧತಿಯ ಅವಶ್ಯಕತೆಯೆಲ್ಲಿದೆ? ಅಧಿಕಾರಿಗಳು ೬ ಔಂಸುಗಳಿಂದ ೧೨ ಔಂಸುಗಳಿಗೆ ಬದಲಾವಣೆ ಮಾಡುತಿರುತ್ತಾರೆ. ಕೊರತೆ ನೂರಕ್ಕೆ ೬ ರಷ್ಟಿದ್ದಾಗ ಅವರು ೧೪-೧೫ ಔಂಸು ಆಹಾರ ಪದಾರ್ಥಗಳನ್ನು ಬೇಕಾದ ಹಾಗೆ ಕೊಡಬಹುದು. ಹಾಗಾದಲ್ಲಿ ಕಳ್ಳಪೇಟೆಗೆ ಅವಕಾಶ ಸಿಕ್ಕದು. ಅಧಿಕಾರಿಗಳ ಲಂಚಗುಳಿತನಕ್ಕೂ ಆಸ್ಪದ ದೊರೆಯದು.

ಕಳ್ಳ ಪೇಟೆಯಲ್ಲಿ ಬೇಕಾದಷ್ಟು ಆಹಾರ ಪದಾರ್ಥಗಳು ಸಿಕ್ಕುತವೆಂಬುದು ನನಗೆ ಗೊತ್ತಿದೆ. ಸೀದಾಕ್ಷೇತ್ರದಲ್ಲಿರುವ ದುರ್ದೈವೀ ನಾಗರಿಕರು ತಮ್ಮ ಕೊರತೆಯನ್ನು ಕಳ್ಳ ಪೇಟೆಯ ಮುಖಾಂತರ ತುಂಬಿಕೊಳ್ಳುವರೆಂಬುದು ನನಗೆ ಗೊತ್ತಿದೆ. ನಾಗರಿಕರು ಕೇವಲ ಸೀದಾ ಪದಾರ್ಥಗಳನ್ನೇ ಸೇವಿಸುತಿದ್ದರೆ, ನೂರಕ್ಕೆ ಕನಿಷ್ಠ ೮೫ ರಷ್ಟು ಜನರಾದರೂ ಬೇನೆಯಿಂದ ಬಳಲುತಿದ್ದರು. ಮರಣ ಪ್ರಮಾಣವೂ ವಿಪರೀತ ಹೆಚ್ಚುತ್ತಿದ್ದಿತು. ಎಲ್ಲಿಯೋ ಧೋರಣ ತಪ್ಪುತಿದೆಯೆಂದು ನನಗೆ ಅಂಜಿಕೆ. ಮನುಷ್ಯ ನಿರ್ಮಿತ ಮತ್ತು ಕಾಗದ ನಿರ್ಮಿತ ಕೊರತೆಗಳಿಂದ ಮತ್ತು ಬರಗಳಿಂದ ನಾವು ಬಳಲುತಿದ್ದೇವೆ. ಸಹಕಾರಿ ಸಂಸ್ಥೆಗಳ ಮುಖಾಂತರ, ಶಕ್ಯವಿದ್ದಲ್ಲಿ ವಿಶ್ವಾಸಿಕ ಸಾಮಾಜಿಕ ಸೇವಕರ ಸಂಸ್ಥೆಗಳ ಮುಖಾಂತರ ಮತ್ತು ಕೊನೆಯದಾಗಿ ಪ್ರಾಮಾಣಿಕ ವ್ಯಾಪಾರಸ್ಥರ ಮುಖಾಂತರ ಆಹಾರಪದಾರ್ಥಗಳ ಅನಿರ್ಬಂಧ ಸಾಗಾಟ ಮತ್ತು ವ್ಯಾಪಾರಕ್ಕೆ ಅವಕಾಶ ಕೊಡತಕ್ಕದ್ದು.

ಪ್ರಕಾಶಂ ಮಂತ್ರಿಮಂಡಳದ ಆಡಳಿತೆಯ ಕಾಲಕ್ಕೆ ಜಾರಿಯಲ್ಲಿ ತಂದಿದ್ದ ಉತ್ಪಾದಕ ಮತ್ತು ಸಹಕಾರ ಸಂಘಗಳ ಸಂಘಟನೆಯು ನಿತ್ಯೋಪಯೋಗಿ ಆಹಾರ ಪದಾರ್ಥಗಳ ಮತ್ತು ಇತರ ಪದಾರ್ಥಗಳ ಹಂಚಿಕೆಗೆ ಅತ್ಯುತ್ತಮ ಸಾಧನವು. ದೇಶದಲ್ಲೆಲ್ಲ ಇದನ್ನು ಜಾರಿಯಲ್ಲಿ ತರಬಹುದು. ಅದರಿಂದ ಲಾಭಬಡುಕತನಕ್ಕೆ ಅವಕಾಶ ದೊರೆಯದು ಎಲ್ಲಿಯಾದರೂ ಲಾಭಬಡುಕತನ ನಡೆದದ್ದಾದರೆ ಉತ್ಪಾದಕರಲ್ಲಿ ಮತ್ತು ಬಳಸುವವರಲ್ಲಿಯೆ ಅದು ಹಂಚಿ ಹೋಗುವದು.

ವಿಕಲ್ಪಗಳು

ಜನರು ಪ್ರತಿ ಪಕ್ಷಕ್ಕೆ ಒಂದು ದಿನ ಉಪವಾಸ ಮಾಡಿದರೆ, ಆಹಾರಪದಾರ್ಥಗಳನ್ನು

—೧೫ನೆಯ ಪುಟಕ್ಕೆ

ಮೂಲೆ ಮೂಲೆಗಳಿಂದ

ಬ್ರುಸೆಲ್ಸಿನಲ್ಲಿ ನಡೆದ ಅಂತಾರಾಷ್ಟ್ರೀಯ ... ಸ್ಪರ್ಧೆ ನಡೆಯಿತು. ಅಲ್ಲಿ ... ಶ್ರೇಷ್ಠ ಚಲಚ್ಚಿತ್ರಗಳಿಗೆ ಪಾರಿತೋಷಕಗಳನ್ನು ಹಂಚಿದರು. ಅಂಥ ಒಂದು ಪಾರಿತೋಷಕ ಭಾರತೀಯ ನರ್ತಕ ಸಮ್ರಾಟ ... ಶ್ರೀ ಉದಯಶಂಕರರ "ಕಲ್ಪನಾ" ಎಂಬ ಚಿತ್ರಕ್ಕೆ ಸಿಕ್ಕಿತು.

ಚೀನದಲ್ಲಿ ಪಕಿಂಗ್, ಹೊಂಗ್‌ಕ್ವೇ ... ಮತ್ತು ದಕ್ಷಿಣ ನದಿಗಳ ಪ್ರದೇಶಗಳಲ್ಲಿ ಕಳೆದ ... ವರ್ಷಗಳಲ್ಲಿ ಎಂದೂ ಬಾರದಷ್ಟು ದೊಡ್ಡ ... ಪ್ರವಾಹ ಬಂದಿತು. ಅದರಿಂದ ೨೨,೦೦೦ ಜನರು ಮನೆಮಾರು ಆಪಘಾತಗಳಿಗೀಡಾದರು, ... ಜನರು ಮನೆಗಳನ್ನು ಕಳೆದುಕೊಂಡರು, ... ಪ್ರಾಂತದಲ್ಲಿ ನೂರಕ್ಕೆ ಕೆಂಬತ್ತು ... ಅಕ್ಕಿ ಬೆಳೆ ಹಾಳಾಯಿತು.

ಮುಂಬಯಿಯಿಂದ ಫಯೋತ್ಪಾದಕ ಚಟುವಟಿಕೆ ... ತುಕ್ಕಾಗಿ ೩೪ ಜನ ಹಿಂದಿಯರು ... ರೆಂದು ತಿಳಿಯುತ್ತದೆ. ಇಲ್ಲಿಯ ವರೆಗೆ ... ಸೇರಿ ಒಟ್ಟು ೪೩೭ ಜನರು ಈ ... ದಿಂದ ಹತರಾಗಿದ್ದಾರೆ.

ಬ್ರಹ್ಮದಲ್ಲಿ ಕಾರೆನ್ನರಿಗೂ ಕಮ್ಯುನಿಸ್ಟ ... ಉಂಟಾದ ಘರ್ಷಣೆಯಲ್ಲಿ ಕಾರೆನ್ನರ ... ಸೈನಿಕ ನಾಯಕರು ಹತರಾದರು. ಅದೇ ... ಘರ್ಷಣೆಯಲ್ಲಿ ಅವರೊಡನಿದ್ದ ಸಶಸ್ತ್ರ ... ಸೆರೆಸಿಕ್ಕರು.

ಮೈಮನ್‌ಸಿಂಗ್ ರೇಲ್ವೆ ಕೂಡಲಿನಲ್ಲಿ ೫೦ ಜನ ದಂಗೆಗಾರರು ಸರಕಾರಿ ದಳಗಳ ಚಟುವಟಿಕೆಯಿಂದ ಮೃತರಾದರು. ೨೫೦ ದಂಗೆಗಾರರು ... ಎಂಬ ಸ್ಥಳವನ್ನು ಆಕ್ರಮಿಸಿ ೧೦ ಸರಕಾರೀ ಸೈನಿಕರನ್ನು ಸಂಹರಿಸಿದರು. ಹಿಂದಿನ ... ಸೈನ್ಯದ ೫೦ ತಂತ್ರಜ್ಞರು ಕಾರೆನ್ನರಿಗೆ ... ಮದ್ದುಗುಂಡು ಬಂದೂಕುಗಳ ತಯಾರಿಕೆಯಲ್ಲಿ ನೆರವಾಗುತ್ತಿರುವರೆಂದು ತಿಳಿದುಬಂದಿದೆ.

ಅಮೇರಿಕೆದ ಸಂಯುಕ್ತ ಸಂಸ್ಥಾನದ ಪ್ರತಿನಿಧಿಗಳ ಸಭೆ ವಾಶಿಂಗ್‌ಟನ್ನಿನಲ್ಲಿ ಮಹಾತ್ಮಾ ಗಾಂಧಿಯವರ ಸ್ಮಾರಕ ಭವನ ... ವನ್ನು ನಿರ್ಮಿಸಲು ಮಸೂದೆಯೊಂದನ್ನು ಸ್ವೀಕರಿಸಿತು. ಆ ಮಸೂದೆ ಆ ಕೆಲಸಕ್ಕಾಗಿ ... ಘಟಿತವಾದ ಭಾರತ ಸಂಘ ಅಥವಾ ... ನ್ಯಾವುದಾದರೂ ಕೂಟಕ್ಕೆ ಅಲ್ಲಿಯ ಲಲಿತ ಕಲಾ ಸಮಿತಿ ನಿರ್ದೇಶಿಸುವ ಸ್ಥಳದಲ್ಲಿ ಸ್ಮಾರಕ ಭವನವನ್ನು ರಚಿಸಲು ಅಧಿಕಾರ ಕೊಡುತ್ತದೆ.

ಡಚ್ಚ್ ... ಇಂಡೊನೇಶಿಯನ್ ಪ್ರಜಾ ರಾಜ್ಯದ ಅಧಿಕಾರಿಗಳಿಗೆ ರಾಜಧಾನಿಯಾದ ... ಅಧಿಕಾರವನ್ನು ತಿರುಗಿ ವಹಿಸಿದ ... ಮೊದಲನೆಯ ಮಂತ್ರಿಮಂಡಲದ ಸಭೆ ... ಜುಲೈ ೧೩ ರಲ್ಲಿ ನಡೆಯಿತು. ಮುಖ್ಯ ಸಮಸ್ಯೆಗಳ ಪರಿಹಾರಚಿಂತನ ಚರ್ಚೆಯ ವಿಷಯವಾಗಿತ್ತು.

ಭಾರತದಲ್ಲಿ ನೆದರಲ್ಯಾಂಡ್ **ಡಚ್ ರಾಯಭಾರಿ**ಯಾಗಿ ನಿಯಮಿಸಲಿರುವ ಡಾ. ಬ್ಯುಸ್ಕೇವ್ ಕ್ರೆಕೋಚಿ ... ಅವರು ಇಲ್ಲಿಗೆ ಹೊರಟು ಲಂಡನ್ನಿಗೆ ಮುಟ್ಟಿದ್ದಾರೆ. ಭಾರತಕ್ಕೂ ಜೆಕೊಸ್ಲೋವೇಕಿಯಕ್ಕೂ ... ಸಾಂಸ್ಕೃತಿಕ ತಿಳುವಳಿಕೆಯುಂಟಾಗುವದು ಅವಶ್ಯಕವೆಂದು ಅವರು ಅಭಿಪ್ರಾಯಪಟ್ಟರು.

೧೯೪೮ ರ ಅದಿಯಲ್ಲಿ ಜಗತ್ತಿನಲ್ಲಿ ೧,೦೯೭ ... ಡೂಪರಂಗಗಳಿದ್ದವು. ಅವುಗಳಲ್ಲಿ ... ೭೫,೦೫,೦೦೦ ಜನರು ಕುಳಿತು ನೋಡಬಹುದಾಗಿತ್ತು. ಜಗತ್ತಿನ ೧೧೭ ದೇಶಗಳನ್ನು ಎಡೆಗೆ ತೆಗೆದುಕೊಂಡು ಈ ಲೆಕ್ಕವನ್ನು ಮಾಡಲಾಯಿತು. ಅಷ್ಟೀಗ ಭಾರತ ಪಾಕಿಸ್ತಾನಗಳಲ್ಲಿ ... ಹೆಚ್ಚುತ್ತಿವೆ. ದೇಶವಿಭಜನೆಯ ... ಇಲ್ಲಿ ಒಟ್ಟು ೪,೮೨,೫೨೦ ಜನರು ... ಕುಳಿತುಕೊಳ್ಳಬಹುದಾದ ೧೬೦೮ ಡೂಪರಂಗಗಳಿದ್ದವು. ಈಗ ೧೨,೬೬,೩೦೦ ಜನ ಹಿಡಿಸುವ ... ಡೂಪರಂಗಗಳು ಭಾರತದಲ್ಲೂ ೮೪೦೦೦ ಜನ ಹಿಡಿಸುವ ೩೫೦ ರಂಗಗಳು ಪಾಕಿಸ್ತಾನದಲ್ಲೂ ಇವೆ. ಯುರೋಪಿನಲ್ಲಿ ಇದೇ ಮೇರೆಗೆ ... ಹೆಚ್ಚು ಇರುತ್ತಿರುವ ದೇಶಗಳೆಂದರೆ ... ಮತ್ತು ಇಟಲಿ.

ಲಾಸ್ ಏಂಜಲೀಸಿಗೆ ಹೋದ ಶ್ರೀಮತಿ ... ಚಿಮೂರಗಢ ಸೂತ್ರಧಾರಿಕೆ ... ಕಾರ್ಯ ... ಸಂಪರ್ಕ ಭಾರತ ... ಎಂದು ಅಭಿಪ್ರಾಯಪಟ್ಟರು.

ಅಮೇರಿಕವು ಸ್ಪೇನಿನೊಡನೆ ಸ್ನೇಹ ಸಂಬಂಧವನ್ನು ಇಟ್ಟುಕೊಂಡಿಲ್ಲವಾದ ಕಾರಣ ಅದಕ್ಕೆ ಸಿನೇಟಿನ ವೆಚ್ಚದ ಸಮಿತಿ ಮಂಜೂರು ಮಾಡಿದ ಐದು ಕೋಟಿ ಡಾಲರುಗಳ ಮಾರ್ಶಲ್ ಸಹಾಯವನ್ನು ಕೊಡಲು ಸಾಧ್ಯವಿಲ್ಲ ಎಂದು ಅಧ್ಯಕ್ಷ ಟ್ರೂಮನ್ನರು ಹೇಳಿದರು.

ರಶಿಯ ಮತ್ತು ಭಾರತಗಳು ಪಾಲ್ಯದೆಯ ವಾಣಿಜ್ಯ ಸಂಧಿಯನ್ನು ಮಾಡಿಕೊಂಡವು. ಅದರ ಪ್ರಕಾರ ಭಾರತವು ರಶಿಯಕ್ಕೆ ಚಹಾ, ಸಣಬು ಮತ್ತು ಚಪ್ಪಗಳನ್ನು ಕಳಿಸುವದು ಮತ್ತು ರಶಿಯವು ಭಾರತಕ್ಕೆ ಎರಡು ಲಕ್ಷ ಟನ್ ಗೋದಿಯನ್ನೂ ಒಂದು ಲಕ್ಷ ಟನ್ ಅನ್ಯಧಾನ್ಯಗಳನ್ನೂ ಕಳಿಸುವದು.

ಬ್ರಿಟಿಶ್ ಸರಕಾರದ ಶೋಧದ ಪ್ರಕಾರ ಜರ್ಮನಿಯ ಗಂಡರಿಲ್ಲದ ಹೆಂಗಸರು ನೌಕರಿಗಾಗಿ ಬ್ರಿಟನ್ನಿಗೆ ಬರುತ್ತಿದ್ದಾರೆ. ಅವರನ್ನು ಕೆಲವರು ಗುಪ್ತವಾಗಿ ದಕ್ಷಿಣ ಅಮೇರಿಕಕ್ಕೆ ಮಾರುವದು ತಿಳಿದುಬಂದಿದೆ. ಅದಕ್ಕೆ "ಬಿಳಿಯ ಗುಲಾಮರ" ವ್ಯಾಪಾರ ಎನ್ನುತ್ತಾರೆ.

ಬ್ರಿಟನ್ನಿನ **ನಾಟಿಂಗ್ ಹ್ಯಾಮ್** ಎಂಬ ಪುರಾತನ ಪಟ್ಟಣವು ಈಗ ತನ್ನ ಐನೂರನೆಯ ವರ್ಧಂತಿಯನ್ನು ಆಚರಿಸಿತು.

ರಶಿಯದಲ್ಲಿ ವಾಸ ಮಾಡಿದ ಮತ್ತು ಕಮ್ಯುನಿಸ್ಟರು **ಪ್ಯಾರಿಸ್ಸಿನಲ್ಲಿ** ಕರೆದ ಜಾಗತಿಕ ಶಾಂತಿ ಸಂಘದ ಪ್ರತಿನಿಧಿಯಾದ ವಾಂಡಾವಾಸಿ ವ್ಯಾಸ್ಕಯಾ ಎಂಬ ವಿದುಷಿ ಫ್ರಾನ್ಸಿನ ಸಂಸ್ಕೃತಿ ಅಶ್ಲೀಲತೆಗೂ ಕ್ಷುದ್ರತರವಾದ ಅಮೇರಿಕನ್ ದುರಭ್ಯಾಸಗಳಿಗೂ ಎಡೆಗೊಟ್ಟು ಕ್ಷಯಿಸಿಹೋಗಿದೆ ಎಂದು ಅಭಿಪ್ರಾಯಪಡುತ್ತಾಳೆ.

ಈ ಆರ್ಥಿಕ ವರ್ಷದಲ್ಲಿ ೧೨೫೦ ದಶಲಕ್ಷ ಡಾಲರುಗಳನ್ನು ಮಿಲಿಟರಿ ಖರ್ಚಗಾಗಿ ವಿನಿಯೋಗಿಸಬೇಕೆಂದು **ಅಮೇರಿಕದ** ಸಂಯುಕ್ತ ಸಂಸ್ಥಾನದ **ಸಿನೇಟ್ ಸದಸ್ಯರು** ಒಪ್ಪಿಗೆಯಿತ್ತಿದ್ದಾರೆ.

ಕಾರ್ಡಿನಲ್ ಮಿಡ್ಸ್‌ಜೆಂಟಿಯವರನ್ನು ಗಲ್ಲಿಗೇರಿಸಲು ಕೊಟ್ಟ ಆಜ್ಞೆಯನ್ನು ಪ್ರತಿಭಟಿಸಲು ಪೋಪರು ಅದನ್ನು ಅನುಮೋದಿಸುವ ಕ್ಯಾಥೊಲಿಕರನ್ನು ಜಾತಿಯಿಂದ ಬಹಿಷ್ಕರಿಸುವ ಹೆದರಿಕೆ ಹಾಕಿದ್ದರ ವಿರುದ್ಧವಾಗಿ **ಜೆಕೊಸ್ಲೋವೇಕಿಯದ ನ್ಯಾಯ ಮಂತ್ರಿ ಅಲೆಕ್ಸೇಜ್ ಸೇಪೀಕರು** ಪೋಪರ ಆಜ್ಞೆಯನ್ನು ಅಮಲಿನಲ್ಲಿ ತರುವ ಕಮ್ಯುನಿಸ್ಟರು ದೇಶದ್ರೋಹಿಗಳಾಗುವರು ಎಂದು ಎಚ್ಚರಿಕೆ ಕೊಟ್ಟರು.

ಸಂ. ರಾ. ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಟ್ರಿಗ್ರೀವ್ ಲೈ ಅವರು ಜಗತ್ತಿನಲ್ಲಿಯ ಎಲ್ಲ ಭಾಗಗಳ ಮಜೂರಸಂಘಗಳ ಹಕ್ಕುಗಳನ್ನು ಸ್ಥಾಪಿಸಲು ಸೂಚನೆಯನ್ನು ತಂದಿದ್ದಾರೆ.

ಲಂಡನ್ನಿನಲ್ಲಿ ಕಾಮನ್‌ವೆಲ್ತಿನ ಅರ್ಥ ಮಂತ್ರಿಗಳು ಮೇಲಿಂದ ಮೇಲೆ ಸಭೆ ಸೇರಿ ಇಂದಿನ ಡಾಲರ್-ಸ್ಟರ್ಲಿಂಗ್ ಬಿಕ್ಕಟ್ಟನ್ನು ನಿವಾರಿಸುವ ಉಪಾಯವನ್ನು ಕಂಡುಹಿಡಿಯಲು ಪ್ರಯತ್ನಿಸಿ ವಿಫಲರಾದರು. ಅವರಿಗೆ ಆ ವಿಷಯದಲ್ಲಿ ಜುಲೈ ೧೬ ರ ವರೆಗೆಯಾವ ನಿರ್ಣಯಕ್ಕೂ ಬಂದು ಮುಟ್ಟಲು ಸಾಧ್ಯವಾಗಲಿಲ್ಲ.

ನ್ಯೂಯಾರ್ಕ್ ಸುದ್ದಿಯ ಪ್ರಕಾರ ಮುಂಬಯಿಯಲ್ಲಿ ವಿಮಾನದ ಅಪಘಾತದಿಂದ ಮಡಿದ ಇಂಡೊನೇಶಿಯದ ಸತ್ಯ ಸಂಗತಿಯ ವರದಿಗಾರರಾದ ಅಮೇರಿಕನ್ ಪ್ರತಿನಿಧಿಗಳ ಬಗ್ಗೆ ಅಮೇರಿಕದ ಪತ್ರಿಕೆಗಳಲ್ಲಿ ಈಗ ಚಿತ್ರಗಳೂ ಸುದ್ದಿಗಳೂ ಪ್ರಕಟವಾಗುತ್ತಿವೆ ಎಂದು ತಿಳಿಯುತ್ತದೆ.

ದರ್ಬಾನಿನಲ್ಲಿ "ನಾತಾಳ ಇಂಡಿಯನ್ ಯುನಿಯನ್ ಸ್ಯಾಶನಲಿಸ್ಟ್" ಎಂಬ ಹೊಸದೊಂದು ರಾಜಕೀಯ ಪಕ್ಷ ಉದಯಿಸಿದೆ. ದಕ್ಷಿಣ ಆಫ್ರಿಕದ ಹಿಂದೀಯರು ದ. ಆಫ್ರಿಕದ ಒಕ್ಕೂಟಕ್ಕಲ್ಲದೆ ಹೊರಗಿನ ಯಾವ ದೇಶಕ್ಕೂ ತಲೆಬಾಗುವವರಲ್ಲ ಎಂಬ ತತ್ವದ ತಳಹದಿಯ ಮೇಲೆ ಆ ಪಕ್ಷವನ್ನು ಕಟ್ಟಲಾಗಿದೆ. ದಕ್ಷಿಣ ಆಫ್ರಿಕವೇ ನಮ್ಮ ತವರುಮನೆ, ಅದೇ ಗಂಡನಮನೆ. ಸೂತ್ರಗಾರರಾದ ಅಲ್ಲಿಯ ಅಧಿಕಾರಿಗಳೊಡನೆ ದೇಶ ಹಿತಕ್ಕಾಗಿ ಸಹಕರಿಸುತ್ತೇವೆ, ಎಂದು ಆ ಪಕ್ಷದವರು ಸಾರಿದ್ದಾರೆ.

ಗಾಂಧೀಜಿ-ಟಾಲಸ್ಟಾಯ ಸಂಪರ್ಕ

(೬ನೇ ಪುಟದಿಂದ ಬಂದುದು)

ತಪ್ಪುಗಳಿಗಾಗಿ ಕ್ಷಮಾಯಾಚನೆ ಮಾಡುವೆ. ಆದರೆ ರಶಿಯದಲ್ಲಿರುವ ನನಗೆ ತಪ್ಪು ತಿದ್ದಿಕೊಳ್ಳಲು ಯಾವ ಇಂಗ್ಲೀಷ ಮನುಷ್ಯನ ನೆರವೂ ಸಿಗುವದಿಲ್ಲ.

"ಟಾಲ್‌ಸ್ಟಾಯರ ಅನುಮತಿಯಿಂದ, ನಿಮಗೆ ಅವರು ಬರೆದ ಪತ್ರವನ್ನು ಲಂಡನ್ನಿನಲ್ಲಿ ನಮ್ಮ ಗೆಳೆಯರು ನಡೆಸುತ್ತಿರುವ ಚಿಕ್ಕ ಪತ್ರಿಕೆಯೊಂದರಲ್ಲಿ ಪ್ರಕಟಿಸಲಾಗುವದು. ಆ ಪತ್ರಿಕೆಯ ಸಂಚಿಕೆಯ ಒಂದು ಪ್ರತಿಯನ್ನೂ "ಫ್ರೀ ಏಜ್ ಪ್ರೆಸ್" ನವರು ಪ್ರಕಟಿಸಿದ ಟಾಲ್‌ಸ್ಟಾಯರ ಕೆಲ ಕೃತಿಗಳ ಇಂಗ್ಲಿಷ್ ಸಂಸ್ಕರಣಗಳನ್ನೂ ನಿಮಗೆ ಕಳಿಸಲಾಗುವದು.

"ನಿಮ್ಮ ಆಂದೋಲನದ ಬಗ್ಗೆ ಇಂಗ್ಲೀಷಿನಲ್ಲಿ ಹೆಚ್ಚಿಗೆ ಪ್ರಸಿದ್ಧಿಯಾಗಬೇಕೆಂದು ನನ್ನ ಅಭಿಪ್ರಾಯವಾದುದರಿಂದ, ನನ್ನ ಮತ್ತು ಟಾಲ್‌ಸ್ಟಾಯರ ಪರಮ ಮಿತ್ರರಲ್ಲೊಬ್ಬರಾದ ಗ್ಲಾಸ್ಗೋದಿನ ಶ್ರೀಮತಿ ಮೇಯೋ ಅವರಿಗೆ ಬರೆದು ನಿಮ್ಮೊಡನೆ ಪತ್ರವ್ಯವಹಾರ ಪ್ರಾರಂಭಿಸ ಹೇಳಿದ್ದೇನೆ..."

ಟಾಲ್‌ಸ್ಟಾಯರು ಗಾಂಧಿಯವರಿಗೆ ಬರೆದ ಪತ್ರ ಅವರಿಬ್ಬರೊಳಗಿನ ಪತ್ರವ್ಯವಹಾರದಲ್ಲೆಲ್ಲ ಅತಿ ದೀರ್ಘವಾಗಿತ್ತು. ಅದನ್ನು ಚರ್ಟಕೋಫನು ಗಾಂಧಿಯವರ ವಿಳಾಸಕ್ಕೆ ನೇರವಾಗಿ ಕಳಿಸದೆ ಇಂಗ್ಲಂಡಿನಲ್ಲಿದ್ದ ಗೆಳೆಯನೊಬ್ಬನಿಗೆ ಕಳಿಸಿ ಅಲ್ಲಿಂದ ಪುನಃ ಗಾಂಧಿಯವರಿಗೆ ಕಳಿಸಲು ಅಪೇಕ್ಷಿಸಿದ್ದ. ಆದರೆ ಆ ಗೆಳೆಯನು ಆಗ ಅಸ್ವಸ್ಥನಾಗಿದ್ದುದರಿಂದ ನವೆಂಬರ ೧೫ಕ್ಕೆ ಅದನ್ನು ಟಪಾಲಿಗೆ ಹಾಕಿದನು. ಅದು ಗಾಂಧಿಯವರಿಗೆ ತಲಪಬೇಕಾದರೆ ಟಾಲ್‌ಸ್ಟಾಯರು ಸತ್ತು ಎಷ್ಟೋ ದಿನಗಳಾಗಿದ್ದವು. ಚೆಟಕೋಫನ ಅನುವಾದದಿಂದ ಗಾಂಧಿಯವರಿಗೆ ಸಮಾಧಾನವಾಗದೆ ಅದನ್ನು 'ನವೆಂಬರ ೧೫ ಕ್ಕೆ ಪಾಲಿನ್ ಪಕ್ಲಾಕಳಿಂದ ಇಂಗ್ಲೀಷಿಗೆ ಅನುವಾದಗೊಳಿಸಿ "ಇಂಡಿಯನ್ ಒಪೀನಿಯನ್" ನಲ್ಲಿ ಪ್ರಸಿದ್ಧಿಸಿದರು. ೧೯೧೪ ರಲ್ಲಿ ದಕ್ಷಿಣ ಆಫ್ರಿಕೆಯಲ್ಲಿ ಗಾಂಧಿಯವರ ಸತ್ಯಾಗ್ರಹಕ್ಕೆ ದೊರೆತ ವಿಜಯದ ಸಮಯದಲ್ಲಿ ಪ್ರಕಟಿಸಲ್ಪಟ್ಟ ಆ ಪತ್ರಿಕೆಯ ಸ್ವರ್ಣ ಸಂಚಿಕೆಯಲ್ಲಿಯೂ ಅದು ಪುನರ್ಮುದ್ರಿಸಲ್ಪಟ್ಟಿತು.

ಪ್ರೇಮವೇ ಏಕಮಾತ್ರ ಧರ್ಮ

ಟಾಲ್‌ಸ್ಟಾಯರು ಹೀಗೆ ಬರೆದಿದ್ದರು: "ನಾನು ಬದುಕಿರುವಷ್ಟು ಕಾಲವೂ ಆದೂ ಮೃತ್ಯುವಿನ ಸಾಮೀಪ್ಯವನ್ನು ಸ್ಪಷ್ಟವಾಗಿ ಅನುಭವಿಸುತ್ತಿರುವ ಈ ಸಮಯದಲ್ಲಿ, ನನಗೆ ಸ್ಪಷ್ಟವಾಗಿ ಗೋಚರಿಸುತ್ತಿರುವ ಅತ್ಯಂತ ಮಹತ್ವದ್ದೆಂದು ನನಗನಿಸುವ ಒಂದು ವಿಷಯವನ್ನು ಜನರ ಮುಂದೆ ಹೇಳಿಬಿಡಬಯಸುತ್ತೇನೆ- ಅದೆಂದರೆ, ಸತ್ಯಾಗ್ರಹವೆಂದು ಕರೆಯಲ್ಪಡುವ ಈ ಆಂದೋಲನ ನಿಜವಾಗಿಯೂ ಅಸತ್ಯ ವ್ಯಾಖ್ಯಾನಗಳಿಂದ ಮುಕ್ತವಾಗಿರುವ ಶುದ್ಧಪ್ರೇಮವೇ ಆಗಿದೆ. ಪ್ರೇಮವೇ ಮಾನವ ಜೀವನದ ಪರಮಮತ್ತು ಏಕಮಾತ್ರ ಧರ್ಮ. ಅಂತರಂಗದ ಆಳದಲ್ಲಿ ಮನುಷ್ಯಮಾತ್ರರೆಲ್ಲರೂ (ನಾವು ಮಕ್ಕಳಲ್ಲಿ ನಿಚ್ಚಳವಾಗಿ ಕಾಣುವಂತೆ) ಇದನ್ನೊಂದನ್ನೆ ಬಲ್ಲರು. ಜಗತ್ತಿನ ದುರ್ಬೋಧನೆಗೆ ಸಿಲುಕಿದ ಮೇಲೆಯೆ ಅವರು ಬದಲಾಗುವರು. ಇದನ್ನು ಚೀನಿಯರೇನು, ಭಾರತೀಯರೇನು, ಹಿಬ್ರೂ, ಗ್ರೀಕ ಮತ್ತು ರೋಮನ್ನರೇನು- ಎಲ್ಲ ಜ್ಞಾನಿಗಳೂ ಬೋಧಿಸಿದ್ದಾರೆ. "ವಸ್ತುತಃ ಪ್ರೇಮದಲ್ಲಿ ಒತ್ತಾಯಕ್ಕೆ ಎಡೆಗೊಟ್ಟಾಗಲೇ ಜೀವನಧರ್ಮಕ್ಕೇನ ಪ್ರೇಮದ ಇತಿಶ್ರೀಯಾಯಿತು; ಆಗದೆ ವಿಧಿಯೇ ಉಳಿಯಲಿಲ್ಲ. ಪ್ರೇಮಧರ್ಮ ಹೋದ ಮೇಲೆ ಹಿಂಸೆಯೊಂದನ್ನು ಬಿಟ್ಟು ಯಾವ ಧರ್ಮವೂ ಉಳಿಯಲಿಲ್ಲ— ಹಿಂಸೆಯೆಂದರೆ ಬಲವಂತರ ಅಧಿಕಾರ. ಹೀಗೆ ಹತ್ತೊಂಬತ್ತು ಶತಕಗಳ ವರೆಗೆ ಕ್ರೈಸ್ತ ಜಗತ್ತು ಬಾಳಿದೆ..."

ಗಾಂಧಿಯವರು ಟಾಲಸ್ಟಾಯರಿಗೆ ಬರೆದ ಮೂರು ಪತ್ರಗಳೂ ಮಾಸ್ಕೋನಲ್ಲಿರುವ ವ್ಲಾದಿಮಿರ್ ಚೆಟಕೋಫ ಸಂಗ್ರಹಾಲಯದಲ್ಲಿವೆ.

ಗಾಂಧಿಯವರ ಮೂರು ಇಂಗ್ಲಿಷ್ ಪತ್ರಗಳೂ ಅವುಗಳ ರಶಿಯನ್ ಅನುವಾದಗಳೂ ಟಾಲ್‌ಸ್ಟಾಯರ ದಿನಚರಿಯ ವಿವಿಧ ಉಲ್ಲೇಖಗಳೂ ಲಿಟರೇಚರ್ನಯೆ ನಸ್ಲೆಡ್‌ಸ್ಟ್ವೊ (ಸಾಹಿತ್ಯ ಸಂಪ್ರದಾಯ) ಎಂಬ ಸಂಗ್ರಹದಲ್ಲಿ ಮಾಸ್ಕೋದಿಂದ ೧೯೩೯ ರಲ್ಲಿ ಪ್ರಸಿದ್ಧವಾಗಿವೆ.

ಹೊಸ ಪುಸ್ತಕಗಳು

ನೀತಿಯೂ ನಾಗರಿಕತೆಯೂ

'ನಾಗರಿಕತೆ' ಎಂದರೆ ಬಾಹ್ಯಸಂಸ್ಕಾರವೆಂಬ ಅರ್ಥವನ್ನು ಗ್ರಹಿಸಿ ಅಂತರಿಕ ಸಂಸ್ಕಾರವನ್ನು ಸಂಸ್ಕೃತಿ ಶಬ್ದವನ್ನು ಬಳಸುವುದು ಇಂದಿನ ರೂಢಿ. ನಾಗರಿಕತೆಯು ಏಳಿಗೆಯ ಮಾತೆತ್ತಿದಾಗಲೇ ಜೊತೆಜೊತೆಗೇ ಪತಿವ್ರತೆಯಂತೆ ಸಂಸ್ಕೃತಿ ಬೆನ್ನುಹತ್ತಿಬರುತ್ತದೆ. ಆದರೆ ನಾಗರಿಕತೆ ತನ್ನ ವಿಶಾಲವಾದ ಮತ್ತು ಗಂಭೀರವಾದ ಅರ್ಥದಲ್ಲಿ ಸಂಸ್ಕೃತಿಯನ್ನೂ ಒಳಗೊಂಡಿದೆಯೆಂಬುದನ್ನು ಮರೆಯ ಕೂಡದು. ಪುಸ್ತಕಾಲಂಕೃತ ವಿದ್ಯಾರ್ಥಿ ಹೇಗೆ ನಿಜವಿದ್ಯಾರ್ಥಿಯಾಗಲಾರನೋ ಹಾಗೇ ಬಾಹ್ಯಸಂಸ್ಕಾರಮಾತ್ರದಿಂದ ಮನುಷ್ಯನು ನಾಗರಿಕನಾಗಲಾರನು. ಅನಾಗರಿಕವೆಂಬುದಕ್ಕೆ ಅಸಂಸ್ಕೃತವೆಂಬ ಅರ್ಥ ಹೆಚ್ಚು ಕಡಿಮೆ ಹೊಂದುವುದಾದರೆ ನಾಗರಿಕ ಶಬ್ದಕ್ಕೆ ಸಂಸ್ಕೃತ ಶಬ್ದ ಹೊಂದಿಕೊಳ್ಳಲೇ ಬೇಕಲ್ಲವೆ?

ಶ್ರೀ ಪಾಟೀಲ ಪುಟ್ಟಪ್ಪನವರು ಹುಬ್ಬಳ್ಳಿಯ "ನೂರು ಪುಸ್ತಕಗಳು" ಎಂಬ ಗ್ರಂಥಮಾಲೆಯಲ್ಲ ಹೊರಡಿಸಿದ "ಧರ್ಮದೃಷ್ಟಿ" ಎಂಬ ಹೆಸರಿನ ೮೪ ಪುಟಗಳ, ಒಂದು ರೂಪಾಯಿ ಬೆಲೆಯ ಪುಟ್ಟ ಪ್ರಬಂಧಗಳ ಪುಸ್ತಕದಲ್ಲಿಯ ಡಾ. ಸರ್ವಪಳ್ಳಿ ರಾಧಾಕೃಷ್ಣನ್ನರ ಮಾತಿನಂತೆ ಇಂದು, "ಹೊಸ ಹೊಸ ಪದಪ್ರಯೋಗಗಳಿಗೇನೂ ಕೊರತೆಯಿಲ್ಲ. ಪಾಶ್ಚಾತ್ಯನಾಗರಿಕತೆ, ಪ್ರಜಾಪ್ರಭುತ್ವ ಮಾನವ ಸ್ವಾತಂತ್ರ್ಯ, ಸಾಮಾಜಿಕನ್ಯಾಯ, ಹೊಸ ವ್ಯವಸ್ಥೆ, ಸಾಮ್ರಾಜ್ಯವಾದ, ಸಮಾಜವಾದ, ಬಂಡವಾಳಗಾರಿಕೆ ಹಾಗೂ ಇನ್ನೂ ಅನೇಕ ಪದಗಳನ್ನು ಸ್ವೇಚ್ಛೆಯಿಂದ ಉಪಯೋಗಿಸಲಾಗುತ್ತದೆ. ನಮ್ಮ ಕಾಲದಲ್ಲಿ ಶಬ್ದದ ಬೆಲೆ ಕಡಿಮೆಯಾಗುತ್ತ ನಡೆದಿದೆಯೆಂಬುದಕ್ಕೆ ದಿನದಿನವೂ ಕೋಟ್ಯಂತರ ಶಬ್ದಗಳನ್ನು ಆಕಾಶವಾಣಿ, ಚಲಚ್ಚಿತ್ರ ಹಾಗೂ ಸಾರ್ವಜನಿಕ ಸಭೆಗಳ ಮೂಲಕ ಹೊರಗೆ ಹಾಕುತ್ತಿರುವುದೇ ಸಾಕ್ಷಿಯಾಗಿದೆ."

'ಸುಧಾರಕ' ರ ಆತ್ಮಘಾತಕತೆ

ಒಂದು ನಾಗರಿಕತೆಯ ವಿಷಯವೆತ್ತಿಕೊಂಡಾಗ ಅದರ ಕಾವ್ಯಶಿಲ್ಪಾದಿ ಕಲೆಗಳು, ವಿಜ್ಞಾನ ತತ್ವಜ್ಞಾನಾದಿ ಶಾಸ್ತ್ರಗಳು ಇವುಗಳ ಬೆಳವಣಿಗೆ ಮತ್ತು ಸಿದ್ಧಾಂತಗಳನ್ನೂ ಆ ಮೂಲಕ ಜನ ಜೀವನ ಪಕ್ವವಾದ ಮಟ್ಟವನ್ನೂ ಪರಿಗಣಿಸುವುದು ರೂಢಿ. 'ಊರಿದ್ದಲ್ಲಿ ಹೊಲೆಗೇರಿಯಿದೆ' ಎಂಬ ನಾಣ್ಣುಡಿಯಂತೆ ಹಿಂದಿನ ಮತ್ತು ಇಂದಿನ ಎಲ್ಲ ನಾಗರಿಕತೆಗಳಲ್ಲೂ ಅದದರ ರಾಜಕೀಯ, ಸಾಮಾಜಿಕ ವೈಜ್ಞಾನಿಕ ಮತ್ತು ಕಲಾತ್ಮಕ ಜೀವನದ ಬಗೆಗಳನ್ನು ವರದಿಮಾಡುವ ಸಾಹಿತ್ಯಾದಿ ಪ್ರತಿಫಲಗಳನ್ನು ಅವಲೋಕಿಸಿದರೆ ಅಲ್ಲಿ ಗುಣಗಳ ಜೊತೆಗೆ ದೋಷಗಳೂ ಇದ್ದುದು ಅವಗತವಾಗುತ್ತದೆ. ಭಾರತದ ನಾಗರಿಕತೆಯ ಬಗ್ಗೆ ಹೇಳುವಾಗ ಆಧುನಿಕರಾದ ಪಾಶ್ಚಾತ್ಯ ಪೌರಸ್ತ್ಯವಿದ್ವಾಂಸರೆಲ್ಲ ಋಗ್ವೇದಕಾಲೀನ ನಾಗರಿಕತೆ ಅತ್ಯುದಾತ್ತ ಮಟ್ಟದ್ದಿತ್ತೆಂದೂ ಹೇಳುತ್ತಾರೆ. ಆಧುನಿಕರಿಂದ ಆರಾಧ್ಯರೆನಿಸುವ ಅನಾಗರಿಕತೆಯನ್ನಾದರೂ ಆಧುನಿಕರಿಂದು 'ಹಳೆಯದು' ಆದುದರಿಂದ ಅದು ನಮ್ಮರಿಗೆ ಆದರ್ಶವಲ್ಲ, ಅನುಕರಣೀಯವಲ್ಲ ಎಂದು ಹೇಳುವ ಪರಿಪಾಠಬಿದ್ದುಹೋಗಿದೆ. ಈ ಹಿಂದೆ ಕೆಲಕಾಲ ಹಳೆಯದರ ಅನುಕರಣದ ಹುಚ್ಚು ನಿರಂಕುಶರೀತಿಯಿಂದಸಾಗಿಜನಜೀವನದ ಪ್ರಗತಿಗೆ ಕಂಟಕವೆನಿಸಿದ್ದರೆ, ಇಂದು ಹೊಸತಿನ ಹುಚ್ಚಿನಿಂದ ಸದಸದ್ವಿವೇಕವಿಲ್ಲದೆ "ಹೊಸ ಮಡಿಕೆಯನ್ನು ಕಂಡೆಯಾ, ಕಿಸಿದೆಯಾ ಬಾಯ ?" ಎಂಬ ಜನವಾಣಿಯಂತೆ ಕಣ್ಣು ಮುಚ್ಚಿಕೊಂಡು ಆಧುನಿಕತೆಯ ಹೆಸರಿನಲ್ಲಿ ಹಿತಾಹಿತಗಳನ್ನೆಣಿಸದೆ ನೀತಿ, ನಿಯಮ, ತತ್ವ, ವಿಚಾರಗಳನ್ನು ಆದರಿಸಿ ಆಚರಣೆಗೆ ತರುವ ಹುಂಬತನ ಮೆರೆಯುತ್ತಿದೆ. ಅಲ್ಲದೆ, ಕೆಲವೆಡೆ ವಿಚಾರಕ್ಕೂ ಆಚಾರಕ್ಕೂ ಅಂತರ ಹೆಚ್ಚುತ್ತಹೋಗಿರುವುದೂ ಒಂದು ಹೊಸತನವೆನಿಸಿದೆ. ಹಳೆಯದು, ಹೊಸದು ಎಂಬ ಕಾರಣಗಳಿಂದ ಯಾವುದೂ ಗ್ರಾಹ್ಯ ಅಥವಾ ತ್ಯಾಜ್ಯವೆನ್ನಿಸದು. ವೈಜ್ಞಾನಿಕ ಮನೋವೃತ್ತಿಯ ಬಗ್ಗೆ ಋಥೇಚ್ಛ ಸಂತಹೋಷ ಮಾಡಿಕೊಳ್ಳುವ ಆಧುನಿಕರು ಈ ಮಾತನ್ನು ಮನನಮಾಡಿಕೊಳ್ಳುವುದು ಅವಶ್ಯಕ. ಕಲೆಯ ಹೆಸರಲ್ಲಿ ಇಂದಿನ ಭಾರತವು ಅನೀತಿ ವೃದ್ಧಿಗೆ ಸಾರ್ವಜನಿಕವಾಗಿ ಅವಕಾಶ ಕೊಡುತ್ತ, ಅದೇ ವೇಳೆಗೆ ಗಾಂಧಿಯ ಜೆ ೫೮ ಸ್ತ್ರೀಯರ, ಅಸ್ಪೃಶ್ಯರ ಉದ್ಧಾರ, ಅವರಿಗೆ ಗೌರವದಾನ ಮುಂತಾದ ಸದಾದರ್ಶಗಳನ್ನು ಕೊಂಡಾಡುತ್ತ ಸಾಗಿರುವ ಸಮಾಜನೇತೃಗಳ, ರಾಜಕೀಯಧುರೀಣರ ಮತ್ತು ಶೈಕ್ಷಣಿಕಮುಂದಾಳುಗಳ ಕಪಟ ಪ್ರಯತ್ನಕ್ಕೆ ಪುರಸ್ಕಾರ ಕೊಡುತ್ತ ಹೋಗಿರುವುದನ್ನು ಕಂಡರೆ ವಿದ್ವಾಂಸನಾರೂ ನಗದೆ ಉಳಿಯಲಾರನು. ಪ್ರಸ್ತುತ ಪುಸ್ತಕದಲ್ಲಿ ಸ್ತ್ರೀಯರ ಸುಗುಣಗಳನ್ನು ಪ್ರಶಂಸಿಸಿರುವ ಕವಿವರ ರವೀಂದ್ರರ ಮಾತುಗಳನ್ನು ಉದ್ಧರಿಸಿರುವಂತೆ ಇಂದು ಕೇವಲ ಮಾತಿನಿಂದ ಹಿಂದೆ ಕೆಲವೊಮ್ಮೆ ಕೆಲ ಕಾರಣಗಳಿಂದ ನಿಂದಿತರಾಗಿದ್ದವರನ್ನು ಹೊಗಳುವ ಕೆಲಸ ಅವ್ಯಾಹತವಾಗಿ ಸಾಗಿದೆಯಲ್ಲದೆ, ಅವರ ಯೋಗ್ಯತೆಯನ್ನು ಕಾರ್ಯ ಪ್ರಪಂಚದಲ್ಲಿ ಉನ್ನತಗೊಳಿಸುವ ಬಗ್ಗೆ ಪ್ರಯೋಜನಕ್ಕೆ ಬರುವ ಯಾವ ಪ್ರಯತ್ನವೂ ನಡೆಯುತ್ತಿಲ್ಲ. ಅದರಿಂದ ದಲಿತರ ದ್ವೇಷಾಸೂಯೆ, ಅಹಂಕಾರ ಅಸಹನೆಗಳನ್ನು ಉಚ್ಚ ಮಟ್ಟದವರ ವಿರುದ್ಧ ಕೆರಳಿಸುವ ದುಷ್ಕಾರ್ಯವನ್ನು ಸಾಧಿಸಿದಂತಾಗಿ, ಆ ಮೂಲಕ ಮೇಲಿನವರ ಪ್ರತೀಕಾರ ಬುದ್ಧಿಯನ್ನು ಪ್ರಚೋದಿಸಿ ಅವರಿಂದ ಪಡೆಯಬೇಕಾದ ಸಾಂಸ್ಕೃತಿಕ ಶಿಕ್ಷಣದ ಲಾಭವನ್ನು ಕಳೆದುಕೊಳ್ಳುವ ಪ್ರಸಂಗವುಂಟಾಗಿದೆಯೆಂಬುದನ್ನು ವಿವೇಕಿಯಾದ ಅನುಭವಿಗೆ ತಿಳಿಯಲು ಕಷ್ಟವಲ್ಲ. ವಿಶ್ವಭ್ರಾತೃತ್ವ, ಸಹಜೀವಿಗಳ ಸ್ನೇಹ, ಸಾಮ್ಯ, ಸಾಮರಸ್ಯ ಇವುಗಳನ್ನು ಶಂಖನಾದದ ಮೂಲಕ ಜಗತ್ತಿಗೆ ಜಾಹೀರು ಮಾಡುವ ಈ ದಲಿತೋದ್ಧಾರಕರೂ ಸಮಾಜ ಸುಧಾರಕರೂ ಆಧುನಿಕ ನಾಗರಿಕತೆಯ ಹೆಸರಿನಲ್ಲಿಕಲೆಯ ಸುಖಸಂಕಥಾವಿನೋದದಮೂಲಕ ಮತ್ತು ಸನಾತನ ರೀತಿನೀತಿಗಳ ಅಸದ್ವಿಡಂಬನದ ಮೂಲಕ ಉದ್ದೇಶ ಹಾನಿಯನ್ನು ಹೊಂದುತ್ತಿರುವುದಲ್ಲದೆ, ಮೊದಲೇ ಕೆಟ್ಟುಹೋದ ನಾಗರಿಕತೆಯನ್ನೂ ಸಾರ್ವಜನಿಕ ಸಂಸ್ಕಾರವನ್ನೂ ಮತ್ತಷ್ಟು ಅಧೋಗತಿಗಿಳಿಸುತ್ತಿರುವುದು ಸಂತಾಪದಾಯಕವಾಗಿದೆ, ಖಂಡನೀಯವಾಗಿದೆ.

ಜಿಜ್ಞಾಸುಗಳಿಗೆ ಸದಾದರ್ಶ

ಹಳೆಯದೆಂಬ ಒಂದೇ ಕಾರಣದಿಂದ ಸಂಸ್ಕೃತ ಸಾಹಿತ್ಯವನ್ನು ಅಭ್ಯಸಿಸಲು ಅಲಕ್ಷ್ಯ ತೋರುವ ಮತ್ತು ಬುದ್ಧಿಯನ್ನು ಸಾಕಷ್ಟು ದುಡಿಸಲು ಸೋಮಾರಿತನ ಬಿಡದ ಆಧುನಿಕ-"ಸುಕುಮಾರ ಮತಿ" ಗಳ ಅನುಕೂಲಕ್ಕಾಗಿ ಶ್ರೀ ಪಾಟೀಲ ಪುಟ್ಟಪ್ಪನವರು ಚಿಕ್ಕ ಪುಟ್ಟ "ನೋಟ್ಸ್" ಗಳ ರೂಪದಲ್ಲಿ ಪ್ರೋಫೆಸರ್ ಹೋರ್, ಮಾರ್ಕಸ್ ಅರೀಲಿಯಸ್, ಎಚ್. ಜಿ. ವೆಲ್ಸ್, ರಾಮಕೃಷ್ಣ ಪರಮಹಂಸರು, ವಿವೇಕಾನಂದರು, ರಾಧಾಕೃಷ್ಣನ್ ಮುಂತಾದ ಹಲವಾರು ಪಾಶ್ಚಾತ್ಯ ಪೌರಸ್ತ್ಯ ಮೇಧಾವಿಗಳ, ಸುಹೃದಯರ ಮತ್ತು ಮಹಾತ್ಮರ ಸೂಕ್ತಿಗಳನ್ನು ಸಂಗ್ರಹಿಸಿ ಪ್ರಸ್ತುತ ಪುಸ್ತಕದಲ್ಲಿ ಕೊಟ್ಟಿರುವುದು ಅಭಿನಂದನೀಯವಾಗಿದೆ. ಹಿಂದಿನ ಸಂಸ್ಕೃತ ಮತ್ತು ಕನ್ನಡ ಸಾಹಿತ್ಯಗಳಲ್ಲಿಯ ಸುಭಾಷಿತ, ನೀತಿಶತಕ, ಶರಣವಚನ, ದಾಸರ ಪದ ಮುಂತಾದ ಅಗಣಿತ ಗ್ರಂಥ ರಾಶಿಗಳಲ್ಲಿ ತಲೆ ಹಾಕಿದವರಿಗೆ ಈ "ನೋಟ್ಸು"ಗಳಲ್ಲಿ ಹೊಸ ಭಾವಗಳು, ಆಧುನಿಕ ಕಲ್ಪನೆಗಳು ಬಹಳ ಇವೆ ಎಂದೆನಿಸದು; ಸನಾತನ ನೀತಿಯನ್ನೇ ಇವು "ಸುಲಿದ ಬಾಳೆಯ ಹಣ್ಣಿನಂದದಿ, ಕಳೆದ ಸಿಗುರಿನ ಕಬ್ಬಿನಂದದಿ ಮೊಳಿಸಿ ಮುಷ್ಪದ ಹಾಲಿನಂದದಿ" ಬಿಡಿ ಬಿಡಿಸಿ ಹೊಸಗನ್ನಡದ ಹಗುರು ಮಾತಿನಲ್ಲಿ ಬೇರೆ ಬೇರೆ ಮಹಾಪುರುಷರ, ತತ್ವಜ್ಞರ ಉದ್ಧೃತ ವಾಕ್ಯಗಳ ಮೂಲಕ ವಿವರಿಸಿರುವುದು ಕಂಡು ಬರುತ್ತದೆ. ಉದಾಹರಣೆಗಾಗಿ, "ಶೀಲವೇ ಸರ್ವಸ್ವ, ಜೀವನದ ನಾಟಕ ಶಾಲೆ", ಹೆಸರಿನ ಹಂಬಲಿಕೆ", "ಅಂತರಂಗ ಶಾಂತಿ", "ಪ್ರತಿಫಲ", "ನೀತಿಜೀವನ" ಎಂಬ ಚುಟಕಗಳ ಸಾರವನ್ನು ಭರ್ತೃಹರಿಯ ನೀತಿಶತಕವೊಂದರಲ್ಲೇ "ಐಶ್ವರ್ಯಸ್ಯ ವಿಭೂಷಣಂ...", "ಶ್ರೋತ್ರಂಶ್ರುತೇನೈವ...", "ಪ್ರಧಾನಂ ಪ್ರಚ್ಛನಂ...", "ಕ್ವಚಿತ್ಪೃಥ್ವೀಶಯ್ಯಃ..." "ಕರೇ ಶ್ಲಾಘ್ಯಾತ್ಯಾಗಃ..", "ನಿಂದಂತು ನೀತಿನಿಪುಣಾ...", ಎಂಬ ವೃತ್ತಗಳಲ್ಲಿ ಕಾಣಬಹುದಾಗಿದೆ. ಆದರೆ ಗ್ರಂಥಕರ್ತರು ತಾವು ಅನುಸರಿಸಲು ಯೋಗ್ಯವೆಂದು ಅನುಭವ ಮತ್ತು ವಿಚಾರಗಳ ಬೆಳಕಿನಲ್ಲಿ ಈ ಸೂಕ್ತಿಗಳನ್ನು ಆಯ್ದುಕೊಂಡಿರುವರೆಂಬ ಅಂಶ ಇಲ್ಲಿ ಗಣ್ಯವಾದುದು. ಅವರು ಹಾಕಿ ಕೊಟ್ಟ ಈ ಆದರ್ಶ ಪ್ರತಿಯೊಂದು ವ್ಯಕ್ತಿಗೂ ಅನುಕರಣೀಯವಾಗಿದೆ ಎಂಬುದನ್ನು ಎಷ್ಟು ಒತ್ತಿ ಹೇಳಿದರೂ ಕಡಿಮೆಯೇ; ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಗ್ರಂಥಗಳಿಂದ ಸೂಕ್ತಿಗಳನ್ನು ಆಯ್ದು ಸಂಗ್ರಹಿಸಿ ಮನನ ಮಾಡುವ ಈ ಅಭ್ಯಾಸ ವಿಶೇಷತಃ ಪಥ್ಯವೆಂದು ಮನಮುಟ್ಟಿ ಪುರಸ್ಕರಿಸಲು ಸಂತೋಷವಾಗುತ್ತದೆ. ನೀತಿಯ ನೆಲಗಟ್ಟು ಬಲಿಷ್ಠ ನಾಗರಿಕತೆಯ ರಚನೆಗೆ ಅವಶ್ಯವಿದೆ ಎಂಬ ಮಾತಿನಲ್ಲಿ ಶ್ರದ್ಧೆಯಿಡುವ ವಿವೇಕಿಗಳು ಇಂಥ ಸತ್ಪ್ರಯತ್ನವನ್ನು ಸ್ವತಃ ಮಾಡದಿರರು, ಅನ್ಯರು ಮಾಡುವಂತೆ ಪ್ರೋತ್ಸಾಹಿಸದಿರರು.

ಧೂಮಪಾನದ ಮೂಲ

ಚಿಕ್ಕಪುಟ್ಟ ಮಕ್ಕಳಿಂದ ಹಿಡಿದು ಮುದುಕರವರೆಗೆ, ಹೆಂಗಸರು ಗಂಡಸರೆನ್ನದೆ, ಎಲ್ಲ ವರ್ಗಗಳ ಜನರೂ ಇಂದು "ಹೊಗೆ ಬಿಡುವ"ದನ್ನು ನೋಡುತ್ತೇವೆ. ಈ ಸರ್ವವ್ಯಾಪಿ ಚಟ ಎಂದು ಪ್ರಾರಂಭವಾಗಿರಬಹುದು?

ಬ್ರಿಟಿಶ ಆಕಾಶವಾಣಿಯಲ್ಲಿ ಮಾರ್ಕ ಗಿಲ್‌ಬರ್ಟರೆಂಬವರು ಮಾಡಿದ ಒಂದು ಭಾಷಣದಲ್ಲಿ, ಈ ವ್ಯಸನದ ಮೂಲ ೨೦೦೦ ವರ್ಷಕ್ಕಿಂತಲೂ ಹಿಂದೆ, ಅದೂ ಅಮೇರಿಕೆಯಲ್ಲಿ ಆಗಿರಬೇಕೆಂದು ಊಹಿಸಿದ್ದಾರೆ.

ಮಧ್ಯ ಅಮೇರಿಕೆಯ ಅರಣ್ಯಗಳಲ್ಲಿ ಹುದುಗಿರುವ ಪ್ರಾಚೀನ ದೇವಾಲಯಗಳ ಭಗ್ನಾವಶೇಷವೊಂದರಲ್ಲಿ ಪುರೋಹಿತನೊಬ್ಬನು ಒರಟಾದ ಕೊಳವೆಯಲ್ಲಿ ಹೊಗೆಸೊಪ್ಪು (ತಂಬಾಕು) ಸೇದುವ ದೃಶ್ಯವನ್ನು ಕಲ್ಲಿನಲ್ಲಿ ಕೆತ್ತಿದ್ದು ಸಿಕ್ಕಿದೆ. ೨೦೦೦ ವರ್ಷಕ್ಕಿಂತಲೂ ಹಳೆಯದಾದ ಮಾಯ ಜನರ ಸಂಸ್ಕೃತಿಯ ಉಚ್ಛ್ರಾಯ ಕಾಲದಲ್ಲಿ ಕಟ್ಟಿದ ಗುಡಿಗಳಿವು.

ಸೂರ್ಯಪೂಜಕರಾದ ಮಾಯರು ಸೂರ್ಯಪ್ರೀತಿಗಾಗಿ ತಂಬಾಕಿನ ಹೊಗೆಯನ್ನು ಅರ್ಪಿಸುತಿದ್ದರು. ಯುರೋಪ ಏಶಿಯಗಳಲ್ಲಿ ದೇವತೆಗಳಿಗೆ ಧೂಪಧೂಮಾರ್ಪಣೆ ರೂಢವಾಗಿತ್ತು. ಆದರೆ ಅಮೇರಿಕೆಯಲ್ಲಿ ತಂಬಾಕಿನ ರುಚಿ ಮತ್ತು ಹೊಗೆಯ ಮೋಹಕತೆಯನ್ನರಿತ ಪೂಜಾರಿಗಳು ದೇವತೆಗಳಿಗೆ ಅದನ್ನೇ ಅರ್ಪಿಸುತಿದ್ದರು.


೧೦೦೦ ವರ್ಷಕ್ಕಿಂತಲೂ ಹೆಚ್ಚುಕಾಲ ಮಧ್ಯ ಅಮೇರಿಕೆಯಲ್ಲಿ ಮೆರೆದ ಮಾಯರನ್ನು ೧೦೦೦ ವರ್ಷ ಕೆಳಗೆ ಅಜತೇಕರು ಸೋಲಿಸಿ ಉತ್ತರಾಭಿಮುಖವಾಗಿ ಅಟ್ಟಿದರು. ಈಗ ಸಂಯುಕ್ತ ಸಂಸ್ಥಾನಗಳಾಗಿರುವ ಭಾಗದಲ್ಲಿ ಹಬ್ಬಿದ ಈ ಮಾಯರಿಗೂ ಅಲ್ಲಿಯ ಕೆಂಪು ಜನರಿಗೂ ಸಂಪರ್ಕ ಬೆಳೆದು ಅವರೂ ಹೊಗೆಸೊಪ್ಪಿನ ಧೂಮದಿಂದ ತಮ್ಮ ಇಷ್ಟದೇವತೆಯಾದ ಮಣಿತಾವನನ್ನು ಅರ್ಚಿಸತೊಡಗಿದರು. ಕಾಲಾಂತರದಲ್ಲಿ ಹೊಗೆಸೊಪ್ಪಿನ ಧೂಪದಲ್ಲೇ ಮಣಿತಾವನ ಸಾನ್ನಿಧ್ಯವುಂಟೆಂದು ಅವರು ನಂಬತೊಡಗಿದರು.

ಮಾಯ ಪೂಜಾರಿಗಳು ಹೊಗೆಯನ್ನು ಸೇದಿ ಊರ್ಧ್ವಾಭಿಮುಖವಾಗಿ ಅದನ್ನು ಸೂರ್ಯನಿಗೆ ಅರ್ಪಿಸುತಿದ್ದುದು ಮುಂದೆ ಶತಾನುಶತಕಗಳಲ್ಲಿ ತನ್ನ ಧಾರ್ಮಿಕ ತಂತ್ರದ ಸ್ವರೂಪವನ್ನು ಬಿಟ್ಟು ಸರ್ವ ಜನಪ್ರಿಯವಾದ ವ್ಯಸನವಾಗಿ ಬಿಟ್ಟಿತು. ಕೊಲಂಬಸನು ೧೪೯೨ ರಲ್ಲಿ ಕೆರಿಬಿಯನ್ ಸಮುದ್ರದ ಬಹಾಮಾ ದ್ವೀಪಗಳಲ್ಲಿ ಬಂದಿಳಿದಾಗ ಸೂರ್ಯದೇವನಿಂದಲೇ ಪ್ರೇಷಿತರಾದ ದೇವದೂತರೆಂದು (ಪಾಪ!) ಬಿಳಿಯರನ್ನು ನಂಬಿದ್ದ ಅಲ್ಲಿನ ನಿವಾಸಿಗಳು ತಮ್ಮ ದೇವತೆಗೆ ಪ್ರಿಯವಾದ ಈ ತಂಬಾಕಿನ ಸೊಪ್ಪುಗಳನ್ನು (ತಮ್ಮ ಭಾವೀ ಅಂತಕರಿಗೆ) ಉಡುಗರೆ ಕೊಟ್ಟರು! "ತಬಾಕೋ" ಎಂಬುದು ಕಾರಿಬ್ ಭಾಷೆಯ ಶಬ್ದ. ಅದಕ್ಕೆ ಕೊಳವೆ ಎಂದು ಅರ್ಥ.

೧೬ ನೆ ಶತಕಾಂತ್ಯದಲ್ಲಿ ಕೊಲಂಬಸನು ಯುರೋಪಿಗೆ ತಂದ ಈ ಸೊಪ್ಪನ್ನು ಸೇದುವ ಚಟಕ್ಕೆ ಜಗತ್ತನ್ನೆಲ್ಲ ವ್ಯಾಪಿಸಲು ಬಹಳ ಕಾಲ ಬೇಕಾಗಲಿಲ್ಲ. ಹೀಗೆ ೨-೩ ಸಾವಿರ ವರ್ಷ ಹಿಂದಿನ ನಾಮಶೇಷವಾದ ಸಂಸ್ಕೃತಿಯೊಂದರ ಈ ದುರ್ವ್ಯಸನವೊಂದು ಚಿರಸ್ಥಾಯಿ, ಸರ್ವತ್ರ ವ್ಯಾಪಿಯಾಗಿಬಿಟ್ಟಿದೆ.

☀ ನಿರಾಶ್ರಿತ ವಕೀಲರ ಆಗಮನದಿಂದ ಉಂಟಾದ ಸಮ್ಮರ್ದದ ಫಲವಾಗಿ ದಿಲ್ಲಿಯ ನ್ಯಾಯಸ್ಥಾನಗಳು ಮೀನ ಬಜಾರಗಳಂತೆ ಕಾಣಿಸುತ್ತವೆಯೆಂದು "ಹಿಂದುಸ್ಥಾನ ಟೈಮ್ಸ್" (ದಿಲ್ಲಿ) ವರದಿಗಾರನು ಬರೆದಿದ್ದಾನೆ.

ಬಹುಭಾಷಾಬೃಹಸ್ಪತಿ



ಜೋಸೆಫ್ ಕ್ಯಾಸ್ಪರ್ ಕಾರ್ಡಿನಲ್ ಮೆಜೊಫಾಂಟಿಯು ಜಗತ್ತಿನಲ್ಲೆಲ್ಲ ಅತಿ ದೊಡ್ಡ ಭಾಷಾಪಂಡಿತ. ಇವನು ಇಟಲಿಯ ಬೊಲೋಗ್ನದವನು; ಕಲಿತ ಭಾಷೆಗಳು ೧೧೪, ಉಪಭಾಷೆಗಳು ೭೨. ಅವುಗಳಲ್ಲಿಯೂ ೬೦ ಭಾಷೆಗಳಲ್ಲಿ ಈತನು ಪಾಂಡಿತ್ಯವುಳ್ಳವನಾಗಿದ್ದನು. ಚೀನಿಯನ್ನು ಕಲಿಯಲು ೪ ತಿಂಗಳುಗಳು ಬೇಕಾಯಿತು, ಮಿಕ್ಕ ಭಾಷೆಗಳನ್ನು ಇವನು ಇದಕ್ಕಿಂತ ಕಡಿಮೆ ಕಾಲಾವಧಿಯಲ್ಲಿ ಕಲಿತಿದ್ದನು. ಇಡಿ ಜೀವಮಾನದಲ್ಲಿ ಸ್ವದೇಶದಿಂದ ಹೊರಗೆ ಹೋಗದಿದ್ದರೂ ಮೆಜೊಫಾಂಟಿ ರೋಮಿನ ಧರ್ಮಸಂಸ್ಥೆಯೊಂದರಲ್ಲಿ ಕ್ಯಾಲಿಫೋರ್ನಿಯದ ರೆಡ್ ಇಂಡಿಯನ್ ಉಪಭಾಷೆಗಳ ಮೂಲಕ ಧರ್ಮಬೋಧ ಮಾಡಲು ಶಕ್ತನಾದದ್ದೂ ಲಾರ್ಡ್ ಬೈರನ್ ಎಂಬ ಪ್ರಸಿದ್ಧ ಆಂಗ್ಲ ಕವಿಗೆ ಆಂಗ್ಲಗ್ರಾಮ್ಯವನ್ನು ಕಲಿಸಿದ್ದೂ ಆಶ್ಚರ್ಯಕರವಾಗಿದೆ.

ಗ್ರಹಗಳ ಮುನ್ನೋಟ

ಜುಲೈ ೨೫ ರಿಂದ ೩೧ ರ ವರೆಗೆ

ಜ್ಯೋತಿಷಿಃ— ಶ್ರೀ ಕೃಷ್ಣಶಾಸ್ತ್ರಿ ಭಿಡೆ, ಬೆಳಗಾಂವಿ

ಮೇಷ

ಈ ವಾರ ನಿಮ್ಮ ಭಾಗ್ಯೋದಯವಾಗಿದೆಯೆಂದು ಹೇಳಬಹುದು. ಮಕ್ಕಳಿಗೆ ಅಲ್ಪಸ್ವಲ್ಪ ಜಡ್ಡಾಗುವ ಸಂಭವವಿದ್ದರೂ ಉಳಿದವರ ಆರೋಗ್ಯ ಉತ್ತಮವಾಗಿರುವದು. ಸಾಂಪತ್ತಿಕ ಸ್ಥಿತಿಯೂ ಸುಧಾರಿಸುವದು. ಸ್ಥಾವರ ಆಸ್ತಿಯ ಸಂಗ್ರಹವಲ್ಲದೆ ಉದ್ಯೋಗದಲ್ಲಿ ಲಾಭ ಪ್ರತಿಷ್ಠೆಗಳು ಉತ್ಕರ್ಷ ಹೊಂದುವವು. ನೀಚ ಜನರು ನಿಮ್ಮ ಹೆಸರು ಕೆಡಿಸಲು ಪ್ರಯತ್ನ ಮಾಡಬಹುದು. ಆದರೆ ಅದು ಸಫಲವಾಗಲಿಕ್ಕಿಲ್ಲ. ವಾದ ಸ್ಪರ್ಧೆಗಳಲ್ಲಿ ಯಶ. ಪ್ರವಾಸ ಅನುಕೂಲ. ಭೆಟ್ಟಿಯಾದರೆ ಕೆಲಸ ಕೈಗೂಡುವದು. ಪತ್ರವ್ಯವಹಾರದಿಂದ ಫಲವಿಲ್ಲ. ಅಶ್ವಿನಿಯ ೪ ನೆ ಮತ್ತು ಭರಣಿಯ ಮೊದಲ ೩ ಚರಣಗಳಿಗೆ ಸ್ವಲ್ಪ ತೊಂದರೆ ತಾ. ೨೫, ೨೭, ೨೮, ೨೯ ಅನುಕೂಲ.

ವೃಷಭ

ನಿಮ್ಮ ಮಕ್ಕಳಿಗೂ ಕುಸು ಕ್ಲೇಶವಿದೆ. ಆದರೆ ನಿಮ್ಮ ಆರೋಗ್ಯ ಚನ್ನಾಗಿರುತ್ತದೆ. ಆರ್ಥಿಕ ವಿಷಯದಲ್ಲಿ ನಿಮಗೀ ವಾರ ಹಿತಕರವಾಗಿಯೆ ಇದೆ. ಉದ್ಯೋಗದಲ್ಲಿ ಪ್ರತಿಷ್ಠೆಯಂತೆ ಲಾಭವೂ ಧಾರಾಳವಾಗಿರುವದು. ಆದರೆ ವಾದ ಸ್ಪರ್ಧೆಗಳಲ್ಲಿ ನೀವು ಕುಸು ಹಿಮ್ಮೆಟ್ಟುವ ಸಂಭವವುಂಟು. ಪ್ರವಾಸಾದಿ ಕಾರ್ಯಗಳು ಸುಖಕರ. ಕೃತ್ತಿಕೆಯ ೪ ನೆ ಮತ್ತು ರೋಹಿಣಿಯ ಮೊದಲ ೩ ಚರಣಗಳು ಚಿಂತಿಸಬೇಕಾಗಿಲ್ಲ. ತಾ. ೩೫, ೨೬, ೨೩ ಅನುಕೂಲ.

ಮಿಥುನ

ಗರ್ವವೇ ಪತನದ ಮೂಲವೆಂದು ನಿಮಗೀ ವಾರ ಎಚ್ಚರಿಕೆ ಕೊಡಬೇಕಾಗಿದೆ. ಅದರಿಂದಲೇ ನಿಮಗೆ ನೆರೆಹೊರೆಯವರೊಡನೆ ಜಗಳ ಗಂಟುಬೀಳಬಹುದು. ಉದ್ಯೋಗದಲ್ಲಿ ಲಾಭ ಚನ್ನಾಗಿದ್ದರೂ ನೀವು ಧಂದೆಯವರಾಗಿರದೆ ನೌಕರಿಯಲ್ಲಿದ್ದರೆ ಅಣಿಸಿಕೊಂಡು ಕೆಲಸ ಮಾಡುವ ಪ್ರಸಂಗವಿದೆ. ವಾದ ಸ್ಪರ್ಧೆಗಳಲ್ಲಿ ಹೇಳತಕ್ಕ ಪೋತೇನೂ ಇಲ್ಲ. ಶತ್ರುವಿನ ಕಾಟ ಟಳಗಿಂದೊಳಗೆ ಇದ್ದೇ ಇರುವದು. ಮೇಲಾಗಿ ಬಾಯೂದ್ದರೂ ತಿರುಗಿ ಬೀಳುವಂತಿದೆ. ಪ್ರವಾಸ ಹಿತಕರ. ಭೆಟ್ಟಿಗಿಂತ ಪತ್ರವ್ಯವಹಾರ ಲೇಸು. ಮೃಗಶಿರದ ೪ ನೆ ಮತ್ತು ಆರ್ದ್ರೆಯ ಮೊದಲ ೩ ಚರಣಗಳಿಗೆ ಅನಿಷ್ಟ ಕಡಿಮೆ. ತಾ. ೨೫, ೨೬, ೨೭ ಅನುಕೂಲ.

ಕರ್ಕ

ಪತಿಪತ್ನಿಯರಿಬ್ಬರೂ ಪ್ರಕೃತಿಯ ವಿಷಯದಲ್ಲಿ ಜಾಗರೂಕರಾಗಿರಬೇಕು. ಮಕ್ಕಳು ಅಸ್ವಸ್ಥರಾದಿ ಹಿಡಿದರೂ ಅವರನ್ನು ಹಾದಿಗೆ ತರಲು ನಿಮ್ಮ ಹೆಂಡತಿಯ ಪೂರ್ಣ ಸಹಕಾರ ದೊರಕುವ ಕಾರಣ ವ್ಯಥೆಗೆ ಅವಕಾಶವಿಲ್ಲ. ಉದ್ಯೋಗದಲ್ಲಿ ಲಾಭ ಉತ್ತಮ. ಆದರೆ "ಸಾಕಪ್ಪಾ ಪರಸೇವೆ" ಎನಿಸುವಷ್ಟು ಮಟ್ಟಿಗೆ ಮೇಲಿನವರ ಕಟ್ಟು ಮಾತುಗಳನ್ನು ನೀವು ಕೇಳಬಾರದೆಂದಿದ್ದರೆ ವ್ಯವಹಾರದಲ್ಲಿ ತುಂಬ ಜಾಣ್ಮೆಯನ್ನು ತೋರಿಸಬೇಕಾಗುವದು. ವಾದ ಸ್ಪರ್ಧೆಗಳ ಹವ್ಯಾಸವನ್ನು ನೀವು ಕೆಲಕಾಲ ಬಿಟ್ಟುಬಿಡುವದೇ ಮೇಲು. ಭೆಟ್ಟಿ ಫಲಿಸದು. ಪ್ರವಾಸ ಹಿತಾವಹ. ಪತ್ರವ್ಯವಹಾರ ನೆಟ್ಟಗೆ. ತಾ. ೨೬, ೨೭, ೩೦, ೩೧ ಅನುಕೂಲ.

ಸಿಂಹ

ನಿಮ್ಮ ಪ್ರಕೃತಿ ಅಷ್ಟಕ್ಕಷ್ಟೆ. ಉಳಿದವರೆಲ್ಲ ಚನ್ನಾಗಿರುತ್ತಾರೆ. ಸಾಲದ್ದಕ್ಕೆ ನಿಮಗೆ ಎಷ್ಟೋ ಬೇಬ್ಬಕೆಯುಳ್ಳ ಅತಿಥಿಗಳು ಚಿತ್ತೈಸಿರುವರು. ಉದ್ಯೋಗದಲ್ಲಿ ಪ್ರತಿಷ್ಠೆ ಚನ್ನಾಗಿದ್ದರೂ ಲಾಭ ತುಂಬ ಕಡಿಮೆಯಾಗಿರುವದು. ಹೊಸ ಪೆಟ್ಟಿಗೆ ಬಗೆಹರಿಯದ ವ್ಯಕ್ತಿ ಯನ್ನು ಒತ್ತಿ ಹೇಳುವದೇ ಬೇಕಾಗಿಲ್ಲ. ಸ್ಥಾವರದಲ್ಲಿ ಅನುಕೂಲ ಪ್ರತಿಕೂಲ ಎರಡೂ ಒಗೆಯ ಪಟ್ಟಿಗಳು ಜರಗಿ ನಿಮ್ಮನ್ನು ಗೊಂದಲಕ್ಕೀಡು ಮಾಡಬಹುದು. ವಾದ ಸ್ಪರ್ಧೆಗಳಲ್ಲಿಯೂ ತುಂಬ ಕಷ್ಟ. ಭೆಟ್ಟಿಯ ಮೇಲೆ ನೀವು ಭವಿಷ್ಯತ್ತಿನ ಮೇಲೆ ಭರವಸೆಯಿಟ್ಟು ಇಂದಿನ ಅಡಚಣೆಗಳನ್ನು ಕಳೆಕವದಿಂದ ಎದುರಿಸಿ. ಪ್ರವಾಸ ಮತ್ತು ಭೆಟ್ಟಿ ಪತ್ರವ್ಯವಹಾರಕ್ಕಿಂತ ...

ಮೊದಲ ೩ ಚರಣಗಳಿಗೆ ಅಷ್ಟು ತೊಂದರೆಯಿಲ್ಲ. ತಾ. ೨೮, ೨೯, ೩೦ ಅನುಕೂಲ.

ಕನ್ಯಾ

ದೂರದ ಬೆಟ್ಟ ನುಣ್ಣಗೆ ಎಂಬಂತೆ ನಿಮ್ಮ ದೂರದ ಆಪ್ತರಿಂದ ನಿಮಗೆ ಗೌರವ ದೊರೆತೀತಲ್ಲದೆ ಉಳಿದ ಪ್ರಾಪಂಚಿಕ ಸುಖ ಅಷ್ಟಕ್ಕಷ್ಟೆ. ಉದ್ಯೋಗದಲ್ಲಿ ಲಾಭವೂ ಪ್ರತಿಷ್ಠೆಯೂ ಚನ್ನಾಗಿರುವವು. ವಾದ ಸ್ಪರ್ಧೆಗಳಲ್ಲಿ ಹೆಚ್ಚಿನದೇನೂ ಸಂಘಟಿಸುವಂತಿಲ್ಲ. ಶತ್ರುಗಳ ಉಪದ್ರವ ಇನ್ನೂ ಕೆಲ ದಿನ ನಿಮ್ಮನ್ನು ನೆಮ್ಮದಿಯಿಂದಿರ ಗೊಡುವದಿಲ್ಲ. ಸ್ಥಾವರದಲ್ಲಿ ಅನುಕೂಲ ಮಾತುಕತೆ. ಪ್ರವಾಸಕ್ಕೆ ಯೋಗ್ಯಕಾಲವಿದಲ್ಲ ಭೆಟ್ಟಿ ಪತ್ರವ್ಯವಹಾರಗಳಿಗೆ ಅಡ್ಡಿಯಿಲ್ಲ. ಉತ್ತರೆಯ ೪ ನೆ ಮತ್ತು ಹಸ್ತದ ಮೊದಲ ೩ ಚರಣಗಳಿಗೆ ತೊಂದರೆ ಕಡಿಮೆ. ತಾ. ೨೬, ೨೭, ೩೦, ೩೧ ಅನುಕೂಲ.

ತುಲಾ

ಎಲ್ಲರ ಪ್ರಕೃತಿಯೂ ಸರಿಯಾಗಿದ್ದರೂ ಪ್ರಾಪಂಚಿಕ ಸುಖ ಅಷ್ಟಕ್ಕಷ್ಟೆ. ನೆರೆಹೊರೆಯವರು ಒಮ್ಮಿಂದೊಮ್ಮೆ ನಿಮ್ಮನ್ನು ವಿರೋಧಿಸುವ ಸಂಭವವಿದೆ. ನೌಕರರಿಗೂ ದನಕರುಗಳಿಗೂ ಜಡ್ಡಾಗಬಹುದು. ಉದ್ಯೋಗದಲ್ಲಿ ಪ್ರತಿಷ್ಠೆಯೂ ಲಾಭವೂ ಉತ್ತಮ. ಶತ್ರುಗಳು ನಿಮ್ಮಿಂದ ಸೋಲು ತಿನ್ನುವರಾದರೂ ಮಿತ್ರರ ಮೇಲೆಯೆ ನೀವು ಕಣ್ಣಿಡಬೇಕು. ಏಕೆಂದರೆ ಅವರಲ್ಲೊಬ್ಬನು ನಿಮ್ಮ ಹೆಸರಲ್ಲಿ ಖೊಟ್ಟಿ ವ್ಯವಹಾರ ಮಾಡಬಹುದು. ಪ್ರವಾಸಾದಿ ಕಾರ್ಯಗಳು ಉತ್ತಮ. ಚಿತ್ರೆಯ ೪ ನೆ ಮತ್ತು ಸ್ವಾತಿಯ ೩ ಚರಣಗಳಿಗೆ ತೊಂದರೆ ಕಡಿಮೆ. ತಾ. ೨೬, ೨೭, ೨೮, ೨೯ ಅನುಕೂಲ.

ವೃಶ್ಚಿಕ

ನಿಮ್ಮ ಪ್ರಕೃತಿ ಸಾಧಾರಣ. ಮಕ್ಕಳಲ್ಲೊಬ್ಬರಿಗೆ ಜಡ್ಡಾಗುವ ಸಂಭವವಿದೆ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಸರಿಯಾಗಿಯೆ ಇರುವದು. ಪ್ರಿಯ ಜನರ ಸಹವಾಸ. ಉದ್ಯೋಗದಲ್ಲಿ ಪ್ರತಿಷ್ಠೆಯೂ ಲಾಭವೂ ಚನ್ನಾಗಿರುವದಲ್ಲದೆ ಅನಿರೀಕ್ಷಿತ ಲಾಭವೂ ಒದಗಬಹುದು. ವಾದ ಸ್ಪರ್ಧೆಗಳಲ್ಲಿ ಎರಡೂ ಪಕ್ಷಗಳು ಇದ್ದಲ್ಲೇ ಇರುವವು. ಪ್ರವಾಸ ತೊಂದರೆಯದು. ಆದರೆ ಭೆಟ್ಟಿ ಮತ್ತು ಪತ್ರವ್ಯವಹಾರಕ್ಕೆ ಅಡ್ಡಿಯಿಲ್ಲ. ಅನುರಾಧೆಯ ೪ ನೆ ಮತ್ತು ಜ್ಯೇಷ್ಠದ ಮೊದಲ ೩ ಚರಣಗಳಿಗೆ ಇನ್ನೂ ಅನುಕೂಲ. ತಾ. ೨೬, ೨೭, ೨೮, ೨೯ ಉತ್ತಮ.

ಧನು

ಹೆಂಡತಿಯ ಪ್ರಕೃತಿಯತ್ತ ಹೆಚ್ಚು ಲಕ್ಷ್ಯ ಕೊಡಿರಿ. ಕೆಲಸದವರಿಗೂ ಜಡ್ಡಾಗುವ ಸಂಭವವುಂಟು. ಉದ್ಯೋಗದಲ್ಲಿ ಪ್ರತಿಷ್ಠೆ ವಿಶೇಷವಿಲ್ಲದಿದ್ದರೂ ದ್ರವ್ಯಲಾಭ ಉತ್ತಮವಾಗಿದೆ. ವಾದ ಸ್ಪರ್ಧೆಗಳಲ್ಲಿ ನಿಮಗೇ ಅನುಕೂಲ. ಪ್ರವಾಸಾದಿ ಕಾರ್ಯಗಳಿಗೆ ಅನುಕೂಲ ಕಾಲವಿದಲ್ಲ. ಮೂಲದ ೪ ನೆ ಮತ್ತು ಪೂರ್ವಾಷಾಢದ ಮೊದಲ ೩ ಚರಣಗಳಿಗೆ ತೊಂದರೆ ಕಡಿಮೆ. ತಾ. ೨೮, ೨೯, ೩೦, ೩೧ ಉತ್ತಮ.

ಮಕರ

ನಿಮಗೂ ನಿಮ್ಮ ಹೆಂಡತಿಗೂ ಅಲ್ಪ ಜಡ್ಡಾಗಬಹುದು. ಮಕ್ಕಳ ಪ್ರಕೃತಿಯೂ ಅಷ್ಟು ಚನ್ನಾಗಿರಲಿಕ್ಕಿಲ್ಲ. ಉದ್ಯೋಗದಲ್ಲಿ ಪ್ರತಿಷ್ಠೆಗೆ ಕೊರತೆಯಿಲ್ಲ. ಆದರೆ ಲಾಭದ ಪ್ರಮಾಣ ತೀರ ಕಡಿಮೆಯಾಗುವದು. ಮಿತ್ರರು ಜಗಳ ಮಾಡುವ ಸಂಭವವಿದೆ. ಸ್ಥಾವರದಲ್ಲಿ ಹೊಸ ಹೊಸ ತೊಂದರೆಗಳು ಉಪಸ್ಥಿತವಾಗಬಹುದು. ವಾದ ಸ್ಪರ್ಧೆಗಳಲ್ಲಿ ಎರಡೂ ಪಕ್ಷಗಳ ಸ್ಥಿತಿ ಸಮಾನ. ಪ್ರವಾಸಕ್ಕೂ ಪತ್ರವ್ಯವಹಾರಕ್ಕೂ ಯೋಗ್ಯ ಕಾಲ. ಭೆಟ್ಟಿಗೆ ಮಾತ್ರ ಒಳಿತಲ್ಲ. ಉತ್ತರಾಷಾಢದ ೪ ನೆ ಮತ್ತು ಶ್ರವಣದ ಮೊದಲ ೩ ಚರಣಗಳಿಗೆ ತೊಂದರೆ ಕಡಿಮೆ. ತಾ. ೨೬, ೩೦, ೩೧ ಅನುಕೂಲ.

ಕುಂಭ

ನಿಮ್ಮ ಪ್ರಕೃತಿ ಚನ್ನಾಗಿದ್ದರೂ ಹೆಂಡತಿ ಮಕ್ಕಳನ್ನು ಸರಿಯಾಗಿ ಉಳಿಸಿರಿ. ಇವುದರಲ್ಲಿ ಗಂಡಹೆಂಡಿರು ಪರಸ್ಪರ ಕೈದಿಂದ ಬಾಳು ವಂತೆ ನಿಮ್ಮ ಕಾಲಿನ ಪ್ರಯತ್ನ ನೀವು ವಾದ ...

ಬಗೆಯ ಪ್ರಾಪಂಚಿಕ ತೊಂದರೆಗಳ ನಡುವೆ ಸಂಸಾರ ರಥವನ್ನು ಸಾಗಿಸಿಕೊಂಡು ಹೋಗುವದೇ ಕಷ್ಟವಾದೀತು. ಉದ್ಯೋಗದಲ್ಲಿ ಪ್ರತಿಷ್ಠೆ ಹೆಚ್ಚುತಿದ್ದರೂ ಲಾಭ ಕುಗ್ಗುತ್ತಿರುವ ಕಾರಣ. ನೀವು ಸತ್ಕರ್ಮಗಳಲ್ಲೇ ಆದರೂ ಮಾಡುವ ವೆಚ್ಚಕ್ಕೆ ಒಂದು ಮಿತಿ ಹಾಕಿಕೊಳ್ಳಬೇಕು. ವಾದಸ್ಪರ್ಧೆಗಳಲ್ಲಿ ಸ್ವಲ್ಪ ಹಿಂದೇಟು ಬೀಳಬಹುದು. ಪ್ರವಾಸ ಸುಖಕರ. ಆದರೆ ಭೆಟ್ಟಿ ಪತ್ರವ್ಯವಹಾರ ಎರಡೂ ಫಲಕಾರಿಯಲ್ಲ. ಧನಿಷ್ಠೆಯ ೪ ನೆ ಮತ್ತು ಪೂರ್ವಾಭಾದ್ರಪದದ ಮೊದಲ ೩ ಚರಣಗಳಿಗೆ ತೊಂದರೆ ಕಡಿಮೆ. ತಾ. ೨೭, ೨೮, ೨೯ ಅನುಕೂಲ.

ಮೀನ

ಪ್ರಕೃತಿ ಎಲ್ಲರದೂ ಸ್ವಸ್ಥವಾಗಿರುವದು. ಉದ್ಯೋಗದಲ್ಲಿ ಪ್ರತಿಷ್ಠೆಯೂ ಲಾಭವೂ ಅಪೇಕ್ಷಿತ ಪ್ರಮಾಣದಲ್ಲಿ ದೊರಕಿಯೆ ತೀರುವದು. ವೆಚ್ಚವೂ ವಿಪರೀತ. ಆಪ್ತರಲ್ಲಿ ಒಂದು ಸುಖದ ಮತ್ತೊಂದು ದುಃಖದ ಘಟನೆ ಜರಗಬಹುದು. ವಾದ, ಸ್ಪರ್ಧೆಗಳಲ್ಲಿ ಅನುಕೂಲ. ಪ್ರವಾಸ ತೊಂದರೆಯದು. ಭೆಟ್ಟಿಗೂ ಪತ್ರವ್ಯವಹಾರಕ್ಕೂ ಆತಂಕವಿಲ್ಲ. ಉತ್ತರಾಭಾದ್ರದ ೪ ನೆ ಮತ್ತು ರೇವತಿಯ ಮೊದಲ ೩ ಚರಣಗಳಿಗೆ ತೊಂದರೆ. ತಾ. ೨೬, ೨೭, ೩೦, ೩೧ ಅನುಕೂಲ.

ತಿರುವು — ಮುರುವು

೧. ಭೇದರುಂಡ ಗಂಡಾಂತರ

"ಉತ್ತರ ಕರ್ನಾಟಕದವರು ಮೈಸೂರಿನವರನ್ನು ತಮ್ಮ ಬಲೆಗೆ ಹಾಕಿಕೊಳ್ಳುತ್ತಾರೆಂಬ ಭಯವು ಮೈಸೂರಿನ ಜನರಲ್ಲಿ ಉತ್ಪನ್ನವಾಗಿದೆ ಎಂದು ತಿಳಿಸುತ್ತ ಶ್ರೀ ಶಾಸ್ತ್ರಿಗಳು ವಿಶಿಷ್ಟ ವ್ಯಕ್ತಿತ್ವವನ್ನೂ ಆರ್ಥಿಕ ಅಭಿವೃದ್ಧಿಯನ್ನೂ ಪಡೆದ ಮೈಸೂರು ಕಳವುಟ್ಟದಲ್ಲಿರುವ ಕರ್ನಾಟಕ ಭಾಗಗಳಲ್ಲಿ ವಿಲೀನವಾಗುತ್ತದೆಂದರೆ ಎಲ್ಲ ೧೬ ಆನೆ ಮೈಸೂರಿನವರಿಗೂ ಸಂಕಟವಾಗುತ್ತದೆಂದರು."

ಪಾಪ! ಅವರ ಸಂಕಟ ನೋಡಿ ನಮಗೂ ತುಂಬಾ ಸಂಕಟ ಆಗತ್ತೆ, ಸಾರ್! ೧೯೪೯ ರಲ್ಲಿ. ಅಂದ್ರೆ, ಶಾನೆ ಇತ್ತೀಚಿನ ಟೈಮಿನಲ್ಲಿ, ಮುಂಡಕ್ಕೆ ಮುಂಡಾಸ ಕಟ್ಟಿಕೊಂಡು, ಸೊಂಟಕ್ಕೆ ಜರೀ ಶಲ್ಲೆ ಬಿಗಿದುಕೊಂಡು, ಆರ ಸೊತ್ತಿಗೆ—ಅರಮನೆ ನಂಬಿಕೊಂಡು ಉಚ್ಛ ರಾಜಕೀಯ ಸಂಸ್ಕೃತಿಯಿಂದ ಐನೂರು ಮಣಿತ ಮುಜರೆ ಮಾಡತಾ "ನಮ್ಮ ನ್ಯಾಳೋಕೆ ಹಾತೊರೆಯೋ ಜನಕ್ಕೆ ಸಂಕಟ ಆಗತಾ ಇಧೆ ಅಂದ್ರೆ ಸ್ವಾಮೀ, ಯಾರಿಗೆ ತಾನೇ ಸಂಕಟಾಗೋಕಿಲ್ಲ? ಪಾಪ! ಜವಾಬ್ದಾರಿ (?) ಸರ್ಕಾರ ಬರೋಮುಂಚೆ Awfully simple ಆದ ಜನ ಇದೇನೀಗ Simply awful ಆಯ್ತಲ್ಲ! ಅಲ್ಲ-ಏನಿದನ್ಯಾಯ, ಸಾರ್! ಮೈಸೂರಿನ ಉತ್ಪನ್ನ ಕನ್ನಡ ಜನದ ಕೈ ಸೇರೋದಂದ್ರೆ? ಮೈಸೂರು ಕನ್ನಡ ಅಂತ ತಿಳಿದಿಧಾರಿಯೆ ಈ ಉತ್ತರ ಕರ್ನಾಟಕ ಜನ? ಗಂಡಭೇರುಂಡದೆದುರು ಇದೇನೀ ಭೇದರುಂಡಗಂಡಾಂತರ?

* * *

೨. ಅಂಗೈ ಹುಣ್ಣಿಗೆ ಕನ್ನಡಿ ಯಾಕೆ ?

"ಇತ್ತೀಚೆಗೆ ಕಾಂಗ್ರೆಸ ಸಂಸ್ಥೆಯಲ್ಲಿ ಕಂಡು ಬಂದಿರುವ ಶೈಥಿಲ್ಯವನ್ನು ಪರಿಶೀಲಿಸಿ ಅದರ ನಿವಾರಣೆಗಾಗಿ ಪ್ರಯತ್ನವನ್ನು ಮಾಡಲಾಗುವುದು."

ಕಾರ್ಯದರ್ಶಿ ಶ್ರೀ ಕಲಾ ವೆಂಕಟರಾಯರ ಈ ಮಾತು ನಿಜವಾಗಿ ತಿರುವು-ಮುರುವು ಎಂದು ನಮ್ಮ ಅಭಿಪ್ರಾಯ. ಕಾಂಗ್ರೆಸದಲ್ಲಿ ಶೈಥಿಲ್ಯ! ವಜ್ರಾದಪಿ ಕಠೋರ, ಕುಸುಮಾದಪಿ ಮೃದು ಆದ ಕಾಂಗ್ರೆಸ ಹೃದಯದಲ್ಲಿ ಶೈಥಿಲ್ಯವೆಂದರೇನು? ಹಾಗೆ ಕೇಳಿದರೆ ಕಾಂಗ್ರೆಸ ಸಂಸ್ಥೆಯಲ್ಲಿ—ಅರ್ಥಾತ್ ಆ ಸಂಸ್ಥೆಯ ಅನೇಕ ಅನುಯಾಯಿಗಳಲ್ಲಿ ನಿಜವಾದ ಗಟ್ಟಿಗತನ ಬಂದಿದೆ. ಅಲ್ಲ, ಆಂಧ್ರ-ವೆಂಕಟರಾಯರೆ, ನಿಜವಾದ ಕಲಾ ನಿಮ್ಮಲ್ಲಿದ್ರೆ ಈ ಗಟ್ಟಿಗತನ ತಿಳಿದುಕೋಬೇಕು ನೀವು. ನಿನ್ನಿನ ಮಂತ್ರಿ ಇಂದಿನ ಮಂತ್ರಿಯ ಮೇಲೆ ಬಹಿರಂಗವಾಗಿ ಆರೋಪ ಹೊರಿಸುವುದು ಸಡಿಲರ ಲಕ್ಷಣವೆ? ಅನೇಕ ವರ್ಷಗಳಿಂದ ಚುನಾವಣೆಗಳನ್ನು ಗೆಲ್ಲುತ್ತಿರುವಾಗ ಒಮ್ಮೆಲೆ ಸೋಲಿನ ಮೇಲೆ ಸೋಲನ್ನು ಅಹ್ವಾನಿಸಿ, ಎದುರಿಸಿ, ಅಪ್ಪಿಕೊಳ್ಳುವುದು ಗಟ್ಟಿಗತನವಲ್ಲವೆ? ಕಾಂಗ್ರೆಸು ಪ್ರಜಾಪ್ರಭುಸಂಸ್ಥೆ. ಅಂದರೆ ಪ್ರಜೆಗಳ ಪ್ರಭುವಾದ ಸಂಸ್—ಅಲ್ಲ—ಅಂಗೈ ಹುಣ್ಣಿಗೆ ಕನ್ನಡಿ ಯಾಕೆ? ಅಂಗೈಗೆಯೆ ಯಾಕೆ ಹುಣ್ಣು ಎಂದರೇನು? ನಾಣ್ಯದ ಬದಲು

ನೋಟುಗಳೆ ಇದ್ದರೂ ನೋವಾಗುವುದಿಲ್ಲ... ನಿಮಗೆ ಅನುಭವವಿದೆಯೆ? ಹಾಗಿಲ್ಲದಿದ್ದ... ಮಾತು ಜೇಡ ಅನುಭವವೆ ಸತ್ಯ, ಉ... ಭೋಗವೆ ಅಹಿಂಸೆ.

× × ×

ಸಹವಾಸಕ್ಕೊ ಅಸಹ್ಯವಾಸ

ಇತ್ತೀಚೆಗೆ ಎಲ್ಲಿ ನೋಡಿದಲ್ಲಿ ಕಸಗುಡಿಸು... ಮತ್ತು ಭಂಗೀ ಜನಗಳೇ ಹೆಚ್ಚಾಗಿ ಸಂ... (ಮುಷ್ಕರ) ಗಳನ್ನು ಹೂಡುತ್ತಾರೆ. ಇದಕ್ಕೆ ಕಾರಣವೇನು ಎಂದು ತಿರುಕಪ್ಪನಿಗೆ ಅನೇಕ ಪ್ರಶ್ನೆಗಳು ಬಂದಿವೆ. ತಿರುಕಪ್ಪನ ದೃಷ್ಟಿಯಿಂದ ಒಂದೇ ಒಂದು ಕಾರಣ. ವಂಶಾನುವಂಶ ಅದೇ ಕೆಲಸವನ್ನು ಮಾಡುವವರಿಗೂ ತಲೆಯುವಷ್ಟು ಹೊಲಸು [ಮತ್ತು ನಾ... (ವಾಸನೆ) ಪರಿಸ್ಥಿತಿಯಲ್ಲಿ ಬೆಳೆದಿದೆ.

* * *

೪. ಭತ್ತದ ಕತ್ತೆ

"....ಗ್ರಾಮದಿಂದ ಐವರು ೨೭ ಕತ್ತೆಗಳ ಮೇಲೆ ೨೭ ಚೀಲ ಭತ್ತ ಹೇರಿಕೊಂಡು ಇಲ್ಲಿಗೆ ಬರುವಾಗ್ಗೆ—ನಗರ ಪೋಲೀಸರು—ಹಿಡಿದಿದ್ದಾರೆ."

- ದಿನ ಪತ್ರಿಕೆಯ ವರದಿ

ಪೋಲೀಸರನ್ನು ತಪ್ಪಿಸದೆ ಇಲ್ಲವೆ ಒಲಿಸ... ಭತ್ತ (ಧಾನ್ಯ) ಸಾಗಿಸುವವರು ಯಾರು ಎಂಬುದು ಈಗಲಾದರೂ ಸ್ಪಷ್ಟವಾಯಿತೆ?

* * *

೫. ಸ್ವಾರ್ಥವಿರೋಧಿ ಸರ್ಕಾರ

"ಸ್ವಾರ್ಥಸಾಧನೆಯನ್ನು ಬದಿಗೊತ್ತಿ ದೇಶದ ಹಿತಕ್ಕೇ ಪ್ರಾಶಸ್ತ್ಯವನ್ನು ಕೊಡುವ ಉದ್ದಿಮೆದಾರರಿಗೆ ಸರ್ವವಿಧದ ಸಹಾಯ ನೀಡಲು ಸರಕಾರವು ಸದಾ ಸಿದ್ಧವಿದೆ"— ಮುಂಬಯಿ ಮಂತ್ರಿಗಳೊಬ್ಬರು ನುಡಿದ ಅಡಳಿತ ಧೋರಣೆಯ ಮಹತ್ವದ ಮಾತಿದು. ಕೂಲಿಕಾರರಿಗೆ ಸರಕಾರದ ಸಹಾಯ— ಸಹಾನುಭೂತಿಗಳಿಲ್ಲ ಎಂದು ಗುಣುಗುಟ್ಟುವ ಸಾಮ್ಯ—ಸಮಾಜ—ಓದಿಗಳಿಗೆ ಮಂತ್ರಿಗಳು ಖಂಡತುಂಡ ಉತ್ತರವನ್ನು ಕೊಟ್ಟಿದ್ದಾರೆ. ಮೇಲಿನ ಮಾತಿನಲ್ಲಿ. ಕೂಲಿಕಾರರಂತೆ! ಅವರು ಯಾವಾಗಲೂ ಸ್ವಾರ್ಥ-ಸಾಧನೆಗೆ— ಹೊಟ್ಟೆ ಹೊರೆದುಕೊಳ್ಳುವುದಕ್ಕೆ— ಮಾತ್ರ ದುಡಿಯುವವರು. ಅಂತಹರಿಗೆ ಸಹಾಯವನ್ನು ನೀಡುವುದು ಹೇಗೆ? ಇಷ್ಟೇಕೆ? ಸ್ವಾರ್ಥಸಾಧನೆಯನ್ನು ಬದಿಗೊತ್ತಿ— ಸಂಬಳವಿಲ್ಲದಲೆ— ದೇಶಕ್ಕಾಗಿ ದುಡಿಯುವವರಿಗೆ— ಅವರು ಯಾರೇ ಇರಲಿ, ಮಂತ್ರಿಗಳಿರಲಿ ಮತ್ತೊಬ್ಬರಿರಲಿ— ಅವರಿಗೆ ಸರಕಾರವು ಸಹಾಯವನ್ನು ನೀಡಲೇಬೇಕು. ಆದ್ದರಿಂದ, ನೀಡುತ್ತಲಿದೆ ಎಂಬುದನ್ನು ನಾವು ಸಂತೋಷದಿಂದ (ಸಂತೋಷ ನಮ್ಮದಲ್ಲ, ಅವರದು) ಒಪ್ಪುತ್ತೇವೆ.

× × ×

೬ ಪತ್ರಿಕಾ ಫಲಾಹಾರ

ಹೆಚ್ಚು ಆಹಾರ ಧಾನ್ಯವನ್ನು ಬೆಳೆಯಿಸಲು ಹಿಂದುಸ್ಥಾನ ಸರ್ಕಾರವು ನಿಶ್ಚಯಿಸಿದ್ದು ಆ ಕೆಲಸದಲ್ಲಿ ಪತ್ರಿಕೆಗಳಿಂದ ಪೂರ್ತಿಯಾಗಿ ಸಹಕಾರ ಬೇಕೆಂದು ಮುಖ್ಯ ಮಂತ್ರಿ ಜವಾಹರಲಾಲರು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಮುಖ್ಯ ಮಂತ್ರಿಗಳ ಬೇಡಿಕೆಗೆ ತಿರುಕಪ್ಪನದೂ ಪುಷ್ಟಿ ಇದೆ. ಅನೇಕ ಪತ್ರಿಕೆಗಳು ಅನೇಕ ರೀತಿಗಳಲ್ಲಿ ಸಹಕಾರವನ್ನು ನೀಡಬಹುದಾಗಿದೆಯಲ್ಲ? ಇಂದು ಕೆಲ ದಿನ ಮತ್ತು ವಾರ ಪತ್ರಿಕೆಗಳ ಉಪಯೋಗ ಹೆಚ್ಚಾಗಿ ಕಿರಾಣಿ ಅಂಗಡಿಗಳಿಗಾಗಿ ಇವೆ. ಆದರೆ, ಆಯಾ ಪತ್ರಿಕೆಗಳ ಸಂಪಾದಕರು ಅಚ್ಚಿನ ಕಾಳಿಕೆ ಮಸಿಯೊಳಗೆ ಗ್ಲುಕೋಸನ್ನಾಗಲಿ ಮತ್ತಾವುದ ಶಕ್ತಿದಾಯಕ ದ್ರವ್ಯವನ್ನಾಗಲಿ ಬೆರೆಯಿಸಿದರೆ ಎಂತಹ ಸಹಾಯ! ವಾಚಕರೆ. ಛೆ! ಅಗೆಲ್ಲಿಯ ವಾಚಕರು? ಯಾಕೆಂದರೆ, ಆಗ ಎಲ್ಲರೂ ಭಕ್ಷಕರು. ದಿನಕ್ಕೆ ೩-೪, ವಾರಕ್ಕೆ ೧೦-೧೨ ಪುಟಗಳನ್ನು ನುಂಗಿ ನೀರು ಕುಡಿದಲ್ಲಿ ಆಹಾರ ಸಮಸ್ಯೆಯನ್ನೂ ಬಿಡಿಸಿದಂತಾಗುವುದು. ಪತ್ರಿಕೆಗಳಲ್ಲಿನ ಜ್ಞಾನವನ್ನೂ ಜೀರ್ಣಿಸಿಕೊಂಡಂತಾಗುವುದು. ಏಕಾದಶಿಗೊಮ್ಮೆ ಅಚ್ಚು ಮಾಡದೆ ಬರಿಯ ಕಾಗದವನ್ನೆ ಹಂಚಿದರಾಯಿತು. ಪತ್ರಿಕೆಯ ಕಾಗದದ ಮೇಲಿನ ಕಂಟ್ರೋಲನ್ನು ಇದಕ್ಕಾಗಿಯೆ ತೆಗೆಯಲಾಗಿದೆ ಎಂದೂ ಹೊಸದಿಲ್ಲಿಯ ಅಧಿಕಾರಿ ವರ್ತುಳಗಳ ಸನಿಹದ "ಉಗಮ" ಗಳಲ್ಲಿ ಹೇಳಲಾಗುತ್ತಿದೆ— ಎಂಬುದನ್ನು ತಿರುಕಪ್ಪ ಬಲ್ಲ!

ಹರಿಜನ ಲೇಖ

ಅಗ್ರಲೇಖ

ಆಹಾರದ ಉತ್ಪಾದನೆಗಾಗಿ

ಆಹಾರದ ಉತ್ಪಾದನೆ ದೇಶದ ಮುಖ್ಯ ಕಾರ್ಯಕ್ರಮವಾಗಿದೆ. ದೇಶ ಯುದ್ಧನಿರತವಾಗಿದ್ದರೆ ಹೇಗೋ ಹಾಗೆಯೆ ಆಹಾರ ಸಮಸ್ಯೆಯನ್ನು ಸಡಹಬೇಕೆಂದು ಸರಕಾರಕ್ಕೆ ಸಲಹೆ ಕೊಡಲಾಗಿದೆ. ಜನರ ಸಹಕಾರವಿಲ್ಲದೆ ಯಾವ ಕಾರ್ಯವೂ ಸಫಲವಾಗದೆಂಬ ಮಾತು ನಿಜವಾಗಿದ್ದರೂ ಉತ್ಪಾದನೆ, ಸಂಗ್ರಹ, ಸಾಗಿಕೆ ಮತ್ತು ಹಂಚಿಕೆಯ ಕಾರ್ಯದಲ್ಲಿ ತೊಡಗಿದ ಜನರಿಗೆ ಅನುಕೂಲವಾದ ಸಂವಿಧಾನಗಳನ್ನು ಸರಕಾರವೇ ನಿರ್ಮಿಸಬೇಕೆಂಬುದೂ ಸ್ವಯಂವೇದ್ಯವಾದ ಮಾತು.

ಈ ಕೆಳಗಿನ ವ್ಯವಸ್ಥೆಗಳು ಅವಶ್ಯವೆಂದು ನನಗೆ ತೋರುತ್ತದೆ:

೧. ಭೂಕಂದಾಯವನ್ನು ಹಣದ ರೂಪದಲ್ಲಿ ಎತ್ತುವದರ ಬದಲಿಗೆ ಧಾನ್ಯರೂಪದಲ್ಲಿ ಎತ್ತಲು ಯೋಗ್ಯ ಪದ್ಧತಿಯನ್ನು ಪ್ರಾರಂಭಿಸಬೇಕು. ಬ್ರಿಟಿಶರಿಗಿಂತ ಹಿಂದಿನ ರಾಜ್ಯಭಾರಗಳಲ್ಲಿ ಹೀಗೆಯೆ ಮಾಡುತ್ತಿದ್ದರು; ಈಗಲೂ ಈ ರೂಢಿ ಒಡೆಯ—ಒಕ್ಕಲುಗಳ ನಡುವೆ ಬಳಕೆಯಲ್ಲಿದೆ. ಅದು ರೈತರಿಗೇನೂ ಪ್ರಿಯವಾಗಿಲ್ಲ. ಆದರೆ ರೈತನು ಬೆಳೆಸಿದ ಎಲ್ಲ ವಿಧದ ಪೈರುಗಳಲ್ಲಿಯೂ ಕೋಟುಪಾಲು ಕೊಡಬೇಕಾದುದರಿಂದಲೇ ಅದು ಅಪ್ರಿಯವಾಗಿತೆ ಹೊರತು ಬೇರಲ್ಲ. ಇದರಿಂದ ದುರ್ನೀತಿಯೂ ರೈತನ ಪೀಡನೆಯೂ ಪರಿಣಮಿಸುತ್ತಿತ್ತು. ಸುಧಾರಿಸಿದ ಪದ್ಧತಿಯಲ್ಲಿ, ಆಯಾ ಹೊಲದಲ್ಲಿ ಬೆಳೆಸಬಹುದಾದ ನಿರ್ದಿಷ್ಟ ಧಾನ್ಯದ ಅಷ್ಟು ತೂಕವನ್ನು ಪಡೆಯುವಂತಾಗಬೇಕು; ಈ ತೂಕವನ್ನು ಭೂಕಂದಾಯದಂತೆಯೆ ಇಂತಿಷ್ಟು ವರ್ಷಗಳ ಮಟ್ಟಿಗೆ ಎಂದು ಗೊತ್ತುಪಡಿಸಬೇಕು. ಅಥವಾ, ಒಡನೆ ಇದು ಜಾರಿಯಲ್ಲಿ ಬರುವಂತಾಗಲು, ಧಾನ್ಯದ ಬೆಲೆಯನ್ನು ಗೊತ್ತುಪಡಿಸಿ, ರೈತನು ತನ್ನ ಕಂದಾಯಕ್ಕೆ ಸರಿದೂಗುವಷ್ಟು ಧಾನ್ಯವನ್ನು ತೆರಬೇಕೆಂದು ವಿಧಿಸಬೇಕು.

ಪೇಟೆಗಾಗಿ ಗೊತ್ತುಪಡಿಸುವ ಅಥವಾ ಪೇಟೆಯಲ್ಲಿ ಪ್ರಚಲಿತವಾದ ತತ್ಕಾಲದ ಬೆಲೆಗಿಂತ ಹೆಚ್ಚಿಗೆ ಬೆಲೆಯನ್ನು ಈ ಕಂದಾಯದ ಧಾನ್ಯಕ್ಕೆ ಗೊತ್ತುಪಡಿಸುವದು ಸೂಕ್ತವಾಗಿದೆ.

ಕಂದಾಯವೆಂದು ತೆರಲಾಗುವ ಧಾನ್ಯವು ಸರಕಾರದಿಂದ ಒದಗಿಸಲ್ಪಟ್ಟ ಬೀಜಗಳಿಂದಲೇ ಬೆಳೆಸಲ್ಪಟ್ಟರಬೇಕಲ್ಲದೆ, ಕಸಕಡ್ಡಿ, ಹೊಲಸು ಮೊದಲಾದವುಗಳಿಂದ ಮುಕ್ತವಾಗಿರಬೇಕೆಂದು ಬೇರೆ ಹೇಳಬೇಕಾಗಿಲ್ಲ.

೨. ರೈತನು ಬೇರೊಬ್ಬರ ಒಕ್ಕಲಾಗಿ ಸಾಗುವಳಿ ಮಾಡುತಿದ್ದರೆ, ಒಡೆಯ-ಒಕ್ಕಲುಗಳ ನಡುವೆ ಒಕ್ಕಲಿಗನ ಬೇಡಿಕೆಗೇ ಪ್ರಾಶಸ್ತ್ಯ ದೊರೆಯಬೇಕು. ಒಕ್ಕಲಿಗನಿಗೆ ಕನಿಷ್ಠ ಇಂತಿಷ್ಟು ಧಾನ್ಯ ಉಳಿದೇ ತೀರಬೇಕೆಂದು ವಿಧಿಸಬೇಕು. ಅರ್ಥಾತ್ ದುಡಿದ ಒಕ್ಕಲಿಗೆ ಅವನ ಕನಿಷ್ಠ ಪ್ರಮಾಣದ ಧಾನ್ಯ ದೊರೆತಲ್ಲದೆ ಒಡೆಯನಿಗೆ ಅದರ ಮೇಲೆ ಹಕ್ಕು ಬರಲಾರದು.

೩. ಆಹಾರದ ಬೆಳೆ ಬರುವ ಹೊಲದಲ್ಲಿ ರೊಕ್ಕದ ಪೈರುಗಳನ್ನು ಬೆಳೆಸದಂತೆ ನಾನಾ ವಿಧ ನಿರ್ಬಂಧಗಳನ್ನು ಹಾಕಬೇಕು. ಉದಾಹರಣೆಗೆ (ಅ) ರೊಕ್ಕದ ಪೈರು ಬೆಳೆಯುವ ಭೂಮಿಯ ಮೇಲೆ ಅಧಿಕ ತೆರಿಗೆಯನ್ನು ಹೊರಿಸಬಹುದು. (ಬ) ಸಾಲ ಕೊಡುವದು, ನೀರಾವರಿ, ಗೊಬ್ಬರ ಮೊದಲಾದವುಗಳ ಸೌಕರ್ಯಗಳು, ಕೂಲಿಕಾರರನ್ನೊದಗಿಸುವದು, ಕಣಜಗಳನ್ನು ಕಟ್ಟುವದು, ಕ್ರಿಮಿನಾಶಕ ಔಷಧಗಳನ್ನು ಒದಗಿಸುವದು, ಸರಕಾರೀ ಗುದಾಮುಗಳಲ್ಲಿ (ಇದ್ದರೆ) ಅಗ್ಗವಾಗಿ ರೈತರಿಗೆ ಉಗ್ರಾಣದ ಅವಕಾಶ ಕೊಡುವುದೇ ಮೊದಲಾದ ವಿಷಯಗಳಲ್ಲಿ ಆಹಾರ ಬೆಳೆಯುವವರಿಗೆ ಪ್ರಥಮ ಪ್ರಾಶಸ್ತ್ಯ ಕೊಡಬಹುದು.

೪. ಚಿಕ್ಕ ಸಾಗುವಳಿಗಾರನಿಗೆ ನಷ್ಟವಾಗುವಂತೆ ದೊಡ್ಡ ಸಾಗುವಳಿಗಳಿಗೆ ಪ್ರೋತ್ಸಾಹ ಕೊಡಬಾರದು. ಚಿಕ್ಕ ಚಿಕ್ಕ ಸಾಗುವಳಿಗಳ ಮೇಲೆ ನಮಗೆ ವಿಶ್ವಾಸವಿರಲಿ; ಬಹಳಿ, ಇಂದಿನ ಭಾರತದಲ್ಲಂತೂ ಅದೇ ಉತ್ಪಾದನೆಯ ಪ್ರಧಾನಪದ್ಧತಿಯಾಗಿದೆ. ಇಲ್ಲದರೆ ದೊಡ್ಡ ಸಾಗುವಳಿಗಳು ಹಣದ ಮೌಲ್ಯದಲ್ಲಿ ಅಗ್ಗವಾಗಿ ತೋರಿದರೂ ಅವು ಚಿಕ್ಕಪುಟ್ಟ ಸಾಗುವಳಿಗಾರರನ್ನು ಹಾಳು ಮಾಡಿಬಿಡುತ್ತವೆ. ಆದುದರಿಂದ ದೊಡ್ಡ ಪ್ರಮಾಣದ ಸಾಗುವಳಿಗಳು ಬೇಕಾಗಿಯೆ ಇದ್ದರೆ ಅವುಗಳನ್ನು ರೊಕ್ಕದ ಪೈರುಗಳಿಗೇ ಸೀಮಿತಗೊಳಿಸತಕ್ಕದ್ದು. ಅದು ಆಹಾರದ ಬೆಳೆಗಳೊಡನೆ ಮೇಲಾಟ ಹೂಡುವಂತಿರಬಾರದು. ದೊಡ್ಡ ಸಾಗುವಳಿಗಳಿಂದಲೇ ಆಹಾರ ಬೆಳೆಯಬೇಕಾಗಿ ಬಂದ ಪಕ್ಷದಲ್ಲಿಯೂ ಸರಕಾರವೇ ನೇರವಾಗಿ ಸಾಗುವಳಿ ಮಾಡಬೇಕೇ ಹೊರತು ಅದು ಗುತ್ತಿಗೆಗಾರರನ್ನು ಅಥವಾ ದೂರಸ್ಥ ಜಮೀನುದಾರರನ್ನು ಉಂಟುಮಾಡುವಂತಿರಬಾರದು. ಹಾಗಾದರೇನೆ ಸರಕಾರಕ್ಕೆ ಆಹಾರ ಬೆಳೆಸಲು ನಿಜವಾಗಿ ಎಷ್ಟು ವೆಚ್ಚ ತಗಲುವದೆಂದು ಗೊತ್ತಾದೀತು. ಆಗ ಸರಕಾರಕ್ಕೆ ಕುಶಲರಾದ ಹೊಲದ ಕೂಲಿಕಾರರನ್ನು ತರಬೇತು ಮಾಡಲಿಕ್ಕೂ "ವೈಜ್ಞಾನಿಕ ಕೃಷಿ"ಯನ್ನು ನಡೆಸಲಿಕ್ಕೂ ಸಾಧ್ಯವಾಗಬಹುದು. ಆಗ ಆಹಾರ ರಂಗದಲ್ಲಿ ಹೋರಾಡಲು ತನ್ನ ಸೈನಿಕರನ್ನು ನಿಯೋಜಿಸಲು ಕೂಡ ಅದಕ್ಕೆ ಅವಕಾಶ ದೊರೆಯುವದು. ಮಾತ್ರವಲ್ಲದೆ, ಸರಕಾರಿ ಆಡಳಿತೆ ಸಾಮಾನ್ಯವಾಗಿ ಖಾಸಗಿ ಆಡಳಿತೆಗಿಂತ ತುಟ್ಟಿಯೇ ಆಗಿರುವ ಕಾರಣ, ಅದರಿಂದ ಚಿಕ್ಕಪುಟ್ಟ ಸಾಗುವಳಿದಾರರನ್ನು ನಾಶಮಾಡದೆ ಎರಡೂ ಪದ್ಧತಿಗಳು ಸಂಗಡ ಸಂಗಡಲೇ ಉತ್ಕರ್ಷ ಹೊಂದಲು ಸಾಧ್ಯವಿದೆ.

೫. ಆಹಾರ ವಸ್ತುಗಳ ಉತ್ಪಾದನೆ, ಸಂಗ್ರಹ, ಮಾರಾಟ, ಹಂಚಿಕೆಗಳಿಗಾಗಿ ವಿವಿಧೋದ್ದೇಶದ ಸಹಕಾರಿ ಸಂಘಗಳಿಗೆ ಖಂಡಿತವಾಗಿಯೂ ಉತ್ತೇಜನ ಕೊಡಬೇಕು. ಅವರೆ ಈ ಚಟುವಟಿಕೆಗಳ ವಿಸ್ತರಣಕ್ಕೆ ಕೆಲಕಾಲ ಹಿಡಿಯುವದರಿಂದ, ವ್ಯಕ್ತಿಗಳಿಗೂ ತಮ್ಮ ಉಳಿಕೆಯನ್ನು ಸ್ವತಂತ್ರವಾಗಿಯಾಗಲಿ ಚಿಕ್ಕಪುಟ್ಟ ಕಾಲುಗಾರಿಕೆಗಳಲ್ಲಾಗಲಿ ಆಹಾರಕ್ಕೆ ಹೊಂದಿದ ಗ್ರಾಮೋದ್ಯೋಗಗಳಲ್ಲಿ ವಿನಿಯೋಗಿಸಲು ಪ್ರೋತ್ಸಾಹ ದೊರೆಯಬೇಕು. ರೈತರಿಗೂ ಅವರ ದನಕರುಗಳಿಗೂ ಹೆಚ್ಚು ಕೆಲಸವನ್ನು ಕೊಟ್ಟು, ಅವರ ಉಳಿಕೆಯನ್ನು ಅವರ ಅಂಕೆಯಲ್ಲೆ ಇರುವ ಕೈಗಾರಿಕೆಗಳಲ್ಲಿ ತೊಡಗಿಸಲು ಅವಕಾಶವೀಯುವದು ಉದ್ದೇಶವಾಗಿರಬೇಕು. ಹೀಗೆ, ಎತ್ತುಗಳಿಂದ ನಡೆಯುವ ಹಿಟ್ಟಿನ ಗಿರಣಿ, ಗಾಣ, ಬಂಡಿಗಳೇ ಮೊದಲಾದವುಗಳಿಗೂ ಅದೇ ಪ್ರಕಾರ ಸಿದ್ಧ ಆಹಾರ ಸಾಮಗ್ರಿಗಳು, ಪಿಷ್ಟ (ಗಂಜಿ) ಪದಾರ್ಥಗಳೇ ಮುಂತಾದವುಗಳಿಗೂ ಉತ್ತೇಜನ ನೀಗತಕ್ಕದ್ದು. ಇವುಗಳನ್ನು ತತ್ಸಮಾನ ಕಾರಖಾನೆ ಉತ್ಪತ್ತಿಗಳ ಸ್ಪರ್ಧೆಯಿಂದ ರಕ್ಷಿಸುವದು ಅವಶ್ಯ.

ಆಹಾರೋತ್ಪಾದನೆಯನ್ನು "ಯುದ್ಧ ಪ್ರಯತ್ನ"ವೆಂದು ಬಗೆಯುವ ಕಾರಣ, ಮತ್ತು ಚಿಕ್ಕ ರೈತರು ಭಾರತದಲ್ಲಿ ಅನಿವಾರ್ಯವಾದ ಕಾರಣ, ಚಿಕ್ಕಪುಟ್ಟ ರೈತರಿಗೆ ಪ್ರೋತ್ಸಾಹ ಕೊಡಲು ಸಾಧ್ಯವಿದ್ದುದನ್ನೆಲ್ಲ ಮಾಡಬೇಕು—ಗ್ರಾಮೋದ್ಯೋಗಗಳು ಈ 'ಎಲ್ಲ'ದರಲ್ಲಿ ಸೇರುತ್ತವೆ.

೬. ಹೆಚ್ಚು ಆಹಾರವನ್ನು ಬೆಳೆಸುವಲ್ಲಿ ಸರಕಾರದೊಡನೆ ಸಹಕರಿಸುವ ಹಳ್ಳಿ, ಸಹಕಾರಿ ಸಂಘ, ಪಂಚಾಯತಿ ಮೊದಲಾದವುಗಳಿಗೆ ಬೀಜ, ಗೊಬ್ಬರ, ತಗಾಯಿ, ನೀರಿನ ಸೌಕರ್ಯ ಇತ್ಯಾದಿಗಳ ವಿಷಯದಲ್ಲಿ ವಿಶೇಷ ಸೌಲತ್ತುಗಳನ್ನು ಕೊಡಬೇಕು.

೭. ಈ ವಿಷಯದಲ್ಲಿ ಎಲ್ಲಕ್ಕೂ ಮುಖ್ಯವಾಗಿ ದೊರಕಬೇಕಾದ ಸೌಲತ್ತೆಂದರೆ ಸಕಾಲದಲ್ಲಿ ಸೌಕರ್ಯ ದೊರೆಯುವದು. ಕಾರಖಾನೆಗಳಿಗೂ ವಾಹನ ಸೌಕರ್ಯಗಳಿಗೂ ಹೆಚ್ಚು ವೇಗವಾದ ಯಂತ್ರಗಳನ್ನು ದೊರಕಿಸಿಕೊಡುವದಕ್ಕಿಂತಲೂ ಸರಕಾರದ ಖಾತೆಗಳಲ್ಲಿ ವೇಗವನ್ನು ತುಂಬುವದು ಎಷ್ಟೊ ಅವಶ್ಯವಾಗಿದೆ. ಸರಕಾರದ ಖಾತೆಗಳೊಡನೆ ವ್ಯವಹರಿಸುವದೇ ಒಂದು ತಲೆಬೇಸರದ ಕೆಲಸ. ಎಷ್ಟೋ ವೇಳೆ ವಿಷಯಗಳು ಸರಳವಾಗಿದ್ದು, ಒಡನೆ ಲಕ್ಷ್ಯ ಕೊಟ್ಟರೆ ಕೆಲ ಕ್ಷಣದಲ್ಲೇ ಮುಗಿದು ಹೋಗುವಂತಿರುತ್ತವೆ. ಆದರೆ ಅದು ಫಲಿತಕ್ಕೆ ಬರಬೇಕಾದರೆ ತಿಂಗಳು ತಿಂಗಳುಗಳೇ ಹಿಡಿಯುತ್ತವೆ. ಆ ನಡುವೆ ಎಷ್ಟು ಸಲ ಹಾಜರಾಗಬೇಕು, ಎಷ್ಟು ಚಿಕ್ಕಪುಟ್ಟ ಅಧಿಕಾರಿಗಳ ಕೈ ಬೆಚ್ಚಗೆ ಮಾಡಬೇಕು, ಇಲ್ಲವೇ ರಿಜಿಸ್ಟಿ ಟಪಾಲ ಮೂಲಕ ನೆನಪಿನ ಚೀಟಗಳನ್ನು ಕಳಿಸಬೇಕು, ಅರ್ಜಿಯ ಹೊಸ ಪ್ರತಿಗಳನ್ನೇ ದಾಖಲುಮಾಡಬೇಕು, ಸಮಯ ಹಾಳು ಮಾಡಿಕೊಳ್ಳಬೇಕು! ಇಷ್ಟೆಲ್ಲ ಆದ ಮೇಲೂ ಕೊನೆಗೆ ಆ ಅರ್ಜಿ ನಿರಾಕರಿಸಲ್ಪಡಬಹುದು: ಹಳ್ಳಿಗರನ್ನು ತಾಲೂಕು ಅಥವಾ ಜಿಲ್ಲಾ ಕಚೇರಿಗಳಿಗೆ ಬರಮಾಡುವ ಬದಲು, ಹಳ್ಳಿಯ ವಿಷಯಗಳಿಗೆ ಸಂಬಂಧಿಸಿದ ಖಾತೆಗಳ ಅಧಿಕಾರಿಗಳು ಹಳ್ಳಿಹಳ್ಳಿಗೆ ಗುಂಪಾಗಿ ಹೋಗಿ, ಬಾಕಿ ಇರುವ ಮತ್ತು ಹೊಸದಾಗಿ ಬರಬಹುದಾದ ಅರ್ಜಿಗಳನ್ನು ಅಲ್ಲಿಂದಲ್ಲೇ ತೀರ್ಮಾನಿಸುವಂಥ ವ್ಯವಸ್ಥೆಯಾದರೆ ಎಷ್ಟೋ ಲೇಸು. ಅನೇಕ ಖಾತೆಗಳು ಸಂಬಂಧಿಸಿದ್ದರೆ ಆಗ ಆ ಎಲ್ಲ ಖಾತೆಗಳ ಮುಖ್ಯಾಧಿಕಾರಿಗಳೂ ಸೇರಿಯೆ ಹೋಗಬೇಕು; ಅಂದರೆ ಆಗಿಂದಾಗಲೇ ಅವರು ಪರಸ್ಪರ ವಿಚಾರ ಮಾಡಿಕೊಂಡು ನಿರ್ಣಯಿಸಬಹುದು. ಹಾಗಾದರೆ, ಅನೇಕ ಜಾತಿಗಳಿಗೆ ಸಂಬಂಧಿಸಿದ ಕಾಲುವೆಗಳಿಗೆ ಸಂಕ ಕಟ್ಟುವದು, ಸರಕಾರಿ ಭೂಮಿಗಳನ್ನು ಕೊಡುವದು, ಸಹಕಾರಿ ಸಂಘಗಳನ್ನು ನೋಂದುಮಾಡಿಕೊಳ್ಳುವದೇ ಮೊದಲಾದ ಕೆಲಸಗಳು ಬೇಗನೆ ನಡೆಯಬಹುದು. ಬೀಜಗಳನ್ನು ಯೋಗ್ಯ ಕಾಲದಲ್ಲಿ, ಯೋಗ್ಯ ಪ್ರಮಾಣದಲ್ಲಿ ಪೂರೈಸದಿದ್ದರೆ, ಸಾಗುವಳಿದಾರನು ಕೆಲಸ ಸಾಗಿಸಬೇಕಾದರೂ ಹೇಗೆ?

೮. ಸರಕಾರದವರು ಜನರಿಂದ ಪ್ರಾಮಾಣಿಕತೆಯನ್ನೂ ಸಹಕಾರವನ್ನೂ ನಿರೀಕ್ಷಿಸಬೇಕಾದರೆ ಮೊದಲು ಅವರು ತಮ್ಮ ಪ್ರಾಮಾಣಿಕತೆ ಸಹಕಾರಬುದ್ಧಿಗಳನ್ನು ಪ್ರದರ್ಶಿಸಿ ಕೀರ್ತಿ ಹೆಚ್ಚಿಸಿಕೊಳ್ಳಬೇಕು. ಸರಕಾರದವರು ಪೂರೈಸಬಹುದಾದ ಬೀಜ, ಗೊಬ್ಬರ, ಸಿಮೆಂಟು, ಕಬ್ಬಿಣಗಳೇ ಆಗಲಿ ಮತ್ತಾವ ಸರಕುಗಳೇ ಆಗಲಿ, ಮೋಲ್ತರಗತಿಯವೂ ಬೆರಕೆಯಿಲ್ಲದವೂ ತೂಕದಲ್ಲಿ ತಗಲು ಇಲ್ಲದವೂ ಆಗಿರಬೇಕಲ್ಲದೆ ಸಕಾಲದಲ್ಲಿ ಪೂರೈಸಲ್ಪಡಬೇಕು. ಕಾತ್ರಿ ಕೊಟ್ಟ ಸಾಲವಾಗಲಿ ಸಹಾಯ ಧನವಾಗಲಿ ಪೂರ್ತಿಯಾಗಿ ರೈತನ ಜೇಬಿಗೆ ಬೀಳುವಂತೆ ನೋಡಿಕೊಳ್ಳಬೇಕು. ನಾಗರಿಕನ ತಪ್ಪುಗಳಿಗೆ ಕಾಯದೆಯಲ್ಲಿ ನಾನಾ ಪ್ರಾಯಶ್ಚಿತ್ತಗಳು ಹೇಳಲ್ಪಟ್ಟಿದ್ದರೂ ಸರಕಾರದ ತಪ್ಪುಗಳಿಗೆ ಮಾತ್ರ ಶಿಕ್ಷೆ ಹೇಳಲ್ಪಟ್ಟಿಲ್ಲ. ಉದಾಹರಣೆಗಾಗಿ, ಎಲುಬಿನ ಗೊಬ್ಬರವನ್ನು ಅಗ್ಗವಾಗಿ ಒದಗಿಸುವ ಮಾತುಕೊಟ್ಟು ರಾಸಾಯನಿಕ ಸುಪರ್‌ಫಾಸ್ಫೇಟ ಗೊಬ್ಬರವನ್ನು ತುಟ್ಟಿದರದಲ್ಲಿ ಒದಗಿಸಿದರೆ ಅದು ಮೋಸವಲ್ಲದೆ ಮತ್ತೇನು? ಸರಕಾರದ ಹೊಲಗಳಲ್ಲೆ ಉಪಯೋಗಿಸಿ ವ್ಯರ್ಥವೆಂದು ತಿರಸ್ಕರಿಸಲ್ಪಟ್ಟ ಗೊಬ್ಬರವನ್ನು ಮಾರಲು ಜಾಹೀರಾತು ಹೊರಡಿಸುವುದೂ ಮೋಸವೇ.

ಇನ್ನು, ರೈತರು ಸಲಹೆಗಳನ್ನು ಅಪೇಕ್ಷಿಸಿದರೆ ಅದು ಒಡನೆ ದೊರಕುವಂತಿರಬೇಕು.

೯. ಶಿಕ್ಷೆ-ರಕ್ಷೆಗಳ ನೀತಿಯಲ್ಲಿ ಸರಕಾರಗಳಿಗೆ ಅಂಧಶ್ರದ್ಧೆಯಿದೆ. ಅವು ಸಹಕಾರವನ್ನು ಅಪೇಕ್ಷಿಸುವದು ಕಡಿಮೆ, ಆಜ್ಞಾಪಿಸುವದೇ ಹೆಚ್ಚು. ಶಿಕ್ಷೆಯೆಂಬುದು ದಬ್ಬಾಳಿಕೆಯ ಮತ್ತು ಲಂಚಗುಳಿತನದ ಸಾಧನ ಹೊರತು ಕಾರ್ಯಸಾಧನೆಗೆ ಅಷ್ಟು ಉಪಯುಕ್ತವಲ್ಲೆಂದು ಅವು ತಿಳಿದುಕೊಂಡರೆ ಲೇಸು. ಮತ್ತೆ ಅದು ಹತ್ತಿಕ್ಕುವುದಾದರೂ ಬಡವರನ್ನು; ನೀತಿಗೆಡಿಸುವದು ಸರಕಾರದ ಅಧಿಕಾರಿಗಳನ್ನೆ. ಶ್ರೀಮಂತರೂ ಪ್ರಭಾವಶಾಲಿಗಳೂ—ಅಥವಾ ಅವರಲ್ಲಿ ಅಧಿಕಾಂಶ ಜನರಂತೂ ಯಾವಾಗಲೂ ಶಿಕ್ಷೆಯಿಂದ ತಪ್ಪಿಸಿಕೊಳ್ಳಲು ಸಮರ್ಥರಾಗುತ್ತಾರೆ.

ರಕ್ಷೆಯ ಅಥವಾ ಬಹುಮಾನದ ಆಮಿಷವಾದರೂ ಒಳಿತಲ್ಲ. ಆದರೆ ಅವೆರಡರಲ್ಲಿ ಆರಿಸಬೇಕಾದರೆ, ಒಳ್ಳೆ ಕೆಲಸ ಮಾಡಿದವರಿಗೆ ಬಹುಮಾನ ಕೊಡುವದೇ ಕೆಲಸ ತಪ್ಪಿಸಿದವರನ್ನು ಶಿಕ್ಷಿಸುವದಕ್ಕಿಂತ ಒಳಿತೆಂದು ಹೇಳಬೇಕಾಗುತ್ತದೆ. ಆದರೆ ಶಿಕ್ಷೆಗಳನ್ನು ನಿಜವಾದ ತಪ್ಪುಗಾರರಿಗೆ ಕೊಡಬೇಕಲ್ಲದೆ ಒಂದು ವಿಶಿಷ್ಟ ಸಮಾಜದಿಂದಲೇ ದಂಡರೂಪದಲ್ಲಿ ವಸೂಲು ಮಾಡಬಾರದಾದರೂ ಬಹುಮಾನಗಳನ್ನು ಮಾತ್ರ ವ್ಯಕ್ತಿಗಳಿಗಾಗಲಿ ಗುಂಪುಗಳಿಗಾಗಲಿ ಕೊಡದೆ ಇಡಿ ಹಳ್ಳಿಗೇ ಕೊಡಬೇಕು. ಈ ಪ್ರಕಾರ ಒಂದು ಹಳ್ಳಿಯವರು ವಿಶಿಷ್ಟ ಸೂಚನೆಯನ್ನು ಕಡೆಗಣಿಸಿದರೆ ಅವರನ್ನು ಬೇರೆ ಬೇರೆಯಾಗಿ ದಂಡಿಸಬೇಕಲ್ಲದೆ ಇಡಿ ಹಳ್ಳಿಯನ್ನಲ್ಲ. ಆದರೆ ಆಜ್ಞೆಗಳನ್ನು ಸಾಮಾನ್ಯವಾಗಿ ಪಾಲಿಸಿದರೆ ಆಗ ಇಡಿ ಸಮಾಜಕ್ಕೇ ಉಪಯುಕ್ತವಾಗುವ ಯಾವುದಾದರೊಂದು ಅನುಕೂಲತೆಯನ್ನು ಒದಗಿಸುವ ಮೂಲಕ ಇಡಿ ಹಳ್ಳಿಗೇ ಬಹುಮಾನ ಕೊಡಬೇಕು. ಇದರಿಂದ ಹೊಂದಿಕೊಂಡು ಕೆಲಸ ಮಾಡುವ ಪ್ರವೃತ್ತಿಯೂ ಸಹಕಾರಬುದ್ಧಿಯೂ ಹುಟ್ಟುತ್ತವೆ.

ಇವು ಕೆಲವೇ ಸೂಚನೆಗಳು; ಇವು ಪರಿಪೂರ್ಣವೆಂದು ಹೇಳಲಾರೆ. ಆದರೂ ಅವು ಉಪಯೋಗಕ್ಕೆ ಬೀಳಬಹುದೆಂದು ಆಶಿಸುತ್ತೇನೆ.

ವರ್ಧಾ ೧೪-೭-೪೯ — ಕಿ. ಘ. ಮಶ್ರುವಾಲಾ

ಟಿಪ್ಪಣಿಗಳು

ಹೊಸ ಅಂಚೆತಿಕೀಟುಗಳು

ಹೊಸ ಅಂಚೆತಿಕೀಟುಗಳಿಗಾಗಿ ಆರಿಸಿಕೊಂಡ ಕಲಾಕೃತಿಗಳ ಬಗ್ಗೆ ಹಿಂದುಸ್ತಾನ ಸರಕಾರವನ್ನೇನು ನಾನು ಅಭಿನಂದಿಸಲಾರೆ. ಪ್ರತಿಯೊಂದು ಶಾಖೆಯಲ್ಲಿಯೂ ಮಿತವ್ಯಯ ಮಾಡಬೇಕೆಂಬ ಬೇಡಿಕೆ ಒಂದೇ ಸಮನೆ ಕೇಳ ಬರುತಿರುವಾಗ ಪ್ರತಿಯೊಂದು ತಿಕೀಟಿನ ಮೇಲೆ ಬೇರೆ ಬೇರೆ ಚಿತ್ರಗಳೇಕೋ ತಿಳಿಯದು. ಅದೇ ರೀತಿ ಬೇರೆ ಬೇರೆ ಆಕಾರಗಳಲ್ಲಿ ಮತ್ತು ವಿವಿಧ ಬಣ್ಣಗಳಲ್ಲಿ ಅವನ್ನು ಮುದ್ರಿಸುವದೇಕೋ ಅದೂ ತಿಳಿಯದು. ಯುದ್ಧ ಪ್ರಾರಂಭದಿಂದ ನಾವು ಉಪಯೋಗಿಸುತಿರುವ ಬೇರೆ ಬೇರೆ ಬೆಲೆಯ ತಿಕೀಟುಗಳನ್ನು ಗುರುತಿಸಲಿಕ್ಕೆ ವಿವಿಧ ಬಣ್ಣಗಳಲ್ಲಿ ಮುದ್ರಿಸಲ್ಪಟ್ಟ ಒಂದೇ ಆಕಾರದ ತಿಕೀಟುಗಳಿಂದಲೆ ಸರಕಾರದ ಕೆಲಸವು ಸಾಗುವದಲ್ಲದೆ ಹಳೆಯ ಶಿಲ್ಪಕಲೆಯನ್ನು ಪ್ರತಿನಿಧಿಸುತಿರುವ ಈ ಛಾಯಾಚಿತ್ರಗಳಿಂದ ದೊರೆಯತಕ್ಕಷ್ಟು ಬೆಲೆಯೇ ಅವುಗಳಿಗೆ ಬರುವದು. ಹಿಂದೀ ಕಲಾಕೌಶಲವನ್ನು ಮೆಚ್ಚುವವರೇನು ಅವುಗಳನ್ನು ಮರೆತಿಲ್ಲ.

ಪರದೇಶಸ್ಥರಿಗಾಗಿ ಈ ತಿಕೀಟುಗಳನ್ನು ಮಾಡಲಾಗಿದೆಯೋ? ತಿಕೀಟಿನ ಬೆಲೆಯೊಂದನ್ನು ಬಿಟ್ಟು ಉಳಿದುದೆಲ್ಲ ಹಿಂದೀ ಲಿಪಿಯಲ್ಲೇಕೆ ಮುದ್ರಿಸಿಲ್ಲ? ಮೂರು ಬಿಲ್ಲೆಯಿಂದ ೨ ಆಣೆಗಳ ವರೆಗಿನ ತಿಕೀಟುಗಳೆಲ್ಲ ಹಿಂದುಸ್ತಾನದ ಹಳ್ಳಿ ಹಳ್ಳಿಗೂ ಹೋಗುವವು. ಎರಡಾಣೆ ತಿಕೀಟಿನ ಮೇಲಿರುವ ನಟರಾಜನ ಚಿತ್ರದ ರಹಸ್ಯವೇನು, ಬೋಧಿಸತ್ವನ ಮಹತ್ವವೇನು? ರಾಜಶೀವಿಯಲ್ಲದ ಅಥವಾ ಯೋಗಿಗಳದಲ್ಲದ ವಿಚಿತ್ರ ಶೀವಿಯಲ್ಲಿ ಕುಳ್ಳನೇಕೆ ಕುಳಿತಿರುವನು? ಮುಂತಾದ್ದನ್ನೆಲ್ಲ ಗುಡ್ಡಗಾಡು ಜನರು ಮತ್ತು ಹಳ್ಳಿಗರು ಅದೆಂತು ತಿಳಿದುಕೊಳ್ಳಬಲ್ಲರು? ಹಳ್ಳಿಗರಿಗೆ ಬುದ್ಧ, ಬೋಧಿಸತ್ವ ಇಲ್ಲವೆ ಜಾತಕಗಳ ನೆನಪು ಇಲ್ಲ ಎಂಬದನ್ನು ಶಿಕ್ಷಣಜ್ಞರು ಮರೆತಿದ್ದರೆ ಮತ್ತೊಮ್ಮೆ ಕಲಿಯಲಿಕ್ಕೆ ಬೇಕು. ನಮ್ಮ ಹಳ್ಳಿಗಳಲ್ಲಿಯ ತರುಣ ಹುಡುಗ ಹುಡಿಗೆಯರು ಆ ನಟರಾಜನ ಶೀವಿಯಲ್ಲಿ ಬೀದಿಗಳಲ್ಲಿ ಅಡ್ಡಾಡಹತ್ತಿದರೆ, ಇಲ್ಲವೆ ಬೋಧಿಸತ್ವನ ರೀತಿಯಲ್ಲಿ ಕುಳಿತುಕೊಂಡರೆ ಅವರೆಷ್ಟು ಉಪಹಾಸಕ್ಕೀಡಾಗುವರೆಂಬದನ್ನು ನೆನೆಯಿರಿ. ಶಾಲೆ ಕಾಲೇಜುಗಳಲ್ಲಿ ಈ ಕೃತ್ರಿಮ ಹಾವಭಾವಗಳ ಪ್ರದರ್ಶನಗಳನ್ನು ನಾನು ನೋಡಿದ್ದೇನೆ ಮತ್ತು ಅವುಗಳ ಆ ವಿಚಿತ್ರ ಬಗೆಯಿಂದ ಮನೋರಂಜನವನ್ನೂ ಪಡೆದಿರುವೆನು. ಅಂಚೆ ಮತ್ತು ತಂತಿ ಶಾಖೆಯ ಮಂತ್ರಿಗಳ ಸಿಪಾಯಿಯಾಗಲಿ ಕಾರಕೂನನಾಗಲಿ ಸಾವಕಾಶವಾಗಿ ನಟರಾಜನ ಶೀವಿಯಲ್ಲಿ ಬಂದು ಮಹತ್ವದ ಒಂದು ಕಾಗದವನ್ನು ಕೊಟ್ಟರೆಂದರೆ ಅವರಿಗೆ ಅದೆಂತು ರುಚಿಸುವದೋ ನಾನರಿಯೆ. ಕೂಡ್ರುವಾಗ, ನಿಲ್ಲುವಾಗ ಮತ್ತು ನಡೆಯುವಾಗ ಸೈನಿಕರ ಬಗೆಯನ್ನು ಅನುಸರಿಸಬೇಕೆಂದು ಬಯಸುವಾಗಲೆ ಬಗೆಬಗೆಯ ಕೃತ್ರಿಮ ಮತ್ತು ಅಸಹ್ಯವಾದ ರೀತಿಯಲ್ಲಿ ಅವಯವಗಳನ್ನು ಮಣಿಸುವ ಚಿತ್ರಗಳನ್ನು ಪ್ರದರ್ಶಿಸುವಿರಿ. ತ್ರಿಮೂರ್ತಿಗಳುಳ್ಳ ತಿಕೀಟುಗಳು ಕೂಡ ರದ್ದುಮಾಡಲ್ಪಟ್ಟು ಕಸದ ಕುಂಡಗಳನ್ನು ಕಾಣುತಿರುವದರಿಂದ ಭಾವನಾತ್ಮಕರಾದ ಆ ತ್ರಿಮೂರ್ತಿಪೂಜಕರು ಅದೆಂತು ಸಹಿಸುವರೋ?

ಈಯೆಲ್ಲ ಚಿತ್ರಗಳು ಹಳೆಯವು. ಹಿಂದುಸ್ತಾನವು ಸಾಕಷ್ಟು ಮುಸೀದೆ, ಮಂದಿರ ಮತ್ತು ಮೂರ್ತಿಪೂಜಕ ಮನೋವೃತ್ತಿಯದಾಗಿರುವದು. ಆ ದಿಸೆಯಲ್ಲಿ ಹೊಸ ಪ್ರೋತ್ಸಾಹನೆಯೇನು ಅವಶ್ಯವಿಲ್ಲ. ಈ ಬಗೆಯ ಪ್ರದರ್ಶನದ ಉದ್ದೇಶವು ಕಲೆಗೆ ಪ್ರೋತ್ಸಾಹನೆ ಕೊಡುವದಾಗಿದ್ದರೆ ಯಾವ ಆಧುನಿಕ ಕಲಾ ಕುಶಲನೂ ಇದರಿಂದ ಪ್ರೋತ್ಸಾಹನೆ ಪಡೆಯಲಾರನು. ಈಗಲೂ ಹಿಂದುಸ್ತಾನಕ್ಕೆ ಹೊಸ ದೃಷ್ಟಿಯೇನೂ ಇಲ್ಲ ಎಂಬ ಭಾವನೆಯನ್ನು ಮಾತ್ರ ಇದು ಉಂಟುಮಾಡುತ್ತದೆ. ಅವರು ಹಿಂದೆಯೆ ದೃಷ್ಟಿಯನ್ನು ಚೆಲ್ಲಿ ತಮ್ಮ ಹಳೆಯ ವಸ್ತುಗಳನ್ನೆಲ್ಲ, ಅವು ಕುರೂಪಿ ಮತ್ತು ಅಸಂಸ್ಕೃತವಾಗಿದ್ದರೂ ಅವನ್ನು ಅತ್ಯಂತ ಸುಂದರವೆಂದು ಕರೆಯತಕ್ಕದ್ದು. ಬೇರೆ ಬೇರೆ ಆಕೃತಿ ವಿಶೇಷಗಳೇ ನಮಗೆ ಬೇಕಿದ್ದರೆ ಹಿಂದುಸ್ತಾನವು ಹಿಂದೆ ಎಂತಿದ್ದಿತೆಂಬುದರ ಚಿತ್ರಗಳು ಬೇಡ, ನಾವು ಕಟ್ಟಬೇಕೆನ್ನುವ ಹಿಂದುಸ್ತಾನದ ಚಿತ್ರಗಳು ಅವಾಗಿರಲಿ.

ವರ್ಧಾ ೧೩-೭-೪೯ —ಕಿ. ಘ. ಮ.

ರೂಪರಂಗ

ಪೃಥ್ವೀರಾಜರೂ ಅಭಿನಯ ಕಲೆಯೂ

ಪೃಥ್ವೀರಾಜರು ತಮ್ಮ ಜೀವನ ಚರಿತವನ್ನು ವಿವರಿಸಿದ್ದರಲ್ಲಿ ಅಭಿನಯಕಲೆಯಲ್ಲಿ ಅವರು ನಡೆಸಿದ ಅಸ್ಥೆ ಮತ್ತು ಮಾಡಿದ ಪ್ರಯೋಗಗಳು ಬಹು ಮುಖ್ಯವಾದವು. ಅವರಿಗೆ ಸಂಸ್ಕೃತ ತಿಳಿಯದ್ದಕ್ಕಾಗಿ ಬಹಳ ಪಶ್ಚಾತ್ತಾಪ ಪಡುತೆ. ಅದು ನಿಜವೆಂದೇ ಹೇಳಬೇಕಾಗಿದೆ. ಅದಿಲ್ಲದೆ ಭಾರತೀಯ ನಾಟ್ಯಶಾಸ್ತ್ರದ ಅರ್ಥ ಪೂರ್ಣತೆಯನ್ನು, ಭಾವಶಕ್ತಿಯ ಬಗೆಯನ್ನು ಅರಿತು ಅರಗಿಸಿಕೊಳ್ಳುವುದು ದುಃಸಾಧ್ಯ. ಆದರೂ ತಮ್ಮದೇ ಆದ ಸ್ವತಂತ್ರ ರೀತಿಯಲ್ಲಿ ಅವರು ಅಭಿನಯದ ಮೂಲತತ್ವವನ್ನು ಅನುಭವ ಮತ್ತು ಸೂಕ್ಷ್ಮ ವಿವೇಚನೆಗಳ ಬಲದಿಂದ ಅಳವಡಿಸಿಕೊಂಡಿದ್ದು ಕಂಡು ಬಂದಿತು.

ಪೌರಾಣಿಕ ನಾಟಕವಾದರೇನು, ಸಾಮಾಜಿಕವಾದರೇನು–ನಟಿ (ಅಥವಾ ನಟ) ತನ್ನ ಮನಸ್ಸನ್ನು, ಭಾವವನ್ನು ಕೊಟ್ಟು ಪಾತ್ರದ ರೂಪರೇಷೆ ಗುಣಗಂಭೀರ್ಯಾದಿಗಳೊಡನೆ ಹೊಂದಿಸಿಕೊಳ್ಳಲು ಶಕ್ತನಾದರೆ ಸರಿ. ಅದು ಸಿದ್ಧಿಸದಿದ್ದಲ್ಲಿ ಎಲ್ಲ ನಟನೆಯೂ ಬರಿಯ ಆಡಂಬರವೇ ಸೈ ಎಂಬುದು ಪೃಥ್ವೀರಾಜರ ಅಭಿಪ್ರಾಯ.

ನಟಭೇದ

ರಸಶಾಸ್ತ್ರದಲ್ಲಿ ಎರಡು ಜಾತಿಯ ನಟರನ್ನು ಹೇಳಿದೆ. ಮೊದಲನೆಯವನು ಯಾಂತ್ರಿಕ, ಎರಡನೆಯವನು ರಸಿಕ. ಯಾಂತ್ರಿಕ ನಟನಿಗಿಂತ ರಸಿಕ ನಟನಿಗೆ ಪ್ರಾಶಸ್ತ್ಯ ಹೆಚ್ಚು. ಪೃಥ್ವೀರಾಜರು ಈ ಎರಡನೆಯ ವರ್ಗಕ್ಕೆ ಸೇರಿದವರು. ರಸಿಕ ನಟನು ಕೊಟ್ಟ ಪಾತ್ರಕ್ಕೆ ಸಂಬಂಧಿಸಿದ ಹಿಂದಿನ ಮತ್ತು ಇಂದಿನ ಇತಿಹಾಸ, ಕತೆ ಮುಂತಾದವುಗಳನ್ನು ಅವಲೋಕಿಸಿ, ಪರಿಶೀಲಿಸಿ ಅವನ್ನು ಮನನ ಮಾಡಿ, ನಿಧಿಧ್ಯಾಸದಲ್ಲಿ ಇಟ್ಟುಕೊಂಡು ಆದಷ್ಟು ಮಟ್ಟಿಗೆ ತಾದಾತ್ಮ್ಯಭಾವವನ್ನು ತಾಳಲು ಯತ್ನಿಸುತ್ತಾನೆ. ಇದರಿಂದ ಅವನ ಅಭಿನಯದಲ್ಲಿ ಸ್ವಾಭಾವಿಕತೆಯ ಸೊಬಗು ಹೆಚ್ಚುತ್ತದೆ. ತಮ್ಮ ದುಷ್ಯಂತ, ಸಿಕಂದರ ಮುಂತಾದ ಪಾತ್ರಗಳಲ್ಲಿ ತಾವು ಹಾಗೆ ಮಾಡಿರುವುದನ್ನು ಪೃಥ್ವೀರಾಜರು ನಿದರ್ಶಿಸಿದರು. ನಾಯಕನ ಸ್ವಭಾವ ಸೂಕ್ಷ್ಮತೆಗಳನ್ನು ಅರಿತ ನಟನು ತದನುಸಾರವಾಗಿ ಅವನ ಹಿಂದು ಮುಂದಿನ ರೀತಿನೀತಿ, ನಡೆನುಡಿಗಳಲ್ಲಿ ಸಾಮಂಜಸ್ಯ ಕೆಡದಂತೆ ನೋಡಿಕೊಳ್ಳಲು ಪ್ರಯತ್ನಿಸುವುದರಿಂದ ಒಮ್ಮೊಮ್ಮೆ ತಾವು ಮಾಡಿದಂತೆ ಮೂಲ ಕಥಾವಸ್ತುವಿನಲ್ಲಿ ಕೆಲ ಚಿಲ್ಲರೆ ಆದರೆ ಮಾರ್ಮಿಕ ಬದಲಾವಣೆಗಳು ಉಂಟಾಗುತ್ತವೆ ಎಂದು ಅವರು ತಮ್ಮ ಅನುಭವದಿಂದ ವಿವರಿಸಿದರು.

ಕಾಳಿದಾಸನಿಗೆ ಕೂಡ ಹೊಳೆಯದ ಒಂದು ಬದಲಾವಣೆಯನ್ನು ಪೃಥ್ವೀರಾಜರು ದುಷ್ಯಂತನಲ್ಲಿ ಮಾಡಿದ್ದಾರೆ. ಧೀರೋದಾತ್ತ ನಾಯಕನಾದ ದುಷ್ಯಂತನ ದಾಕ್ಷಿಣ್ಯಪ್ರಕೃತಿ ಶಾಕುಂತಲದ ಮೊದಲ ಭಾಗದಲ್ಲಿ ವರ್ಣಿತವಾಗಿದ್ದು ನಡುವೆ ಶಕುಂತಲೆಯ ಬಗ್ಗೆ ಅವನು ಕ್ರೂರನಾದ ಮಾತಾಡುವಂತೆ ಮಾಡಿದ್ದು ಅವನ ನಾಗರಿಕತೆಯಲ್ಲಿ, ಸಂಸ್ಕಾರ ಗಾಂಭೀರ್ಯದಲ್ಲಿ ವಿಷಮತೆಯನ್ನು ತರುವುದೆಂದು ಅವರು–ದುಷ್ಯಂತನು ತನ್ನ ಮಂತ್ರಿಯನ್ನು ಗಾದಿಯ ಮೇಲೆ ಕುಳ್ಳಿರಿಸಿ ಆರೋಪಿಯೆಂದೂ ನಿರ್ಣಯಕನಾಗಲಾರನಾದ್ದರಿಂದ ತನ್ನ ಮೇಲೆ ಶಕುಂತಲೆ ಹೊರಿಸಿದ ಆರೋಪದ ಸತ್ಯತೆಗಳನ್ನು ನಿರ್ಣಯಿಸಲು ಬೇಡಿಕೊಂಡು, ನಿರಪರಾಧಿತ್ವವನ್ನು ಅವನಿಂದ ಪಡೆದುದಲ್ಲದೆ ಶಕುಂತಲೆಯಲ್ಲಿ ಹುಟ್ಟುವ ಮಗ ಅವಳ ಹೇಳಿಕೆಯಂತೆ ಚಕ್ರವರ್ತಿಲಕ್ಷಣಸಂಪನ್ನನಾದರೆ ಅವಳನ್ನು ಸ್ವೀಕರಿಸುವೆನೆಂದೂ ಅಲ್ಲಿಯ ವರೆಗೆ ಅವಳನ್ನು ಮಂತ್ರಿಯೇ ಸಾಕಬೇಕೆಂದೂ ತನ್ನ ಔದಾರ್ಯ ಮತ್ತು ಕರುಣೆಗಳನ್ನು ವ್ಯಕ್ತಪಡಿಸುವಂತೆ ಅಭಿನಯಿಸಿದ್ದು ನಿಜವಾಗಿಯೂ ಪ್ರತಿಭಾನ್ವಿತವಾಗಿದೆ, ರಸಿಕ ನಟತ್ವದ ಹೆಗ್ಗುರುತಾಗಿದೆ. ದುಷ್ಯಂತನ ನಿಧಿಧ್ಯಾಸ ಮಾಡಿದಲ್ಲದೆ, ಕಾಳಿದಾಸನ ಮೇಲೆ ಅಪಾರ ಗುರುಭಕ್ತಿಯುಳ್ಳ ಯಾವ ನಟನೂ ಇಂಥ ಬದಲಾವಣೆಯನ್ನು ಮಾಡಲು ಧೈರ್ಯ ಪಡಲಾರನು.

ನಟನ ಮೇಲೆ ಪಾತ್ರಪ್ರಭುತ್ವ

ನಾಟ್ಯಾಚಾರ್ಯರ ತತ್ವಜ್ಞಾನದ ನ್ಯೂನತೆಯ ದೆಸೆಯಿಂದ ಅಲ್ಲಿಯ ನಟನಿಗೆ ಜಗತ್ತಿನ ವಿವಿಧ ನಾಯಕರ ಪಾತ್ರಗಳೆಲ್ಲವನ್ನೂ ಸ್ವಭಾವಾನುಸಾರವಾಗಿ ಅಭಿನಯಿಸಲು ಸಾಧ್ಯವಾಗದು. ಭಾರತೀಯ ನಟರಿಗಾದರೆ "ರಾಜಯೋಗ"ದ ತರಬೇತಿದ್ದರೆ, ಕಲ್ಪನೆ ಅರಗಿದ್ದರೆ ಅಂಥ ಸಾಹಸ ಶಕ್ಯ ಎಂಬುದು ಪೃಥ್ವೀರಾಜರ ಅನುಭವಾಧೃತ ತರ್ಕ. ನಮ್ಮ ಶರೀರವನ್ನು ಮತ್ತು ಮನಸ್ಸನ್ನು ವಿಶ್ವದಲ್ಲಿ ಅಡಗಿರುವ ವಿವಿಧ ಕಲೆಗಳಿಗೆ ಅನುಕೂಲವಾಗುವಂತೆ ಪಳಗಿಸಿದರೆ ಅವು ತಾವೇ ತಾವಾಗಿ ಈ ಸಾಹಸಗಳ ಮೂಲಕ ಪ್ರಕಟವಾಗುವುವು. ಸಿದ್ಧಹಸ್ತನಾದ ನಟನು ಪ್ರಸಿದ್ಧ ಪಾತ್ರಗಳ ಗುಣರೂಪಾದಿಗಳಲ್ಲಿ ತಾದಾತ್ಮ್ಯ ಹೊಂದುವದನ್ನು ಸಾಕಷ್ಟು ಸಾಧಿಸಿಕೊಂಡಾಗ—ಅಂದರೆ—ತನ್ನ ಶರೀರ ಮತ್ತು ಮನಸ್ಸುಗಳ ಮೇಲೆ ಕೆಲ ಕಾಲ ಕೆಲಮಟ್ಟಿಗೆ ಆ ಪಾತ್ರದ ಪ್ರಭುತ್ವ ನಡೆಯಲು ಅವಕಾಶ ಮಾಡಿಕೊಟ್ಟಾಗ ಹೊಸ ಹೊಸ ಸಮಯಸ್ಫೂರ್ತಿಗಳು ಜನಿಸಿ ಅಭೂತಪೂರ್ವ ರಸಾವಿಷ್ಕಾರಕ್ಕೆ ಕಾರಣವಾದ ಅಭಿನಯ ವೈಚಿತ್ರ್ಯಗಳು ಅವನಿಗೆ ಅಳವಡುತ್ತವೆ. "Some characters dictate- ಕೆಲ ಪಾತ್ರಗಳು ನಟನ ಮೇಲೆ ಅಧಿಕಾರ ನಡೆಸುತ್ತವೆ" ಎಂಬ ಪೃಥ್ವೀರಾಜರ ಮಾತಿಗೆ ಇದೇ ಅರ್ಥ. ಒಂದು ಪಾತ್ರದ ಸತ್ವಸಾಮರ್ಥ್ಯದ ಉದಾತ್ತತೆಯು ಕೂಡ ನಟನ ಹೃದಯವನ್ನು ಸೂರೆಗೊಂಡಾಗ ಇಂಥ ಸಂದರ್ಭ ಒದಗುವುದು ಸಹಜವಿದೆ. ಅವನಲ್ಲಿ ಆ ಪಾತ್ರ ಪರಕಾಯಪ್ರವೇಶತಂತ್ರದಿಂದ ಪ್ರವೇಶಿಸಿದಂತಾಗುತ್ತದೆ. ಆಗ ಅವನೇ ಇವನು, ಇವನೇ ಅವನು ಎಂಬ ಕಲಾಮಾಯೆ ಪ್ರೇಕ್ಷಕರ ಮನವನ್ನು ಅಪಹರಿಸುತ್ತದೆ, ಭ್ರಮಿಷ್ಟವನ್ನಾಗಿ ಮಾಡುತ್ತದೆ, ಮುಗ್ಧಗೊಳಿಸುತ್ತದೆ, ರಸಸ್ಪರ್ಶಿಯನ್ನಾಗಿ ಮಾಡುತ್ತದೆ.

ಸಿಕಂದರನ ಪಾತ್ರದಲ್ಲಿ ಅವನು ತೊಡೆಯನ್ನು ಪದೇ ಪದೇ ತಟ್ಟಿಕೊಳ್ಳುವುದನ್ನು ತೋರಿಸಿದ್ದು ಪೃಥ್ವೀರಾಜರಿಗೆ ಅವನ ಸ್ವಭಾವದ ಬಗ್ಗೆ ಉಂಟಾದ ಆಳವಾದ ಅನುಭವದಿಂದ. ಸಿಕಂದರನ Restlessness- ಸುಮ್ಮನೆ ಕುಳ್ಳಿರಲಾರದ ಅಪ್ರತಿಹತ ಕಾರ್ಯಶಕ್ತಿಯು, ಚಟುವಟಿಕೆಯು, ಹುರುಪಿನ ಶಾರೀರಿಕ ಅಭಿವ್ಯಕ್ತಿಯನ್ನು ಆ ಅಭಿನಯದಿಂದ ತಾವು ವ್ಯಕ್ತ

—೧೫ನೆಯ ಪುಟಕ್ಕೆ

ಲಕ್ಷ್ಮೀ ಸರಸತಿಯರ ವಾದ

[ವಿರೂಪಾಕ್ಷ ದೇವಾಲಯದ ಹಿಂಬದಿಯಲ್ಲಿ ತುಂಗಭದ್ರೆಯು ಸಾಗುತ್ತ ಮುಂದೋಡುತ್ತಿದ್ದಾಳೆ. ನಡುವೆ ವಿಶಾಲವಾದ ಕಪ್ಪು ಕಲ್ಲುಬಂಡೆ. ಶುಭ್ರವಾದ ಬೆಳದಿಂಗಳು ಎಲ್ಲೆಡೆಯಲ್ಲಿಯೂ ಹರಹಿಕೊಂಡಿದೆ. ಪ್ರಶಾಂತತೆಯು ಭಯಾನಕವಾಗಿದೆ. ಅಸ್ಪಷ್ಟ ಶಬ್ದಗಳು ಕೇಳಬರುತ್ತಿವೆ. ಯಾರದೋ ನೆರಳು ಬಿದ್ದಿತು, ಅಷ್ಟುಪಕ್ಷದಲ್ಲಿಯೇ ವಿಹಾರಕ್ಕಾಗಿ ಬಂದ ಲಕ್ಷ್ಮಿ ಸರಸ್ವತಿಯರು ಕಾಣಬರುತ್ತಾರೆ ಆ ಕಲ್ಲು ಬಂಡೆಯ ಮೇಲೆ.]

ಸರಸ್ವತಿ: (ನಿಧಾನವಾಗಿ)
ಎಂಥ ಸೊಬಗಿನ ಬೀಡು, ಕೆಳದಿ ಲಕುಮಿಯೆ, ನೋಡು,
ಬನಸಿರಿಯು, ನನ್ ಸಿರಿಯು, ಚೆಲುವ ಚಂದ್ರನ ನಾಡು!

ಲಕ್ಷ್ಮಿ: (ನಕ್ಕು)
ಸಿರಿಯುತನದಲಿ ನಾವು ಸರಿಯಲ್ಲ ನಿಮಗೆ!
ಸರಸ ಸರಸಿಯೆ ಸಾರಿ ಹೇಳಿಲ್ಲವೇ?

ಸರಸ್ವತಿ: ಓದು ಬರಹದ ಜಾಣೆ, ನುಡಿಸೆಬಾರಲೆ ವೀಣೆ,
ಎದೆಯ ಸೀಳಿದರೆ ಮೂರಕ್ಷರವ ಕಾಣೆ.
ವಿದ್ಯೆಯಿಲ್ಲದೆ ಹೋಯ್ತು! ಹದ್ದಿನಂತಹ ಬಾಳು,
ಏನು ಮಾಡಲಿ ಲಚ್ಚಿ ? ಬೇಗ ನೀನ್ ಹೇಳು.

ಲಕ್ಷ್ಮಿ: (ವ್ಯಂಗವಾಗಿ)
ಸಾಕು ಸುಡು ನನ್ ವಿದ್ಯೆ, ನೋಡು ನಿನ್ನಯ ಸಿರಿಯು
ಬಳಲುತಿರುವೆನು ಬೆಂದು ಬಡತನದಿ ಬರಿಯ!
ನನಗೆ ಜೋಳವೆ ಮುತ್ತು, ಗೋದಿ ಹವಳದ ಸೊತ್ತು!
ಜಗಕೆ ಭಾರವು ಬದುಕು, ಸಿರಿ ಸಿಗದೆ ಹೋಯ್ತು.

ಸರಸತಿ: ಸೂರೆಯಾಗಿಹುದೆನ್ನ ಸಂಪತ್ತು ಭೂರಿ
ನೀಲಾಗಸದಿ ಅದಂತೆ ಚಿಕ್ಕೆಗಳು ಸೂರಿ;
ಚಂದ್ರನಿಲ್ಲದ ಚಿಕ್ಕೆ, ವಿದ್ಯೆಯಿಲ್ಲದ ನಾನು
ಸರಿ, ರಮ್ಯಹೂವೇಕೆ ಇಲ್ಲದಿರೆ ಜೇನು?

ಲಕ್ಷ್ಮಿ: ತುಂಗಭದ್ರೆಯ ಚೆಲುವು, ತಿಂಗಳಿನ ಮಿಗೆ ಸೊಗವು
ಕಂಗಳಲಿ ಕಂಜೇರ ಕೋಡಿ ಹರಿಸಿರುವವು?

ಸರಸತಿ: (ದೈನ್ಯಪೂರ್ವಕ)
ನಿನ್ನೊರತು ಇನ್ನಾರು ಕಂಜೇರ ವರಿಸೆ?
ವಿರಸ ಕಳೆಯಲು ವೀಣ ಸರಸ ನುಡಿಸೆ?

ಲಕ್ಷ್ಮಿ: ವೀಣೆ, ಕುಂಬಳಕಾಯಿ ಕೋಲಿನಾಟವು ಏಕೆ?
ಅದು ನಾಟಿಯೇ ಹೇಳು ನಿನ್ನ ಸಿರಿತನಕೆ?

ಸರಸತಿ: ವೀಣೆಯಿಂಚರಗಾನ ಕೊಡಬಹುದೆ, ಮುತ್ತು
ಹವಳ ರಾಶಿಯು, ಹೇಳು, ನನಗೆ ಈ ಹೊತ್ತು?

ಲಕ್ಷ್ಮಿ: (ಕೂಡಲೇ)
ತೊತ್ತುಗಳು ಸತ್ತರೆ ಬೇದವೇತಕೆ ಸರಸಿ,
ಸಿರಿಯುತನ ನೀಡುವುದು, ಹೇಳುವೆನು ಹರಸಿ.

ಸರಸತಿ: (ಸಿಟ್ಟುಸಿಡಿಸಿ)
ಸಾಕು ಸುಡು ನನ್ನ ಸಿರಿ, ಕವಡೆ ತಿಮ್ಮತ್ತು
ಹಡೆದಳೇತಕೊ ತಾಯಿ ಬಸಿರಿನಲಿ ಹೊತ್ತು!

ಲಕ್ಷ್ಮಿ: (ವಾತ್ಸಲ್ಯದಿಂದ)
ಸರಸಿ ಹುಚ್ಚಿಯೆ ಕೇಳು, ನೀನೆಂಥ ಮರುಳು,
ನೆನೆದುಕೊಳ್ಳದೆ ಅಳುವಿ ನಿನ್ನ ಸಿರಿಬಾಳು.

ಸರಸತಿ: ವಿದ್ಯೆಯಿಲ್ಲದ ಬದುಕು, ಏನು ಹೇಳಲಿ ಗೋಳು
ತೊತ್ತಿನಿಂ ಕುಂದು ಗಾನಕಲೆಯಿರದ ಬಾಳು.

ಲಕ್ಷ್ಮಿ: ಆಗಿನಿಂದಲು ಹರಟುತಿರುತಿರುವೆ ಸರಸಿ,
ಹಾಳಾದ ವಿದ್ಯೆಗೆ ಕಂಜೇರು ಸುರಿಸಿ.
ಓದಿಕೆಟ್ಟವ ಕೂಸುಭಟ್ಟನಾ ಕತೆಯಾ
ಕೇಳಿಲ್ಲವೆ? ಅವನು ಹಾಳಾದ ಪರಿಯಾ?

ಸರಸತಿ: ವಿದ್ಯೆಯಿಲ್ಲದ ಸಿರಿಯು ಬಾಳು, ಅದು ರುಂಡ
ಇಲ್ಲದಿಹ ದೇಹ, ಬಾಳುವದು ದಂಡ.

ಲಕ್ಷ್ಮಿ: ಸಿರಿಯು ಇಲ್ಲದ ಬಾಳು, ನಾಯಿಗಿಂತಲು ಕೀಳು
ಬಡತನದ ಬೇಗುದಿಗೆ ಸಾಯುವದೆ ಮೇಲು.

ಸರಸತಿ: ಸಿಡಿದು ಹೋಗಲಿ ಸಿರಿಯು, ಜಗದ ಜಗಳಕೆ ಬೇರು,
ಹಸಿದವಗೆ ಕೊಡಬಹುದೆ, ಅಶನವನು ನೀರು?

ಲಕ್ಷ್ಮಿ: (ಕಕ್ಕುಲತೆಯಿಂದ)
ಹುಚ್ಚುಗಂಡನ ಮಡದಿ, ತಲೆಕೆಟ್ಟು ಹೋಗಿಹುದು.
ಹುಚ್ಚುಕಂತರಬೆದಿರು, ನಿನ್ನ ಸಿರಿ ನೆನೆದು.
ಕುಳಿತಿಹನು ಗಂಡನು ಸಮಾಧಿಗುಂಗಿನಲಿ
ಹುಟ್ಟಿಸುತ ನಿನ್ನಂಥ ನೂರಾರು ಮುದ್ದತಲಿ.

ಸರಸತಿ: ಜಾಣ ಗಂಡನ ಅರಸಿ, ಮಾತಿನಲಿ ಬಲು ಚಿಕಣಿ
ಕಂಡ ವನಿತೆಯ ಮೋಹಗೊಂಡ ಕೃಷ್ಣನ ರಮಣಿ:
ತಾನೊಬ್ಬನೇ ಹುಚ್ಚ ನನ್ನ ನಚ್ಚಿನ ನಲ್ಲ,
ನಿನ್ನಿನಿಯ ಎಲ್ಲರನು ಹುಚ್ಚು ಹಿಡಿಸುವನಲ್ಲ!

ಲಕ್ಷ್ಮಿ: ಬಾಯಿ ಬಿಗಿಹಿಡಿ ಸರಸಿ, ಮಾತಿನಲಿ ಬಲು ಸರಸಿ,
ಬುದ್ಧಿಯಿಲ್ಲದ ಬ್ರಹ್ಮದೇವನಿಗೆ ಸರಿ ಅರಸಿ.
ಮೂಲೋಕ ಮೋಹಕನು ಮಾರಪಿತ ಮುರಲೀ—
ಧರನ ಮೋಹಿಸಿ ಮುಗ್ಧೆ ಬಂದಳೋಡುತಲಿ.

ಸರಸತಿ: ದನಗಾಹಿ ಗೊಲ್ಲನನು, ಕುದುರೆ ಚಾಕರಿಯವನ
ಒಪ್ಪವೇದೆಷ್ಟು ಆ ಅರ್ಜುನನ ಸೇವಕನ?
ಕಾಗೆಯೆಂದಿತು, ಬಣ್ಣ ನನ್ನದೇ ಬಲು ಚೆನ್ನ
ನೋಡಿ ಕೃಷ್ಣನ ವರ್ಣ ಘನಶ್ಯಾಮನ.

ಲಕ್ಷ್ಮಿ: (ರೋಷದಿಂದ)
ಸರಸಿ, ನೆನಪಿದೆಯೇನು? ದಿವಿಜರೊಡೆಯನು ಕೃಷ್ಣ
ನೀನು ಅಲ್ಲದೆ ನಿನ್ನ ಗಂಡ, ಪ್ರಜೆ ಅವನ!
ನಿನ್ನೊಡತಿ ನಾನಿರಲು. . . . .

ಸರಸತಿ: (ತಟ್ಟನೆ)
ಹಾಳು ಬೇವಿನಕಾಯಿ ಹಸಿರು ಹಾಗಲ ಕಾಯ್ಗೆ
ಪ್ರಿಯ ಮಡದಿ. ಹೆತ್ತವರು ಯಾರೆ ನಿನ ಬಾಯ್ಗೆ?
ಸೃಷ್ಟಿಕರ್ತನು ಬ್ರಹ್ಮ, ಹುಟ್ಟಿಬಾರದ ಮಗಳು
ನೀನಿರುವೆ ಬಾಯ್ಮುಚ್ಚು. . . . .

ಲಕ್ಷ್ಮಿ: ಸರಸಿ. . . . .

ಸರಸತಿ: ಲಚ್ಚಿ. . . . .

ಲಕ್ಷ್ಮಿ: ಒಂಟಿಹೆಸರಿಂ ಕರೆವ ತುಂಟ ಸರಸಿಯೆ, ನೀನು
. . . .

ಸರಸತಿ: ಕಳ್ಳ ಗಂಡನ ಮಡದಿ, ಚಂಚಲತೆಯೇ ಕೆಳದಿ
ಮಳ್ಳ ಮಾಡುತ ಜನರ ಕುಣಿಸುತಿರುತಿರುವಿ.

ಲಕ್ಷ್ಮಿ: (ಕಠೋರವಾಗಿ)
ಹುಚ್ಚು ಗಂಡನ ಅರಸಿ,
ಮುಚ್ಚುಬಾಯ್. . . .

ಸರಸತಿ: ದಿವಿಜರೊಡೆಯನ ಪತ್ನಿ, ಮುತ್ತುಗಳನುದುರಿಸುವೆ,
ಭಾಂಡಾರದೊಳಗಿನಾ ಮುತ್ತು! . . . .

ಲಕ್ಷ್ಮಿ: (ಒಮ್ಮೆಲೆ ಎದ್ದುನಿಂತು)
ಅಪಮಾನ! ಸರಸಿ, ಇವರ ನೋಡೂ. . . .

ಸರಸತಿ: (ಕುಳಿತುಕೊಂಡೇ)
ನೋಡಿಕೋ ಮೊದಲು ನಿನ್ನ ಪಾಡೂ. . . ,

ಲಕ್ಷ್ಮಿ: ಏ ಸರಸಿ, ನೀ ಕುಳಿತನಾಡು ಕಾಡಾಗಲಿ!

ಸರಸತಿ: ನೀ ನಿಂತ ನಾಡು ಹೋಳಾಗಲಿ.

ಲಕ್ಷ್ಮಿ: (ಅವಡುಗಚ್ಚಿ)
ಈ ನಾಡಿನಲಿ. . . .

ಸರಸತಿ: ಜಾಣತನವಳಿದು ಸ್ವಾರ್ಥವೇ ಬೆಳೆಯಲಿ.

ಲಕ್ಷ್ಮಿ: ಸರಸೀ (ಹಲ್ಲು ಕಡಿಯುತ್ತ
ವಿದ್ಯಕ್ಕೆ ಸಿಗದೆ ಹೋಗಲಿ ಮಹತಿ!

ಸರಸತಿ: ಲಚ್ಮೀ (ಜೋರಿನಿಂದ)
ಸಿರಿ ಹರಿದು ಬಡತನವೆ ಕಾಲೂರಲಿ.

ಲಕ್ಷ್ಮಿ: ಈ ನಾಡಿನಲಿ ಆಗಲಿ . . .
ಕಷ್ಟದ ಕೂಳು, ನರಕದ ನೆರಳು
ಅಲ್ಪ ಸಂಖ್ಯಾತರಾ ಬಾಳು.

ಸರಸತಿ: ಕಡಿದು ಹೋಗಲಿ ಕರುಳು, ಮರೆತು ಹೋಗಲಿ ಮಮತೆ,

ಲಕ್ಷ್ಮಿ: ಸುಟ್ಟು ಹೋಗಲಿ ಸಮತೆ.

ಸರಸತಿ: ಸಿಗದೆ ಹೋಗಲಿ ಬೆಲೆಯು ನಿಜ ಕಲೆಗೆ ಬಿಡದೆ.

ಲಕ್ಷ್ಮಿ: ಜಾತೀಯತೆಗೆ ಈಡಾಗಿ ಈ ನಾಡು ಬೆಂಡಾಗಿ

ಸರಸತಿ: . . . (ನಿಧಾನವಾಗಿ)
ಹೋ. . ಗ. . ಲಿ.

[ಮುಗಿಲ ತುಂಬೆಲ್ಲ ಮೋಡ ಮುಸುಕಿತು. ಕತ್ತಲೆ ದಟ್ಟ ದಟ್ಟವಾಗಿ ಹಬ್ಬತೊಡಗಿತು. ಸಿಳ್ಳು ಹಾಕುತ್ತ ಗಾಳಿ ಭರಭರನೆ ಬೀಸತೊಡಗಿತು. ಎಲ್ಲೆಲ್ಲಿಯೂ ನಿಶ್ಶಬ್ದ, ಭೀಷಣತೆಯ ರೌದ್ರ ನಾಟಕ.

ಆ ಕಗ್ಗತ್ತಲಿನಲ್ಲಿ, ದೂರದಲ್ಲಿ, ಅವ್ಯಕ್ತ ಮೂರ್ತಿಯ ಕಪ್ಪು ನೆರಳೊಂದು–ಅಸ್ತವ್ಯಸ್ತ ಮುದಿಗೆದರಿಕೊಂಡು–ಓಡುತ್ತ ಭಯಾನಕವಾಗಿ ಚೀತ್ಕರಿಸುತ್ತಿತ್ತು. ಎಂಥ ಚೀತ್ಕಾರ! ಎದೆ ಬಿರಿವ ಚೀತ್ಕಾರ! ಕರುಳು ಕೊರೆವ ಚೀತ್ಕಾರ! ನಡುಗು ಹುಟ್ಟಿದರೂ ಅಂತಃಕರಣವನ್ನು ಸೂರೆಗೊಂಡು ಅಲ್ಲೋಲಕಲ್ಲೋಲ ಮಾಡುವ ಚೀತ್ಕಾರ!

ಆ ಕಾರಿರುಳಿನಲ್ಲಿ ಕಾರ್ಗತ್ತಲೆಯ ರೌದ್ರ ತಾಂಡವ ನೃತ್ಯ ನಡೆದಿರುವಾಗ, ಪದಿ ಪದಿಯಾಗಿ ಹಬ್ಬಿದ ಕಾಳಮೇಘಮಾಲೆಯ ಒಡಲನ್ನೊಡೆದು ಕೋಲ್ಮಿಂಚೊಂದು ಸೆಳೆದಾಗ, ಕಲ್ಲುಬಂಡೆಯ ಮೇಲಾರೂ ಕಾಣಬರಲಿಲ್ಲ

— ದೇಸಾಯಿ ವೆಂ. ಹ.

ಸಮಸ್ತ ಭಾರತ

ಮುಂಬಯಿ

ಮುಂಬಯಿ ಪ್ರಾಂತದಲ್ಲಿ ವಿಲೀನ ಹೊಂದಿದ ಪ್ರಾಂತಗಳ ಪ್ರತಿನಿಧಿಗಳನ್ನು ಆರಿಸಲು ಚುನಾವಣೆ ನಡೆಸಬೇಕೆಂದು ಕೇಳಿಕೊಳ್ಳುವದಕ್ಕಾಗಿ ಜುಲೈ ೨೪ ನ್ನು ಪ್ರದರ್ಶನ ದಿನವೆಂದು ಆಚರಿಸಬೇಕೆಂದು ಸಮಾಜವಾದೀ ಪಕ್ಷದವರು ನಿರ್ಧರಿಸಿರುವರು. ಈ ಬೇಡಿಕೆಯು ಪ್ರಜಾತಂತ್ರ ತತ್ವವನ್ನನುಸರಿಸಿದ್ದು ನಾಗರಿಕರೆಲ್ಲರೂ ಇದಕ್ಕೆ ಬೆಂಬಲ ಕೊಡಬೇಕೆಂದು ಮುಂತಾಗಿ ಅಶೋಕ ಮೇಥಾ ಇವರು ಬಿನ್ನವಿಸಿಕೊಂಡಿದ್ದಾರೆ.

ಮುಂಬಯಿ ಪೋರ್ಟ ಟ್ರಸ್ಟಿನ ೪೫೦ ಕ್ರೇನ ಕೆಲಸಗಾರರು ತಮ್ಮ ನಿದಾನ ಕೆಲಸ ಮಾಡುವ ಕ್ರಮವನ್ನು ಬಿಡಬೇಕೆಂದೂ ರವಿವಾರ ಮತ್ತು ಇತರ ಸೂಟಿಯ ದಿನಗಳಲ್ಲಿ ಸಹ ಕೆಲಸ ಮಾಡಬೇಕೆಂದೂ ನಿರ್ಧರಿಸಿದ್ದಾರೆ. ಇದರಿಂದ ಮುಂಬಯಿ ಧಕ್ಕೆಯಲ್ಲಿಯ ಸಧ್ಯದ ದಟ್ಟಣೆ ಕಡಮೆಯಾಗಬಹುದೆಂದು ನಿರೀಕ್ಷಿಸಲಾಗಿದೆ. ಈ ಸಂಬಂಧದಲ್ಲಿ ಸರಕಾರ ಮತ್ತು ಧಕ್ಕೆ ಕೆಲಸಗಾರರಲ್ಲಿ ಒಡಂಬಡಿಕೆಯಾಗಿದೆ.

೪೪ ಬ್ರಾಡ್‌ಗೇಜ ರೇಲ್ವೆ ಎಂಜಿನುಗಳುಳ್ಳ ಎರಡನೇ ತಂಡವು ಫಿಲಾಡೆಲ್ಫಿಯಾದಿಂದ ೨೦ಕ್ಕೆ ಮುಂಬಯಿಗೆ ಬಂತು. ೩೬ ಎಂಜಿನುಗಳುಳ್ಳ ಮೊದಲನೆ ತಂಡ ಕಳೆದ ತಿಂಗಳು ಬಂದಿದೆ. ಫಿಲಾಡೆಲ್ಫಿಯಾದಿಂದ ಇನ್ನೂ ೩೧ ಎಂಜಿನುಗಳು ಬರಲಿವೆ. ಮುಂಬಯಿಯಲ್ಲಿ ಇವನ್ನೆಲ್ಲ ಜೋಡಿಸಿ ದೇಶದಲ್ಲಿ ಬೇರೆ ಬೇರೆ ಕಡೆಗೆ ಕಳಿಸಲಾಗುವದು.

ಹಿಂದೀ ರಸಾಯನಿಕ ಉತ್ಪಾದಕರ ಸಂಘದ ಅಧ್ಯಕ್ಷರಾದ ಶ್ರೀ ಲಾಲಕಾಕಾರು ಅಸವಗಳ ಉದ್ದಿಮೆಯ ಪ್ರಾಂತೀಯ ಸರಕಾರಗಳ ಕರಭಾರ ಘೋರಣೆ ಮತ್ತು ಉದ್ದಿಮೆಯ ಮೇಲೆ ಹೇರಿದ ಮಾರಾಟ ಸಾರಿಗೆ ನಿರ್ಬಂಧಗಳಿಂದ ಅತ್ಯಂತ ಕಠಿನ ಪರಿಸ್ಥಿತಿಯಲ್ಲಿ ಇದೆಯೆಂದು ಅಭಿಪ್ರಾಯಪಟ್ಟರು.

ಡಾಂಗ ಪ್ರದೇಶವನ್ನು ಗುಜರಾಥದಿಂದ ಬೇರ್ಪಡಿಸಿದ ದಿನವೆ ನಾನು ನನ್ನ ತಂಬೂರಿಯನ್ನು ಬಿಸುಡುತ್ತೇನೆ. ಸ್ವಾತಂತ್ರ್ಯ ಸಮರದಲ್ಲಿ ಮುಂದಿದ್ದದ್ದ ಗುಜರಾಥವು ಡಾಂಗದ ವಿಷಯದಲ್ಲಿ ಅನ್ಯಾಯ ಮಾಡಿರುವ ಕಾಂಗ್ರೆಸ ಸರಕಾರಕ್ಕೆ ಅಧಿಕಾರಬಿಟ್ಟು ಹೊರಬೀಳಲು ಹೇಳಬೇಕು. ಈ ದಾಳಿಯನ್ನು ಈಗಲೆ ತಡೆಯದಿದ್ದರೆ ಬಡೋದೆ ಅಹಮದಾಬಾದಗಳೂ ಕೈಬಿಡುವವೆಂದು ಮುಂತಾಗಿ ಪ್ರಸಿದ್ಧ ಸಂಗೀತಜ್ಞರಾದ ಪಂ. ಓಂಕಾರನಾಥರು ಗರ್ಜಿಸಿದರು.

ಹಿಂದೀ ವ್ಯಾಪಾರಸ್ಥರು ಅಮೇರಿಕೆಯಲ್ಲಿ ಇಟ್ಟಿರುವ ತಮ್ಮ ಖಾಸಗಿ ಆಸ್ತಿಯ ಲೆಕ್ಕವನ್ನು ಕಡಮೆ ತಿಳಿಸಿರುವರೆಂದು ತಿಳಿಯುತ್ತದೆ. ಹಿಂದುಸ್ತಾನ ಅಖಂಡವಾಗಿದ್ದಾಗ ಅಮೇರಿಕೆಯಲ್ಲಿ ಇದ್ದ ೪೧೦ ಲಕ್ಷ ಡಾಲರುಗಳಲ್ಲಿ ೨೩೦ ಲಕ್ಷ ಡಾಲರುಗಳು ಇಂಥ ವ್ಯಾಪಾರಸ್ಥರ ಖಾಸಗಿ ಖಾತೆಗಳಲ್ಲಿ ಇದ್ದವು. ೧೯೪೯ ಜಾನೆವರಿ ಕೊನೆಯಲ್ಲಿ ಅಮೇರಿಕೆಯಲ್ಲಿ ೪೨೩ ಲಕ್ಷ ಡಾಲರುಗಳಿದ್ದವು.

ಮದ್ರಾಸ

ವಿಜ್ಞಾನ, ಸ್ಥಾಪತ್ಯ ಮತ್ತು ತಾಂತ್ರಿಕ ಶಿಕ್ಷಣಗಳನ್ನು ಸಂಯುಕ್ತವಾಗಿ ಕೊಡದಿರುವದರಿಂದಲೆ ನಮ್ಮ ಔದ್ಯೋಗೀಕರಣವು ಭರದಿಂದ ಸಾಗಿಲ್ಲ ಎಂದು ಮದರಾಸಿನ ಮುಖ್ಯ ಮಂತ್ರಿಗಳಾದ ಕುಮಾರಸ್ವಾಮಿ ರಾಜಾ ಇವರು ಮದ್ರಾಸ ವೃತ್ತಿ ಶಿಕ್ಷಣದ ಉದ್ಘಾಟನೆಯನ್ನು ಮಾಡುತ್ತ ಮದರಾಸಿನಲ್ಲಿ ಹೇಳಿದರು. ಸಧ್ಯದ ಶಿಕ್ಷಣ ಪದ್ಧತಿಯಲ್ಲಿ ಮಹತ್ವದ ಬದಲಾವಣೆಯಾಗಬೇಕೆಂದೂ ಅವರು ಹೇಳಿದರು.

ಮದರಾಸ ಪ್ರಾಂತದ ೧೨ ಜಿಲ್ಹೆಗಳಲ್ಲಿ ಇದೇ ಅಕ್ಟೋಬರ ತಿಂಗಳಿಂದ ಕಾರ್ಯಾಂಗದಿಂದ ನ್ಯಾಯಾಂಗವನ್ನು ಪ್ರತ್ಯೇಕಿಸುವ ಯೋಜನೆಯು ಜಾರಿಯಲ್ಲಿ ಬರುವದೆಂದು ಅಧಿಕೃತವಾಗಿ ಹೇಳಲಾಗುತ್ತದೆ. ಕೊನೆಯದಾಗಿ ಇದರ ವ್ಯವಸ್ಥೆ ಮಾಡಲು ಮಂತ್ರಿಮಂಡಳದ ಉಪಸಮಿತಿಯ ಕೊನೆಯ ಸಭೆ ಅಗಸ್ಟ ೭ ಕ್ಕೆ ಕೂಡುವದು.

ತಮ್ಮ ಬಿಡುಗಡೆಗಾಗಿ ವಿಶೇಷ ಪ್ರಯತ್ನ ಮಾಡಿ ಪಂ. ವೆಂಕಟರಾಮ ಶಾಸ್ತ್ರಿಗಳನ್ನು ಕಾಣಲು ಕಳೆದ ವಾರ ಬಿಡುಗಡೆ ಹೊಂದಿದ ಆರ್. ಎಸ್. ಎಸ್. ಧುರೀಣ ಗೊಳವಲಕರರು ಮದ್ರಾಸಕ್ಕೆ ಬರಲಿರುವರು.

ಹೊಸದಿಲ್ಲಿ

ಟಿ. ಟಿ. ಕೃಷ್ಣಮಾಚಾರಿಯವರ ಅಧ್ಯಕ್ಷತೆಯಲ್ಲಿ ಸೇರಿದ್ದ ಸಭೆಯಲ್ಲಿ ಭಾಷಣಮಾಡುತ್ತ ಪ್ರೊ. ಧನಂಜಯರಾವ ಗಾಡಗೀಳರು ಹಿಂದುಸ್ತಾನವಿಂದು ಆರ್ಥಿಕ ದುಃಸ್ಥಿತಿಗೀಡಾಗಿದೆಯೆಂದು ತಿಳಿಸಿದರು. ನೇಕಾರವರ್ಗ, ಕೂಲಿಕಾರವರ್ಗ, ಮಧ್ಯಮ ವರ್ಗದಲ್ಲಿಯ ಅನೇಕರು ಜೀವನ ವೆಚ್ಚದ ಭಾರವನ್ನು ತಾಳಲಾರದೆ ಅತೀವ ಸಂಕಟಕ್ಕೊಳಗಾಗಿದ್ದಾರೆ. ಸರಕಾರದವರೇ ನಿತ್ಯೋಪಯೋಗಿ ವಸ್ತುಗಳ ಧಾರಣೆಗಳನ್ನು ಇಳಿಸಿ ಪರಿಸ್ಥಿತಿಯನ್ನು ಸುಧಾರಿಸಬಲ್ಲರೆಂದು ಮುಂತಾಗಿ ಹೇಳಿದರು.

ಹಿಂದುಸ್ತಾನಕ್ಕೆ ಜಾಗತಿಕ ಬ್ಯಾಂಕು ಸಾಲ ಕೊಡುವ ಸಂಬಂಧದಲ್ಲಿ ದೀರ್ಘ ವಿಚಾರ ನಡೆದಿದೆ. ಆಗಷ್ಟ ಮಧ್ಯದ ವರೆಗೆ ಈ ಸಂಬಂಧದಲ್ಲಿ ಯಾವದೇ ನಿರ್ಣಯವಾಗಲಿಕ್ಕಿಲ್ಲೆಂದು ತಿಳಿಯುತ್ತದೆ.

ನಾರಾಯಣ ಆಪಟೆ, ವಿಷ್ಣು ಕರಕರೆ, ಗೋಪಾಲ ಗೋಡಸೆ ಮತ್ತು ಮದನಲಾಲ ಇವರನ್ನು ಬಿಟ್ಟು ಉಳಿದ ಆರೋಪಿಗಳು ಪಂಜಾಬ ಹಾಯಕೋರ್ಟಿನ ತೀರ್ಪಿನ ವಿರುದ್ಧ ಪ್ರೀವಿಕೌನ್ಸಿಲ್ಲಿಗೆ ಅಪೀಲು ಮಾಡಲು ನಿರ್ಧರಿಸಿದ್ದು ಅವರ ವಕೀಲರು ತೀರ್ಪಿನ ಪ್ರತಿ ಮುಂತಾದ ಅವಶ್ಯಕ ಕಾಗದ ಪತ್ರಗಳನ್ನು ತೆಗೆದುಕೊಂಡಿದ್ದಾರೆ.

ಬ್ರಿಟಿಶ ಆಡಳಿತೆಯಲ್ಲಿ ಬಂಡುಗಾರರೆಂದು ಪ್ರಸಿದ್ಧಿ ಹೊಂದಿ ತುರಂಗದಲ್ಲಿದ್ದ ಅಸಾಮದ ನಾಗರಾಣಿ ಗಾಯಿಡಲೊ ಇವರನ್ನು ಬಿಡುಗಡೆ ಮಾಡಲಾಗಿದೆ. ಮುಖ್ಯ ಮಂತ್ರಿ ಪಂಡಿತ ಜವಾಹರಲಾಲರು ಇವರ ಬಿಡುಗಡೆಯ ಬಗ್ಗೆ ಒಳ್ಳೆ ಆಸ್ಥೆ ತೋರಿಸಿದ್ದರು. ೧೬ ವರುಷಗಳಿಂದ ಇವರು ತುರಂಗದಲ್ಲಿ ಇದ್ದರು.

ಹಿಂದುಸ್ತಾನದಲ್ಲಿ ಪಾಕಿಸ್ತಾನದ ಗುಪ್ತಚಾರರು ಹೆಚ್ಚಿರುವರೆಂದು ಇದೀಗ ಪ್ರಕಟವಾದ ಕೆಲ ಸುದ್ದಿಗಳಿಂದ ತಿಳಿಯುತ್ತದೆ. ಪ್ರಮುಖ ಉದ್ಯೋಗಗಳಲ್ಲಿ ಪಾಕಿಸ್ತಾನಿಗಳನ್ನು ನೇಮಿಸಿಕೊಳ್ಳಬಾರದೆಂದು ಕೇಂದ್ರ ಸರಕಾರವು ಪ್ರಾಂತೀಯ ಸರಕಾರಗಳಿಗೆ ತಿಳಿಸಿದ ಗುಪ್ತ ಪತ್ರವೊಂದು ಇದ್ದಕ್ಕಿದ್ದಹಾಗೆಯೆ ಪಾಕಿಸ್ತಾನೀ ಪತ್ರಿಕೆಯಲ್ಲಿ ಪ್ರಸಿದ್ಧವಾಗಿದೆ. ಅದೇ ರೀತಿ ಪಾಕಿಸ್ತಾನಕ್ಕೆ ಕಳಿಸಿದ್ದ ಹಿಂದುಸ್ತಾನದ ಮದ್ದಿನ ಕಾರಖಾನೆಯ ಯೋಜನೆಯೊಂದನ್ನು ಅಂಚೆ ಕಚೇರಿಯಲ್ಲಿ ತಡೆಹಿಡಿಯಲಾಗಿತ್ತು.

ನೇತಾಜಿ ಸುಭಾಸಚಂದ್ರ ಬೋಸರು ಕಮ್ಯುನಿಸ್ಟ ಚೀನದಲ್ಲಿದ್ದು ಅವರ ಪ್ರವೇಶದ ಮೇಲಿನ ನಿರ್ಬಂಧವು ಹೋದ ಕೂಡಲೆ ಭಾರತಕ್ಕೆ ಹಿಂತಿರುಗುವರೆಂದೂ ಈ ನಿರ್ಬಂಧಗಳನ್ನು ರದ್ದುಗೊಳಿಸಲು ಪುರೋಗಾಮಿಪಾಪಿಯವರು ಚಳವಳಿ ನಡೆಸಬೇಕೆಂದೂ ಪುರೋಗಾಮಿ ಪಕ್ಷದ ಪ್ರಧಾನ ಕಾರ್ಯದರ್ಶಿ ಆರ್. ಎಸ್. ರುಯಿಕರರು ಪರಿಪತ್ರ ಹೊರಡಿಸಿದ್ದಾರೆಂದು ತಿಳಿಯುತ್ತದೆ.

ಹಿಂದುಸ್ತಾನದ ರಿಝರ್ವ ಬ್ಯಾಂಕಿನವರು ನೋಟುಗಳ ಬಣ್ಣಗಳಲ್ಲಿ ಬದಲಾವಣೆ ಮಾಡಿದ್ದಾರೆ. ೧ ರೂ. ನೋಟನ್ನು ಹಸಿರು, ೨ ರೂ. ನೋಟನ್ನು ಕೆಂಪು, ೫ ರೂ. ನೋಟನ್ನು ಕೆಂಪು ಮತ್ತು ೧೦೦ ರೂಪಾಯಿ ನೋಟನ್ನು ಹಸಿರು ಬಣ್ಣಗಳಲ್ಲಿ ಮುದ್ರಿಸಲಾಗುವದು. ಬ್ಯಾಂಕಿನ ಅನುಕೂಲತೆಯ ಈ ದೃಷ್ಟಿಯಿಂದ ಬದಲಾವಣೆಯನ್ನು ಮಾಡಲಾಗಿದೆ.

ಮದರಾಸ ಸರಕಾರದ ಮೀನಗಾರಿಕೆ ಶಾಖೆಯವರು ೧೬ ಫೂಟು ಉದ್ದ ಒಂದು ಸಾವಿರ ಪೌಂಡು ಭಾರ ೭ ಫೂಟು ಸುತ್ತಳತೆಯುಳ್ಳ ಒಂದು ಮೀನು ಹಿಡಿದಿದ್ದಾರೆ. ಈ ಮೀನ ಹಿಡಿಯಲು ಪಾವರ ಬೋಟುಗಳನ್ನು ಉಪಯೋಗಿಸಬೇಕಾಯಿತು. ಈ ಮೀನದ ಹೊಟ್ಟೆಯಲ್ಲಿ ೫೦ ಮರಿಗಳಿದ್ದವು. ೧೬ ಜನರೆತ್ತಿ ಇದನ್ನು ಬಂಡೆಯಲ್ಲಿ ಹಾಕಬೇಕಾಯಿತು. ನಾಲ್ಕಾರು ದಿನಗಳಹಿಂದೆ ೪ ಫೂಟು ಉದ್ದ ೫೦೦ ಪೌಂಡು ಭಾರವಾದ ಮೀನ ಹಿಡಿದಿದ್ದರು.

ಸೇಲಂದಿಂದ ೨೫ ಮೈಲುಗಳ ಮೇಲಿರುವ ಚಮಲೂರ ತಾಲೂಕಿನಲ್ಲಿ ಪೋಲೀಸರು ೧೬ಕ್ಕೆ ಮಾಡಿದ ಗೋಳೀಬಾರಿನಲ್ಲಿ ಓರ್ವನು ಸತ್ತಿದ್ದು ಇಬ್ಬರು ಗಾಯಗೊಂಡಿರುವರೆಂದು ತಿಳಿಯುತ್ತದೆ. ಪೋಲೀಸರು ಮತ್ತು ಕಮ್ಯುನಿಸ್ಟರಲ್ಲಿಯ ಘರ್ಷಣೆಯ ಪರಿಣಾಮವಿದು.

ಪ. ಬಂಗಾಲ

ಬಿರ್ಲಾ ಬಂಧುಗಳು ಮತ್ತು ಹಿಂದುಸ್ತಾನದಲ್ಲಿಯ ಬ್ರಿಟಿಶ್ ಸಂಸ್ಥೆ ಬಾಬ್ಕೋಕಾ ಮತ್ತು ವಿಲಾಕ್ಸ ಕಂಪನಿಯವರಲ್ಲಿ ಹಿಂದುಸ್ತಾನದಲ್ಲಿ ಬಾಯಲರನ್ನು ತಯಾರಿಸುವ ಬಗ್ಗೆ ಒಡಂಬಡಿಕೆಯಾಗಿದೆಯೆಂದು ಪ್ರಕಟಿಸಲಾಗಿದೆ. ಕಲಕತ್ತೆಯ ಅಗರಪಾರಾದಲ್ಲಿ ಈ ಕಾರಖಾನೆಯನ್ನು ಸ್ಥಾಪಿಸಲಾಗುವದು.

ಬ್ರಿಟಿಶ ಆಹಾರ ಮಂತ್ರಿಮಂಡಲದ ಮುಖ್ಯ ತಾಂತ್ರಿಕ ಸಲಹೆಗಾರರಾದ ಡಾ. ಎನ್. ಸಿ. ರೈಟರು ಆಸ್ಟ್ರೇಲಿಯಾದಿಂದ ಕಲಕತ್ತೆಗೆ ಬಂದಿರುವರು. ದೇಶದಲ್ಲಿಯ ಹಾಲಿನ ಪೂರೈಕೆಯ ಪರಿಸ್ಥಿತಿಯನ್ನು ಅಭ್ಯಸಿಸಿ ಉತ್ಪಾದನೆಯನ್ನು ಹೆಚ್ಚಿಸುವದಕ್ಕೆ ಯೋಗ್ಯ ಸಲಹೆ ಸೂಚನೆ ಕೊಡುವದಕ್ಕಾಗಿ ಅವರು ಇಲ್ಲಿಗೆ ಬಂದಿರುವರು. ಈಗಾಗಲೆ ಅವರು ತಮ್ಮ ಕಾರ್ಯವನ್ನು ಪ್ರಾರಂಭಿಸಿರುವರು.

ಬಂಗಾಲದ ಮುಖ್ಯಮಂತ್ರಿಗಳಾದ ಡಾ. ಬಿಧನಚಂದ್ರರಾಯ ಇವರು ಇಷ್ಟರಲ್ಲಿಯೇ ಸ್ವಿಟ್ಝರ್ಲಂಡಿನಿಂದ ಮರುಳುವದಿಲ್ಲೆಂದು ತಿಳಿಯುತ್ತದೆ. ರೋಮದಿಂದ ಅವರು ಆ ಆಶಯದ ಒಂದು ತಂತಿಯನ್ನು ತಾತ್ಪೂರ್ತಿಕ ಮುಖ್ಯಮಂತ್ರಿ ನಲಿನೀರಂಜನ ಸರಕಾರ ಇವರಿಗೆ ಕೊಟ್ಟಿರುವರು. ಪ್ರವಾಸವನ್ನು ಬೇಗ ಮುಗಿಸಿಕೊಂಡು ಮರಳಿ ಬರಬೇಕೆಂದು ಕಾಂಗ್ರೆಸ ಕಾರ್ಯಸಮಿತಿಯು ಅವರಿಗೆ ತಿಳಿಸಿದೆಯೆಂಬ ಸುದ್ದಿಗೆ ಇನ್ನೂ ಪುಷ್ಟಿ ದೊರೆತಿಲ್ಲ.

ಕಲಕತ್ತೆಯಲ್ಲಿ ೧೮ ನೇ ತಾರೀಕು ಬೆಳಿಗ್ಗೆ ಯಾರೋ ಒಬ್ಬರು ಮನೆಯ ಬಾಗಿಲು ತಟ್ಟಲು ಒಳಗಿದ್ದ ಮನೆಯ ಒಡೆಯನು ಬಾಗಿಲು ತೆಗೆಯುವಷ್ಟರಲ್ಲಿ ಅವನ ಎದೆಗೆ ಹೊರಗಿದ್ದವರು ಗುಂಡುಹಾರಿಸಿದ್ದರಿಂದ ಕೂಡಲೆ ಅವನು ಮರಣಹೊಂದಿದನು. ಇದೇ ಸಮಯದಲ್ಲಿ ಒಂದು ಬಾಂಬು ಸ್ಫೋಟವಾದ್ದರಿಂದ ಒಳಗೆ ಮಲಗಿದ್ದ ಆ ಒಡೆಯನ ಮಗನಿಗೆ ಗಾಯಗಳಾದವು. ಇದೆಲ್ಲ ಸಪ್ಪಳವನ್ನು ಕೇಳಿ ನೆರೆಮನೆಯವರು ಬರುವಷ್ಟರಲ್ಲಿ ಕೇಡಿಗಳು ಓಡಿಹೋದರು.

ಲಂಡನ್ನಿನಲ್ಲಿ ಹಣಕಾಸಿನ ಮಾತುಕತೆಗಳಿಗೆ ಹೋಗಿರುವ ಭಾರತದ ಅರ್ಥ ಸಚಿವರಾದ ಡಾ ಜಾನ ಮಥಾಯರು ೨೩ ನೇ ತಾರೀಕಿಗೆ ಭಾರತಕ್ಕೆ ಮರಳುವರೆಂದು ತಿಳಿಯುತ್ತದೆ.

ರೂಪರಂಗ

(೧೨ ನೆಯ ಪುಟದಿಂದ)

ಮಾಡಿ ದಿಗ್ದರ್ಶಕರ ಮೆಚ್ಚಿಗೆಯನ್ನು ಪಡೆದರಂತೆ. “ಸೀತೆ” ಯಲ್ಲಿ ರಾಮನು ಸೀತಾವಿರಹದ ಅಂತ್ಯದಲ್ಲಿ ಅವಳ ವಾರ್ತೆಯನ್ನು ಕೇಳಿ ಅತ್ತನೆಂದಿರುವುದನ್ನು ನಕ್ಕಂತೆ ತಿರುಗಿಸಿದ್ದು ಪೃಥ್ವೀರಾಜರ ಪ್ರತಿಭೆ. ಆ ನಗೆಯಲ್ಲಿ ಪ್ರಕಟಿಸಬಹುದಾದ ದುಃಖ, ಸಂತಾಪ, ವೈರಾಗ್ಯ, ಸಹನೆ ಮುಂತಾದ ಸಂಮಿಶ್ರಭಾವಗಳ ಆಳವನ್ನು ಅಳುವಿನಲ್ಲಿ ತೋರಿಸಲು ಸಾಧ್ಯವಿಲ್ಲವೆಂದು ತಮಗೆನಿಸಿದ್ದಕ್ಕೆ ರವೀಂದ್ರರ ಒಂದು ಪದ್ಯದ ಆಧಾರ ಸಿಕ್ಕಿತ್ತಂತೆ; ಅದರಿಂದ ಅವರು ತಮ್ಮ ಸಹೋದ್ಯೋಗಿಗಳಿಗೆ ಸಮಾಧಾನವಿತ್ತರೆಂದು ಅವರು ಹೇಳಿದರು. ಇಂಥ ಅಭಿನಯಕಲಾಮರ್ಮಜ್ಞತೆಯನ್ನು ಪಡೆದ ಪೃಥ್ವೀರಾಜರಿಗೆ ಮುಂದೆ ಅದರ ಪ್ರಕಟನೆಗೆ ಇನ್ನೂ ಉತ್ತಮವಾದ ಅವಕಾಶಗಳು ದೊರಕುವುದು ಅಪೇಕ್ಷಣೀಯ; ಅದಕ್ಕೆ ಅನುಕೂಲ ವೊದಗಿಸಿಕೊಡುವುದು ದಿಗ್ದರ್ಶಕರ ಕರ್ತವ್ಯ.

—ರಸ ಗಂಗಾಧರ

ಆಹಾರ ಕೊರತೆ ಹೋಗಲಾಡಿಸುವದು

(೭ ನೆಯ ಪುಟದಿಂದ)

ಕೊರತೆಯನ್ನು ಯಾರೂ ಕನಸಿನಲ್ಲಿ ಕೂಡ ನೆನೆಸರು. ದಿನಾಲು ಸೀದಾ ಪದ್ಧತಿಯಿಂದ ಪಡುತಿರುವ ಕಷ್ಟನಿಷ್ಠುರಗಳಿಗಿಂತ ಒಂದು ದಿನ ಉಪವಾಸ ಮಾಡುವದು ಒಳ್ಳೆಯದೆಂದು ಜನರು ಭಾವಿಸಬಹುದು.

ಕಾಫೀ ಚಹಾ ಮೊದಲಾದವುಗಳಿಗಾಗಿ ಬಹಳ ಭೂಮಿಯನ್ನೂ ಬಳಸಲಾಗುತ್ತದೆ. ಶಕ್ಯವಿದ್ದಲ್ಲೆಲ್ಲ ಈ ಭೂಮಿಗಳನ್ನು ಆಹಾರ ಪದಾರ್ಥಗಳನ್ನು ಬೆಳೆವ ಭೂಮಿಗಳನ್ನಾಗಿ ಮಾರ್ಪಡಿಸಬಹುದು.

ಸ್ವಲ್ಪಭೂಮಿಯಿದ್ದ ರೈತರು ಒಂದು ಎಕರೆ ಭೂಮಿಯಲ್ಲಿ ಬೆಳೆಯಬಹುದಾದಷ್ಟು ಆಹಾರ ಪದಾರ್ಥಗಳನ್ನು ಬಹಳ ಭೂಮಿಗಳಿದ್ದ ಜಮೀನದಾರರು ಬೆಳೆಯಲಸಮರ್ಥರಾಗಿರುವರು. ಹೊಲ ಸಾಗುಮಾಡುವ ಅವರ ಪದ್ಧತಿಯು ವಿಪರೀತವಾಗಿದೆ. ಆದುದರಿಂದ ತಾತ್ವಿಕ ಯೋಜನೆಯೆಂದು ಈ ದೊಡ್ಡ ದೊಡ್ಡ ಜಮೀನದಾರಿಗಳನ್ನು ಒಡೆದು ಹೊಲಗಳಿಲ್ಲದ ರೈತರಿಗೆ ಸಾಗು ಮಾಡಲಿಕ್ಕೆ ಕೊಡುವದು ಉಚಿತವಾಗಿದೆ.

ರಾಷ್ಟ್ರೀಯ ಸರಕಾರದ ಸೊತ್ತಾದ ರೇಲ್ವೆಗಳು ಕೂಡ ಕಳ್ಳಪೇಟೆಗೆ ಸಹಾಯಮಾಡುವವು. ಬೆಜವಾಡಾದಿಂದ ಮದ್ರಾಸಕ್ಕೆ ಹೋಗುವ ಬರುವ ಬಹುತೇಕ ಪ್ರತಿಯೊಂದು ಉಗಿಬಂಡೆಯಲ್ಲಿ ಕಳ್ಳಪೇಟೆಯ ಅನ್ನದ ಚೀಲಗಳನ್ನು ಮಾರುವದನ್ನು ಕಾಣಬಹುದು ಅವರೆಂದರೆ ತಿಕೀಟಿಲ್ಲದ ಮತ್ತು ತಮ್ಮ ಆಹಾರ ಪದಾರ್ಥಗಳಿಗೆ ರೇಲ್ವೆಬಾಡಿಗೆ ಕೊಡದಿದ್ದ ಪ್ರವಾಸಿಕರು. ಮದರಾಸ ನಗರದಲ್ಲಿಯೂ ಕಳ್ಳಪೇಟೆಯ ಅನ್ನ ಅನಿರ್ಬಂಧವಾಗಿ ಮಾರಲ್ಪಡುತಿದೆ.

ನನ್ನ ಸೂಚನೆಗಳನ್ನು ಜಾರಿಯಲ್ಲಿ ತರುವದರಿಂದ ಉಳಿಯಬಹುದಾದ ಹಣವನ್ನು ಮತ್ತು ಉಳಿದ ಯಾವದೇ ಮಾರ್ಗದಿಂದ ಉಳಿಯಬಹುದಾದ ಹಣವನ್ನು ಹೆಚ್ಚು ಆಹಾರ ಪದಾರ್ಥಗಳನ್ನು ಬೆಳೆವ ರೈತರಿಗೆ ಬೋನಸ್ಸೆಂದು ಕೊಡುವದರಲ್ಲಿ ಉಪಯೋಗಿಸಬಹುದು.

ಈ ನಿಯಂತ್ರಣಗಳು ಮತ್ತು ಸೀದಾ ಪದ್ಧತಿಗಳು ವ್ಯವಸ್ಥಿತ ಮತ್ತು ನೈತಿಕ ಜೀವನಕ್ಕೇ ಅತ್ಯಂತ ವ್ಯತ್ಯಯವುಂಟಾಗುವಂತಹ ವಾತಾವರಣವನ್ನು ಕಲ್ಪಿಸುತ್ತಿದೆ.

ನನ್ನ ವಿಚಾರಗಳನ್ನು ಮತ್ತು ಅನುಭವಗಳನ್ನು ನಾನು ಬರೆದಿದ್ದೇನೆ. ಅವುಗಳನ್ನು ಪರೀಕ್ಷಿಸಿ ಎಲ್ಲಿ ವರೆಗೆ ಹತ್ತುವವೊ ಅಲ್ಲಿ ಅವನ್ನು ಸ್ವೀಕರಿಸತಕ್ಕದ್ದು.

ವಿನಯಾಶ್ರಮ ಜಿ. ಸೀತಾರಾಮ ಶಾಸ್ತ್ರಿ

(ಹರಿಜನ)

ಪಾಕಿಸ್ತಾನ

ಪಾಕಿಸ್ತಾನವು ಕಾಮನ್‌ವೆಲ್ಥದಿಂದ ಹೊರಬೀಳಲಿದ್ದು ರಶಿಯದಗೂಡ ಸ್ನೇಹಸಂಬಂಧದ ಒಪ್ಪಂದ ಮಾಡಿಕೊಳ್ಳಲಿದೆಯೆಂಬ ಸುದ್ದಿಯಿದ್ದಿದೆ. ಈ ರೀತಿಯಾಗಬೇಕೆಂದು ಪಾಕಿಸ್ತಾನದಲ್ಲಿ ಚಳವಳಿಯು ನಡೆದಿದೆಯೆಂದೂ ಅದರಿಂದ ಕಮ್ಯುನಿಸ್ಟರಿಗೆ ಸಂತೋಷವಾಗಿದೆಯೆಂದೂ ತಿಳಿಯುತ್ತದೆ.

ಪಾಕಿಸ್ತಾನ ಸರಕಾರದ ಸಂಪರ್ಕ ಖಾತೆಯ ಮಂತ್ರಿಗಳಾಗಿದ್ದ ಸರದಾರ ಅಬ್ದುಲ್ ನಿಸ್ತಾರ ಇವರನ್ನು ಸರ್ ಫ್ರಾನ್ಸಿಸ್ ಮುಡಿಯವರ ಸ್ಥಳದಲ್ಲಿ ಪಶ್ಚಿಮ ಪಂಜಾಬದ ಗವರ್ನರರನ್ನಾಗಿ ನೇಮಿಸಲಾಗಿದೆಂದು ಅಧಿಕೃತವಾಗಿ ಪ್ರಕಟಿಸಲಾಗಿದೆ. ಅವರು ಅಗಸ್ಟ ೨ಕ್ಕೆ ಅಧಿಕಾರ ಸ್ವೀಕರಿಸಬಹುದು.

ರಾಷ್ಟ್ರ ಭಾಷೆ

ಒಂದು ಬಿನ್ನಹ

ನಮ್ಮ ರಾಷ್ಟ್ರೀಯ ರಾಜ್ಯಘಟನೆಯನ್ನು ರಚಿಸುವ ಕಾರ್ಯ ಮುಗಿಯುತ್ತ ಬಂದಿದೆ. ನಾವು ಕಟ್ಟಿದ್ದು ಒಂದು ಉದಾತ್ತ, ಉನ್ನತ ಕಟ್ಟಡ. ಅದು ಲೌಕಿಕ ಪ್ರಜಾಸತ್ತೆಯ ಪರವಾಗಿ ನಿಂತಿವೆ. ಅದರಲ್ಲಿ ನಮ್ಮ ರಾಷ್ಟ್ರ ಮತ್ತು ಸಂಸ್ಕೃತಿಗಳ ಎಲ್ಲ ಅಂಗಗಳಿಗೂ ಸಮಾನವಾದ ಮಾನ್ಯಸ್ಥಾನವಿದೆ; ಮತ್ತು ಈ ಯೆಲ್ಲ ಅಂಗಗಳೂ ಸಾಂಗವಾದ ನಮ್ಮ ರಾಷ್ಟ್ರದ ಮತ್ತು ಅದರ ಚಿತ್ರವಿಚಿತ್ರ ಸಂಸ್ಕೃತಿಯ ಅಂತರ್ಭಾಗವಕ್ಕೂ ಅಂತಃಸಾರಕ್ಕೂ ನಿಷ್ಠರಾಗಿರಬೇಕೆಂದು ನಿರೀಕ್ಷಿಸಲಾಗಿದೆ. ಇನ್ನೂ ನಿರ್ಣೀತವಾಗದೆ ಉಳಿದ ಕೆಲ ಮುಖ್ಯ ವಿಷಯಗಳಲ್ಲಿ ಭಾರತದ ರಾಷ್ಟ್ರಭಾಷೆಯ ಹಾಗೂ ಅದರ ಲಿಪಿ ಅಥವಾ ಲಿಪಿಗಳ ಹೆಸರು ಮತ್ತು ರಚನೆಯೊಂದು. ಇದಕ್ಕಿಂತಲೂ ಕಠಿನ ತರವಾದ ಸಮಸ್ಯೆಗಳನ್ನು ಪರಸ್ಪರ ಸದಾಶಯ ಉದಾರತೆಗಳಿಂದ ಅಗಲೇ ಬಿಡಿಸಲಾಗಿದೆ. ಇದನ್ನಾದರೂ ಅದೇ ಭಾವ ಮತ್ತು ದೃಷ್ಟಿಗಳಿಂದ ನಿರ್ಣಯಿಸೋಣ. ಅದರ ಹಲವಾರು ಚರ್ಚಿತಾಂಶಗಳಲ್ಲಿ ನಾವು ಎಷ್ಟೋ ಮಟ್ಟಿನ ಒಮ್ಮತಕ್ಕೆ ಬಂದಿದ್ದೇವೆ ಎಂದು ನಮಗನಿಸುತ್ತದೆ. ಐಕಮತ್ಯ ಮತ್ತು ಸರ್ವಸಾಧಾರಣ ಕಾರಣಗಳನ್ನು ಆಧರಿಸುವ ಅದೇ ಬುದ್ಧಿಯಿಂದ ಈ ಕೆಳಗಿನ ಸೂಚನೆಗಳಿಗೆ ಎಲ್ಲರೂ ಒಪ್ಪಿ ಚರ್ಚೆಯನ್ನು ಮುಗಿಸಬೇಕೆಂದು ಈಗ ನಾವು ಬೇಡಿಕೊಳ್ಳುತ್ತೇವೆ.

(೧) ಒಂದು ಸಾರ್ವಭಾಷೆ

“ಅ. ಭಾ. ವ್ಯವಹಾರಕ್ಕಾಗಿ ಒಂದು ಸಾರ್ವಭಾಷೆಯಿರುವುದು ಅಗತ್ಯ. ಅಂತಹ ಭಾಷೆ ಯಾವುದಿದ್ದರೂ ದೇಶದ ಎಲ್ಲೆಡೆಯ ಜನರು ಅದನ್ನು ಸಾಕಷ್ಟು ಹೆಚ್ಚಾಗಿ ಕಲಿಯುವಂತಿರಬೇಕು. ಅದು ಇಂಗ್ಲೀಷಾಗಲಾರದು.” (ಡಾ. ರಾಜೇಂದ್ರ ಪ್ರಸಾದರು). ಕಾಯಿದೆ ಮುಂತಾದ ಎಲ್ಲವೂ ಆ ಭಾಷೆಯಲ್ಲಿ ರಚಿತವಾಗಬೇಕು ಮತ್ತು ಆ ಭಾಷೆಯಲ್ಲಿರುವ ಪಾಠವನ್ನು ಇತರ ಭಾಷೆಗಳಲ್ಲಿ ಹೇಗೋ ಹಾಗೇ ಸಂದಿಗ್ಧಾಂಕಗಳ ಅರ್ಥವಿವರಣೆಯಲ್ಲಿ ಅಧಿಕೃತ ಆಧಾರವೆಂದು ಎಣಿಸಬೇಕು.

(೨) ಹೆಸರು

ಕೇಂದ್ರದಲ್ಲಿ ರಾಷ್ಟ್ರಭಾಷೆಯ ಹೆಸರು ಹಿಂದುಸ್ತಾನಿಯೆಂದಿರಬೇಕು. ಸಾಹಿತ್ಯರ ಬಳಕೆಯಲ್ಲಿ ಮತ್ತು ಯಾವುದಾದರೂ ಒಂದು ಪ್ರಾಂತದಲ್ಲಿ ಅದನ್ನು ಹಿಂದಿಯೆನ್ನಲಿ ಅಥವಾ ಹಿಂದುಸ್ತಾನಿಯೆಂದು ಕರೆಯಲಿ, ಅದು ಲೆಕ್ಕಕ್ಕಿಲ್ಲ. ಅನಧಿಕೃತವಾಗಿ ಮೇಲಿನ ಎರಡರಲ್ಲಿ ಯಾವ ಹೆಸರನ್ನು ಬಳಸಿದರೂ ಅದಕ್ಕೆ ಯಾರೂ ಅಕ್ಷೇಪವನ್ನು, ವಾದವನ್ನು ಅಥವಾ ಟೀಕೆಯನ್ನು ಮಾಡಬಾರದು.

(೩) ರಚನೆ

(ಅ) ದಿಲ್ಲಿ ಮತ್ತು ಅದರ ಹೊರವಲಯದಲ್ಲಿ ಸಾಮಾನ್ಯವಾಗಿ ಆಡುವ ಭಾಷೆಯ ವ್ಯಾಕರಣ ಮತ್ತು ವಾಕ್ಯರಚನೆಗಳೇ ರಾಷ್ಟ್ರಭಾಷೆಯ ರಚನೆಗೆ ಆಧಾರ, (ಬ) ಸಂಸ್ಕೃತ, ಫಾರಸಿ ಅಥವಾ ಅರಬ್ಬಿಯ ಕಠಿನ ವ್ಯಾಕರಣ ರೂಪಗಳನ್ನೂ ಶೈಲಿಯನ್ನೂ ದೂರ ಇರಿಸಬೇಕು, (ಕ) ಸಾಮಾನ್ಯ ಅಥವಾ ಪಾರಿಭಾಷಿಕ ಪದಗಳಾಗಿ ಬಳಕೆಗೆ ಬಂದಿರುವ ವಿದೇಶೀಯ ಮೂಲವುಳ್ಳ ಶಬ್ದ, ಪದೋಚ್ಚಯ ಮತ್ತು ಭಾವಗಳನ್ನು ಬಹಿಷ್ಕರಿಸಬಾರದು. ಅನ್ಯ ಭಾಷೆಗಳ ಪದಗಳ ಪ್ರವೇಶಕ್ಕೆ ಅದು ತನ್ನ ಬಾಗಿಲನ್ನು ಸದಾ ತೆರೆದಿಡಬೇಕು; (ಡ) ಪಾರಿಭಾಷಿಕ ಕಾರ್ಯಗಳಿಗಾಗಲಿ, ವಿಶಿಷ್ಟ ಪದಗಳ ಸರಿಯಾದ ಅರ್ಥವನ್ನು ಅನುವಾದ ಮಾಡಲಿಕ್ಕಾಗಲಿ, ಹೊಸ ಶಬ್ದಗಳನ್ನು ನಿರ್ಮಿಸುವಲ್ಲಿ ಮೊದಲು ವಿವಿಧ ಪ್ರಾಂತೀಯ ಭಾಷೆಗಳನ್ನೂ ಉಪಭಾಷೆಗಳನ್ನೂ ಆಶ್ರಯಿಸಬೇಕು. ಶುದ್ಧ ವಿದೇಶೀಯ ಮೂಲವುಳ್ಳ ಪದಗಳಿದ್ದರೂ ಅವನ್ನು ಸಂಪೂರ್ಣವಾಗಿ ಹೊರಗಿಡಕೂಡದು.

(ಇ) “ವಿವಿಧ ಭಾಷೆಗಳ ನೆರವಿನಿಂದ ಕೂಡಿಸಬಹುದಾದ ಶಬ್ದಕೋಶವನ್ನು ಕೂಡಿಸಿದ ಮೇಲೆ ಇನ್ನೂ ಅನೇಕ ಶಬ್ದಗಳನ್ನು ನಿರ್ಮಿಸುವ ಅವಶ್ಯಕತೆ ಉಳಿಯುತ್ತದೆ. ಈ ಹೆಚ್ಚಿನ ಶಬ್ದಗಳನ್ನು ನಿರ್ಮಿಸಲು ಸಂಸ್ಕೃತವೇ ಮೂಲವಾಗಬೇಕು. ಇದರಲ್ಲಿ ಅದಷ್ಟು ಮಟ್ಟಿಗೆ ಕಾಠಿಣ್ಯವನ್ನು ಬಿಡಬೇಕು!” ಮತ್ತು “ಆಧುನಿಕ ಮಾತಿನ ರಚನೆಗೂ ಅಂತರ್ಗತ ಪ್ರತಿಭೆಗೂ ಒಪ್ಪುವಂಥ ಮತ್ತು ಸರಳತೆಗಾಗಿ ಎಲ್ಲರೂ ಅವನ್ನು ಮೆಚ್ಚುವಂಥ ಪದಗಳನ್ನು ನಿರ್ಮಿಸಲು ನಾವು ಯತ್ನಿಸಬೇಕು.” (ಡಾ. ರಾಜೇಂದ್ರ ಪ್ರಸಾದ).

ಮಿಶ್ರವಿದ್ದನ್ನು ಭಾಷೆಯ ನೈಸರ್ಗಿಕ ಬೆಳವಣಿಗೆಗೆ ಬಿಟ್ಟುಬಿಡಬೇಕು. ಯಾವನಾದರೊಬ್ಬ ಸಾಹಿತಿ ಅತಿ ಸಂಸ್ಕೃತ, ಅತ್ಯರಬ್ಬಿ ಅತಿ ಪಾರಸಿ ಅಥವಾ ಸರಿ ಬೆರಕೆಯ ರೂಪದಲ್ಲಿ ಬರೆಯುವ ಬಗ್ಗೆ ಯಾವ ಮಿತಿಯನ್ನೂ ಇಡಲು ಸಾಧ್ಯವಾಗದು.

(೪) ಲಿಪಿ

ಈ ಭಾಷೆಗೆ ನಾಗರಿಯನ್ನೇ ಮುಖ್ಯ ಲಿಪಿಯನ್ನಾಗಿ ಅಂಗೀಕರಿಸಬೇಕು ಮತ್ತು ಅದನ್ನೇ ಕೇಂದ್ರದಲ್ಲಿಯ ಎಲ್ಲ ಬಗೆಯ ಸರಕಾರೀ ವ್ಯವಹಾರಕ್ಕೂ ಪ್ರಾಂತ ಪ್ರಾಂತಗಳಲ್ಲಿಯ ಸಂಪರ್ಕಕ್ಕೂ ಬಳಸಬೇಕು. ನೌಕರನಾಗಿಯಾಗಲಿ, ಆಯ್ದ ಅಧಿಕಾರಿಯಾಗಿಯಾಗಲಿ, ಸಾರ್ವಜನಿಕ ಕಚೇರಿಗಳಲ್ಲಿ ಕೆಲಸ ಮಾಡುವ ಎಲ್ಲರಿಗೂ ಅದರ ಜ್ಞಾನವಿದ್ದೇತೀರಬೇಕು. ಆದರೆ ಸಾರ್ವಜನಿಕ ಅರ್ಜಿ, ಅಹವಾಲುಗಳಲ್ಲಿ ಉರ್ದುಲಿಪಿಯ ಬಳಕೆಯನ್ನೂ ಮಾನ್ಯಮಾಡಬೇಕು; ಮತ್ತು ಉರ್ದುಬರಹಗಳನ್ನು ಓದಲು ಮತ್ತು ಅಕ್ಷರಾಂತರಿತಲು ತಕ್ಕವ್ಯವಸ್ಥೆಯಿರಬೇಕು. ಅಧಿಕೃತ ತಿಳುವಳಿಕೆಗಳು, ಘೋಷಣೆಗಳು ಮತ್ತು ದಫ್ತರಗಳು ಎರಡೂ ಲಿಪಿಗಳಲ್ಲಿ ಬರೆದ ರಾಷ್ಟ್ರಭಾಷೆಯಲ್ಲಿರಬೇಕು.

ಮೇಲಿನ ಸೂತ್ರವನ್ನು ಸ್ವೀಕರಿಸಬೇಕೆಂದು ಘಟನಾಸಮಿತಿಗೆ ನಾವು ನಿಷ್ಠೆಯಿಂದ ಅಗ್ರಹಪೂರ್ವಕವಾಗಿ ಬಿನ್ನವಿಸಿಕೊಳ್ಳುತ್ತೇವೆ. ಮತ್ತು ನಮ್ಮ ಈ ಬಿನ್ನಹವನ್ನು ರಾಷ್ಟ್ರವು ಸಂಪೂರ್ಣವಾಗಿ ಬೆಂಬಲಿಸುವುದೆಂದು ನಂಬಿದ್ದೇವೆ.

ಕಾಕಾ ಕಾಲೇಲಕರ,
ವಿನೋಬಾ,
ವರ್ಧಾ ಕಿ. ಘ. ಮಶ್ರುವಾಲಾ
೧೨-೭-೪೯

ಮ. ಮಾ.—

ಮೇಲಿನದನ್ನು ಮುದ್ರಣಾಲಯಕ್ಕೆ ಕಳಿಸಿದ ಬಳಿಕ ಇಂಥದೇ ಒಂದು ಬಿನ್ನಹವನ್ನು ರಾಷ್ಟ್ರೀಯ ಮುಸಲ್ಮಾನರು ಪತ್ರಿಕೆಗಳಲ್ಲಿ ಪ್ರಕಟಿಸಿದ್ದು ಕಂಡುಬಂದಿದೆ. ಎರಡೂ ಪರಸ್ಪರ ಪೂರಕಗಳೂ ಏಕದೃಷ್ಟಿಯವೂ ಆಗಿವೆ. ಅವನ್ನು ಮಾನ್ಯಮಾಡಲಾಗುವುದೆಂದು ಆಶಿಸಲಾಗಿದೆ.

ಒಮ್ಮೊಗದ ಒಲವು

(ಹೈದರಾಬಾದಿನಲ್ಲಿ ತಾ. ೧—೪—೪೯ ರಲ್ಲಿ ಶ್ರೀ ವಿನೋಬಾಭಾವೆಯವರು ಮಾಡಿದ ಪ್ರಾರ್ಥನೋತ್ತರ ಭಾಷಣದ ಸಾರ)

ಪ್ರತಿಯೊಬ್ಬ ತಾಯಿಗೂ ತಾನು ತನ್ನ ಮಗುವನ್ನು ಪ್ರೀತಿಸುತ್ತಿರುವುದು ಗೊತ್ತು. ಆದರೆ ಮಗು ಅವಳಿಗೆ ಆ ಒಲವಿಗೆ ಪ್ರತಿಯಾಗಿ ತಾನು ಒಲಿಯಬೇಕೆಂಬುದಕ್ಕೆ ಮಗುಬದ್ಧವಿಲ್ಲ. ಎಷ್ಟೋ ಸಲ ಆ ಪ್ರೀತಿಗೆ ಪ್ರತಿ ಪ್ರೀತಿ ಸಿಗುವುದಿಲ್ಲ. ಮಗ ಅವಳನ್ನು ಅಲಕ್ಷಿಸುವುದೂ ಉಂಟು, ಕೆಟ್ಟ ರೀತಿಯಿಂದ ನಡೆಸಿಕೊಳ್ಳುವುದೂ ಉಂಟು. ಆದರೂ ಅವಳು ಅವನನ್ನು ಪ್ರೀತಿಸುವುದನ್ನು ಬಿಡುವುದಿಲ್ಲ. ಅದರಿಂದ ಅವಳಿಗೆ ದುಃಖವಾದೀತು, ಸಿಟ್ಟು ಒಮ್ಮೆ ಬಂದೀತು; ಆದರೆ ಅವನ ಮೇಲಿನ ಪ್ರೀತಿಯೇನೂ ಕಡಿಮೆಯಾಗುವುದಿಲ್ಲ. ಸಾಧ್ಯವಿದ್ದ ಎಲ್ಲವನ್ನೂ ಅವನಿಗಾಗಿ ಮಾಡುವುದರಲ್ಲಿ ಅವಳಿಗೆ ಸದಾ ಉತ್ಸಾಹ; ಅವನ ಸುಖದುಃಖಗಳಲ್ಲಿ ಭಾಗಿಯಾಗುವಳು, ಒಂದಲ್ಲ ಒಂದು ದಿನ ಅವನು ಒಳ್ಳೆಯವನಾದಾನೆಂದು ಆಶಿಸುವಳು ಮತ್ತು ಕಡೆಯಲ್ಲಿ ತನ್ನ ಪ್ರೇಮಬಲದಿಂದ ಅವನನ್ನು ತಿದ್ದಲು ಸಮರ್ಥಳಾಗುವಳು. ಹಾಗೆ ತಿದ್ದಲಾಗದಿದ್ದರೂ ಅವನನ್ನು ಪ್ರೀತಿಸದಿರಲು ಅವಳಿಗೆ ಸಾಧ್ಯವಿಲ್ಲ, ತಾಯ್ತನದ ಸ್ವಭಾವವನ್ನು ಬಿಡಲಾಗುವುದಿಲ್ಲ. ಇದು ಒಮ್ಮೊಗದ ಒಲವು. ಅದೇ ಬಗೆಯ ಶ್ರದ್ಧೆ ಈ ಒಮ್ಮೊಗದ ಒಲವಿನಲ್ಲಿ ನಮಗಿದ್ದರೆ ನಮ್ಮನ್ನು ಅನ್ಯರು ಪ್ರೀತಿಸಲಿ, ಪ್ರೀತಿಸದಿರಲಿ ನಾವು ಅವರನ್ನು ಪ್ರೀತಿಸಲು ಶಕ್ತರಾಗುವೆವು. ಗವಿಯೊಳಗೆ ತನ್ನ ಕಿರಣ ಬೀಳುವದೋ ಇಲ್ಲವೋ ಎಂದು ಸೂರ್ಯನು ಚಿಂತಿಸುವುದಿಲ್ಲ. ಆದರೆ ತನಗೆಂದೂ ಕತ್ತಲಡಸದು, ತನ್ನ ಕಿರಣ ಹೋದಲ್ಲೆಲ್ಲ ಕತ್ತಲು ಮಾಯವಾಗುತ್ತದೆ ಎಂಬುದರಲ್ಲಿ ನಂಬುಗೆಯಿಟ್ಟು ತನ್ನ ಕರ್ತವ್ಯವನ್ನು ಪಾಲಿಸುತ್ತಾನೆ. ತನ್ನ ಹಗೆಯ ಕೈಯಲ್ಲಿ ಆಯುಧವಿಲ್ಲದ ಕಾರಣ ತಾನೂ ಯಾವ ಕೈದನ್ನೂ ಹಿಡಿದಿರಬೇಕಾಗಿಲ್ಲ ಎಂದು ಸಶಸ್ತ್ರನು ಭಾವಿಸುವುದಿಲ್ಲ.

ಕಳ್ಳಿ ತಿಪ್ಪಣ್ಣ ಶಾಸ್ತ್ರಿಗಳ ಶೋಚನೀಯ ನಿಧನ



ಪ್ರಸಿದ್ಧ ರಾಷ್ಟ್ರೀಯ ಕೀರ್ತನಕಾರರೆಂದು ಕರ್ನಾಟಕದಲ್ಲೆಲ್ಲ ಹೆಸರುವಾಸಿಯಾಗಿದ್ದ ಶ್ರೀ ಕಳ್ಳೀ ತಿಪ್ಪಣ್ಣ ಶಾಸ್ತ್ರಿಗಳು ಹುಬ್ಬಳ್ಳಿಯ ತಮ್ಮ ಮನೆಯಲ್ಲಿ ಗುರುವಾರ ೨೧ನೇ ತಾರೀಕು ಮಧ್ಯಾಹ್ನ ಎರಡು ಗಂಟೆ ಸುಮಾರಿಗೆ ಒಮ್ಮೆಲೆ ಹೃದಯಕ್ರಿಯೆ ನಿಂತು ಸ್ವರ್ಗವಾಸಿಗಳಾದರೆಂದು ತಿಳಿಸಲು ವಿಷಾದಿಸುತ್ತೇವೆ. ಶುಕ್ರವಾರ ಮುಂಜಾನೆ ಅವರ ಕಳೇಬರವನ್ನು ಮೆರವಣಿಗೆಯಿಂದ ನಗರದಲ್ಲೆಲ್ಲ ತೆಗೆದುಕೊಂಡು ಅಂತ್ಯವಿಧಿಯನ್ನು ಮಾಡಲಾಯಿತು. ಸ್ಮಶಾನದಲ್ಲಿ ಹಲವರು ಭಾಷಣಮಾಡಿ ಮೃತರ ಗುಣಗಾನಮಾಡಿದರು. ತಿಪ್ಪಣ್ಣ ಶಾಸ್ತ್ರಿಗಳು ಮೊದಲಿನಿಂದಲೂ ರಾಷ್ಟ್ರೀಯ ವೃತ್ತಿಯವರು ೧೯೪೦ ರಿಂದ ರಾಷ್ಟ್ರೀಯ ಚಳವಳಿಯಲ್ಲಿ ಸೇರಿ ಹಳ್ಳಿ ಪಟ್ಟಣಗಳಲ್ಲಿ ಸಂಚರಿಸಿ ತಮ್ಮ ಕೀರ್ತನ ಭಾಷಣಗಳಿಂದ ಪ್ರಚಾರ ಕಾರ್ಯವನ್ನು ಮಾಡಿದರು. ಈ ರಾಷ್ಟ್ರಕಾರ್ಯದಲ್ಲಿ ಎರಡು ಸಲ ಸೆರೆಮನೆವಾಸವನ್ನೂ ಅನುಭವಿಸಬೇಕಾಯಿತು. ಕಾಂಗ್ರೆಸ ಪ್ರಚಾರ ಕಾರ್ಯದಲ್ಲಿ ಒಳ್ಳೆ ಸಹಾಯಕರಾಗಿದ್ದ ಶಾಸ್ತ್ರಿಗಳವರ ಮರಣದಿಂದ ಕರ್ನಾಟಕಕ್ಕೆ ತುಂಬಿಬಾರದ್ದೊಂದು ಹಾನಿಯಾಗಿದೆ. ಮರಣಕಾಲಕ್ಕೆ ಇವರಿಗೆ ೫೫ ವರುಷಗಳಾಗಿದ್ದವು. ಪರಮಾತ್ಮನು ಇವರ ಆತ್ಮಕ್ಕೆ ಶಾಂತಿಯನ್ನೀಯಲಿ.

ಅದೇ ಮೇರೆಗೆ ಪ್ರೀತಿಯೆಂಬದೊಂದು ಮಹತ್ತಾದ ಶಕ್ತಿ ಎಂದು ನಂಬಿದ ವ್ಯಕ್ತಿಯು ಅಂತ್ಯಜಯದಲ್ಲಿ ಪ್ರತ್ಯಾಶೆಯಿಟ್ಟು ತನ್ನ ವಿರೋಧಿಯನ್ನು ಪ್ರೀತಿಸುವನು; ಏಕೆಂದರೆ, ಎದುರಾಳಿಗಿಲ್ಲದ ಪಾತ್ರಿಯಾದ ಆಯುಧವನ್ನು ಅವನು ಹಿಡಿದಿರುವನು. ಜಯದ ಆಶೆಯು ವ್ಯಸ್ನೇ ಎಣಿಸಿದರೆ ಅದು ಒಳ್ಳೆಯದಲ್ಲವಾದರೂ ಮಹಾಯುಧವನ್ನು ಹಿಡಿದಿರುವದರಿಂದ ಆ ಆಶೆಯಿಲ್ಲದೆಯೇ ಅವನು ಹಗೆಯನ್ನು ಗೆಲ್ಲುವನು.

ಆದರೆ ಇರುವ ಸಂಗತಿ ಬೇರೆಯೇ ಆಗಿದೆ; ನಮಗೆ ಪ್ರೀತಿಯಲ್ಲೇ ವಿಶ್ವಾಸವಿಲ್ಲ. ಇನ್ನು ನಾವೇನಾದರೂ ಪ್ರೀತಿಸಿದರೆ ಅದು ಅಸಹಾಯತೆಯ ದೆಸೆಯಿಂದ. ನಮ್ಮನ್ನು ಪ್ರೀತಿಸುವವರಿಗೆ ನಾವು ವಶರಾಗುತ್ತೇವೆ, ಬಳಿಕ ನಾವೇ ಸ್ವತಃ ಅವರನ್ನು ಪ್ರೀತಿಸಲಾರಂಭಿಸುತ್ತೇವೆ. ಪ್ರೀತಿಸುವ ಗುಣ ನಮಗೆ ಸಹಜವೆನಿಸಿಲ್ಲ; ನಮಗೆ ಅದರಲ್ಲಿ ಶ್ರದ್ಧೆಯೂ ಇಲ್ಲ. ಶುದ್ಧ ಪ್ರೀತಿಯನ್ನು ಅನುಭವಿಸಿದವರು ಅದರ ಪ್ರಶಂಸೆಯನ್ನು ಹಾಡಿದ್ದಾರೆ ಮತ್ತು ನಮ್ಮ ಪ್ರೀತಿಯನ್ನು ದ್ವೇಷಕ್ಕೆ ಬದಲಾಗಿ ಕೊಟ್ಟು ದ್ವೇಷವನ್ನು ಗೆಲ್ಲುವುದನ್ನು ನಮಗೆ ಬೋಧಿಸಿದ್ದಾರೆ. ಹಗೆತನವನ್ನು ಹಗೆತನದಿಂದ ಗೆಲ್ಲಲು ಬರದು, ಒಲವಿನಿಂದಲೇ ಸಾಧ್ಯ ಎಂದು ಬುದ್ಧದೇವ ಹೇಳಿದ್ದಾನೆ. ಗೆಳೆಯನನ್ನು ಪ್ರೀತಿಸುವುದರಲ್ಲಿ ಅಷ್ಟೇನೂ ಮಹತ್ವವಿಲ್ಲವೆಂದು ಯೇಸುಕ್ರಿಸ್ತ ಹೇಳಿದ್ದಾನೆ. ತನ್ನ ಶತ್ರುವನ್ನೇ ಒಬ್ಬನು ಪ್ರೀತಿಸಬಲ್ಲನಾದರೆ ಅದು ನಿಜವಾಗಿಯೂ ಮಹತ್ವದ್ದು. ಯಾರಾದರೂ ನಿನ್ನನ್ನು ದ್ವೇಷಿಸಿದರೆ ಅವನನ್ನು ಪ್ರೀತಿಸಲು ಯತ್ನಿಸ; ಒಂದು ದಿನ ಅವನು ನಿನ್ನ ಅತಿ ದೊಡ್ಡ ಸ್ನೇಹಿತನಾಗುವನು, ಎಂದು ಕುರಾಣದಲ್ಲಿ ಹೇಳಿದೆ. ಪ್ರೀತಿಗೆ ಆ ಶಕ್ತಿಯಿದೆ.

ನಮಗೆ ಈ ಒಮ್ಮೊಗದ ಪ್ರೀತಿಯನ್ನು ಅಳವಡಿಸಿಕೊಳ್ಳುವ ಶಕ್ತಿ ಬೇಕು. ಅನ್ಯರೊಡನಿರುವ ನಮ್ಮ ಸಂಬಂಧವನ್ನು ಅವರೇನಾದ ಮಾಡುವರು ಅಥವಾ ಇಲ್ಲ ... ಮೇಲಿಂದ ನಿಯಂತ್ರಿಸಬಾರದು. ... ಹಾಡಿನಂತೆ ನಾವು ಕುಣಿದರೆ ವ್ಯಕ್ತಿತ್ವವೆಂಬ ... ನಮಗೆಲ್ಲಿಂದ ಬಂದೀತು? ಆದುದರಿಂದ ... ಅನ್ಯರನ್ನು ಪ್ರೀತಿಸುತ್ತಲೇ ಹೋಗಬೇ... ಮತ್ತು ಅವರಲ್ಲಿ ಪ್ರೀತಿ ನ್ಯೂನವಾಗಿದ್ದು ... ರೆದೆ ದ್ವೇಷದಿಂದ ತುಂಬಿದ್ದರೆ, ಆಗ ... ಮತ್ತಷ್ಟು ಹೆಚ್ಚು ಪ್ರೀತಿಯನ್ನು ತೋ... ಬೇಕು. ಇದನ್ನು ನಾವು ಮಾಡಿದರೆ ... ಒಂದು ದಿನ ಜಯ ಹೊಂದಲೇ ಬೇ... ನಮಗೊಂದು ಪಕ್ಷ ಜಗತ್ತಿನ ದೃಷ್ಟಿಯ... ಜಯ ಲಭಿಸದಿದ್ದರೂ ನಮಗೆ ಕಳೆದುಕೊಳ್ಳ... ಬಾರದಂಥ ಒಂದು ತೃಪ್ತಿಯುಂಟಾಗು...

ವ್ಯಾಪಾರಲೋಕ

ಮುಂಬಯಿ ಶೇರಪೇಟೆ

	ರು.
ಮುಂಬಯಿ ಡಾಯಿಂಗ್	೧೦೬೮-…
ಕೋಹಿನೂರು	೨೪೨-…
ಸ್ವದೇಶಿ	೨೩೧-…
ಗೋಕಾಕ	೨೩೫-…
ಸೆಂಚುರಿ	೨೨೦-೦-೦
ಸಿಂಪ್ಲೆಕ್ಸ	೧೫೦-…
ಟಾಟಾ ಸ್ಟೀಲ ಡೆಫರ್ಡ	೧೨೦೦-…
ಇಂಡಿಯನ್ ಆಯರ್ನ್	೨೧-…
ಅಸೋ. ಸಿಮೆಂಟ್ಸ	೧೪೦-…
ಸೆಂಟ್ರಲ ಬ್ಯಾಂಕ್	೭೮…
ಇಂಪೀರಿಯಲ್ (ಪೂರ್ಣ)	೧೭೮೮…

ಚಿನ್ನ ಬೆಳ್ಳಿ

ತಯಾರಿ ಬೆಳ್ಳಿ	೧೭೪…
ತಯಾರಿ ಚಿನ್ನ	೧೦೪…

ಅರಳಿ

ಜುಲೈ	೬೨೬…
ಸೆಪ್ಟೆಂಬರ	೬೨೦…

ಎಣ್ಣೆಕಾಳು

ಶೇಂಗಾ	೧೯೬-…
ಅಗಸೆ (ತಯಾರಿ)	೨೯.…
,, ಹೊಸ	೨೯-…
ಔಡಲ	೨೯.…
ಅಗಸೆ ಎಣ್ಣೆ	೧೭.…

ಸಾಂಗಲಿ ಪೇಟೆ

	ರು. …
ಅರಿಸಿಣ (ಹೇರು)	೯೫.…
ಮೆಣಸಿನಕಾಯಿ (ಹೇರು)	೧೪೦.…
ಶೇಂಗಾ (ಖಂಡಿ)	೧…
ಬೆಲ್ಲ (ಹೇರು)	೭೮.…

ಶಿವಮೊಗ್ಗ ಅಡಿಕೆ ಪೇಟೆ

	ರು. …
ದೇಶಾವರ ನಂ. ೧ (ಮಣಕ್ಕೆ)	೨೯-…
,, ೨	೨೫-…
ರಾಜಾ ಅಲವು	೨೫-…
ತೂರಸಾಲು	೨೩-…
ಬೆಟ್ಟವಂತಿ	೧೭-…
ಬೆಟ್ಟೆ	೧೫-…

ಹುಬ್ಬಳ್ಳಿ

(ಅ. ಪ್ರೊ. ಮಾರ್ಕೆಟ ಕಮಿಟಿ ಹುಬ್ಬಳ್ಳಿ …)

			ರು. …
ಜಹೊ. ಹತ್ತಿ (ನಗಕ್ಕೆ)		ವ್ಯಾಪಾರ ನಡೆಯಲ್ಲಿ…	
ಅಷ್ಲಂಡ ಹತ್ತಿ	,,		,,
ಜೇಸ್ ಅರಳಿ	,,	೩೦೧-೦-೦	೩೩೭-೦-…
ಡಬಲ್ ರೋಲ್ ಅರಳಿ		೨೯೦-೦-೦	೩೦೫-೦-…
ಕುಸುಬಿ (ಬ. ಮಣಕ್ಕೆ)		೧೫-೦-೦	೧೫-೪-…
ಅಗಸಿ (ಚೀಲಕ್ಕೆ)		೪೨-೦-೦	೪೪-೦-…
ಔಡಲ	,,	೩೪-೦-೦	೩೫-೦-…
ಜ. ಹೆಸರು	,,	೪೪-೦-೦	೪೮-೦-…
ಕರಿ ಎಳ್ಳು	,,		೩೪-೦…
ಬಿಳಿ ಎಳ್ಳು	,,	…	೯೩-೦…
ಕಡಲೆ	,,	೫೩-೦-೦	೫೪-೦…
ಉದ್ದು	,,	—	೪೩-೧೦…
ಜ. ತೊಗರಿ	,,	೨೪-೦-೦	೩೦-೦…
ಹುರಳಿ	,,	೩೪-೦-೦	೩೫-೦…
ಕೆಂ. ಅಲಸಂದಿ	,,	೫೨-೦-೦	೫೩-೦…
ಬಿ. ಅಲಸಂದಿ	,,	—	೫೬-೦…
ಬೆಲ್ಲ (ಹೇರಿಗೆ ೮ ಮಣ)		೫೨-೦-೦	೬೪-೦…
ಶೇಂಗಾ (ಹೇರು)		೫೦-೦-೦	೫೪-೦…
ಶೇಂಗಾ ಕಾಳು		೮೦-೦-೦	೮೪-೦…

Reg. No. B. 3148

LICENCE No 3
Licensed to Post without Prepayment

KARMAVEER 25-7-49

ಕರ್ನಾಟಕದಲ್ಲಿ

ಧಾರವಾಡ

ಗದುಗಿನ ಬೇ ಅಶೀಲದಾರರಾಗಿದ್ದ ಶ್ರೀ ಎಸ್. ಆರ್. ಹಿರೇಮಠ ಇವರು ಮಿರಜೆಯಲ್ಲಿ ಕೈಲಾಸವಾಸಿಗಳಾದರು. ಇವರು ಕಳೆದ ೬-೧೦ ವರುಷಗಳಿಂದ ಬೇಥಅಧೀಕ್ಷಕರಾಗಿದ್ದರು. ಇವರ ನಿಧನದ ನಿಮಿತ್ತ ಅಲ್ಲಲ್ಲಿ ದುಃಖಸೂಚಕ ಠರಾವು ಗೊತ್ತುವಳಿ ಸ್ವೀಕೃತವಾದವು.

ಸರಕಾರೀ ನಿಯಮದಂತೆ ಸ್ಕೇಲು ಮತ್ತು ತುಟ್ಟಿಭತ್ತೆ ದೊರೆಯುವ್ವದರಿಂದ ಇದೇ ೧೯ ಕ್ಕೆ ಹುಬ್ಬಳ್ಳಿಯ ಪ್ರಾಥಮಿಕ ಶಿಕ್ಷಕರು ಉಪವಾಸ ಮಾಡಲಿದ್ದರಷ್ಟೆ. ಅವರ ಮಾನ್ಯ ಶಿಕ್ಷಣ ಮಂತ್ರಿಗಳು ವಿದ್ಯಾಧಿಕಾರಿಗಳು ಮೊದಲಾದವರ ಆದೇಶದ ಪ್ರಕಾರ ಅದನ್ನು ಕೆಲ ದಿನಗಳವರೆಗೆ ಮುಂದಕ್ಕೆ ಹಾಕಿದ್ದಾರೆ. ಈ ಅವಧಿಯಲ್ಲಿ ನಗರ ಸಭೆಯವರು ಈ ಪ್ರಶ್ನೆಯನ್ನು ಸಮಾಧಾನಕರವಾಗಿ ಬಿಡಿಸುವತ್ತ ಗಮನಿಸುವರೆಂದು ಶಿಕ್ಷಕರು ಆಶಿಸುತ್ತಾರೆ.

ಧಾರವಾಡ ನಗರ ಹಿತರಕ್ಷಕ ಸಂಘದ ಪರವಾಗಿ ಆರಿಸಿಬಂದ ಡಾ. ಉಮಾಬಾಯಿ ಕೊಪ್ಪೀಕರ ಇವರು ಬಹುಮತ ಪಕ್ಷದವರಿಂದ ಸ್ಥಾಯೀ ಸಮಿತಿಯ ಸದಸ್ಯರಾಗಿ ಆರಿಸಲ್ಪಟ್ಟಿದ್ದರಷ್ಟೆ. ಇದೀಗ ಅವರು ನಗರ ಸಭೆಯ ಪಕ್ಷ ಪಂಗಡಗಳ ಜಂಜಾಟದಲ್ಲಿ ಬೇಸತ್ತು ತಮ್ಮ ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟಿರುವರೆಂದು ತಿಳಿಯುತ್ತದೆ.

ಹುಬ್ಬಳ್ಳಿಯ ವಿವಿಧ ಚಿತ್ರಮಂದಿರಗಳಲ್ಲಿ ಬ್ಲೇಕಿ ಟಿಕೇಟುಗಳನ್ನು ಸೇದಿದ ಬಗ್ಗೆ ಪೋಲೀಸರು ೩೨ ಜನರ ಮೇಲೆ ಖಟ್ಲೆ ಹಾಕಿದ್ದರು. ಅವರೆಲ್ಲರಿಗೆ ೧ ರೂ. ದಂಡವಾಯಿತು.

ಧಾರವಾಡ ಬೆಳಗಾವಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಇತ್ತೀಚೆ ಸಶಸ್ತ್ರ ದರೋಡೆ ಹಾಗೂ ಪುಂಡಾಟಿಕೆಗಳಿಗೆ ಸಂಬಂಧಿಸಿದ ಸ್ವಲ್ಪ ಕಾರ್ಯದ ತಂಡವನ್ನು ಧಾರವಾಡ ಜಿಲ್ಲಾ ಪೋಲೀಸರು ಶೋಧಿಸಿದ್ದಾರೆ ಇವರಲ್ಲಿ ಅನೇಕರನ್ನು ಈಗಾಗಲೆ ಬಂಧಿಸಿದ್ದು ಹೆಚ್ಚಿನ ತಪಾಸಣೆಯನ್ನು ಬೆಳಗಾವಿ ಸಿ. ಆಯ್. ಡಿ ಅಧಿಕಾರಿಗಳ ಸಹಾಯದಿಂದ ನಡೆಸಲಾಗಿದೆ.

ಹುಬ್ಬಳ್ಳಿ ಧಾರವಾಡಗಳಲ್ಲಿ ಶ್ರೀಮಧ್ವಜಯ ತೀರ್ಥರ ಪುಣ್ಯದಿನಾಚರಣೆಯು ನಡೆಯಿತು. ಮಾಧ್ವ ಸಂಘದ ಪರವಾಗಿ ಹುಬ್ಬಳ್ಳಿಯಲ್ಲಿ ಶ್ರೀ ರಾಯರ ಮಠದಲ್ಲಿ ಸೇರಿದ್ದ ಸಭೆಯಲ್ಲಿ ಶ್ರೀ ವಾಯು ಶ್ರೀನಿವಾಸಾಚಾರ್ಯರು ಮತ್ತು ಕೊರ್ಲಹಳ್ಳಿ ಸತ್ಯಬೋಧಾಚಾರ್ಯರು ಭಾಷಣ ಮಾಡಿದರು.

ಮುಂಬೈ ಪ್ರಾಂತದ ಯಾತ್ರಿಕರ ಸಂಘದ ಅಧ್ಯಕ್ಷರಾದ ಶ್ರೀ ನವಲಿ ಗೋಪಾಳರಾಯರು ೧೬ ನೇ ತಾರೀಕು ಧಾರವಾಡದಲ್ಲಿ ವಿಠೋಬ ದೇವರ ಗುಡಿಯಲ್ಲಿ ಶ್ರೀ ಕಮಲಾಪುರ ಹನುಮಂತರಾಯರ ಅಧ್ಯಕ್ಷತೆ ಎಲ್ಲಿ ಸೇರಿದ್ದ ಸಭೆಯಲ್ಲಿ ಸಂಘದ ಧ್ಯೇಯ ಧೋರಣಗಳನ್ನು ಕೈಕೊಂಡ ಕಾರ್ಯಮಂಡಳವನ್ನು ವಿವರಿಸಿದರು. ಶ್ರೀ ಕಮಲಾಪುರ ಹನುಮಂತರಾಯರ ಅಧ್ಯಕ್ಷತೆಯಲ್ಲಿ ಸ್ಥಳೀಯ ಶಾಖೆ ಸ್ಥಾಪಿತವಾಯಿತು. ಇದಕ್ಕೆ ಶ್ರೀ ಆರ್. ಎಸ್. ಕುಲಕರ್ಣಿಯವರು ಕಾರ್ಯದರ್ಶಿಗಳು. ಒಂದು ರೂಪಾಯಿ ಕೊಟ್ಟವರು ಸದಸ್ಯರು. ಇಚ್ಛಿಸುವವರು ಹೆಸರನ್ನು ನೋಂದಿಸಿಕೊಳ್ಳಬಹುದು.

ಕಳೆದ ಸೋಮವಾರ ನವಲೂರಿನ ಹತ್ತಿರ ಹಳ್ಳದಲ್ಲಿ ಒಂದು ಮನುಷ್ಯನ ಶವ ದೊರೆತಿದೆ. ಅದು ಯಾರೆಂದು ಗುರುತು ಹಿಡಿಯುವವರು ಪತ್ತೆಯಿಲ್ಲದಾಗಿದೆ. ೩೫ ರಿಂದ ೪೫ ವರುಷ ವಯಸ್ಸಿನ ಗಂಡಸಿನ ಶವ ಇದೆಂದು ಡಾಕ್ಟರರ ಅಭಿಪ್ರಾಯ. ಕಳೆದ ೧೪ ತಿಂಗಳಿಂದ ಸಂಗಪ್ಪ ಬಳ್ಳಾರಿ ಎಂಬವರು ಕಾಣೆಯಾಗಿದ್ದು ಅವರದೇ ಈ ಹೆಣ ಇರಬಹುದೆಂದು ಪೋಲೀಸರ ಅನುಮಾನ.

ಧಾರವಾಡ ಗಂಡು ಮಕ್ಕಳ ಟ್ರೇನಿಂಗ ಕಾಲೇಜಿನ ಪ್ರಿನ್ಸಿಪಾಲರಾಗಿದ್ದ ಶ್ರೀ ಲಕ್ಕುಂಡಿಯವರು ನಿವೃತ್ತರಾದ್ದರಿಂದ ಶ್ರೀ ಆರ್. ವಿ. ದೇಸಾಯರು ಪ್ರಿನ್ಸಿಪಾಲರಾಗಿ ನೇಮಕ ಹೊಂದಿದ್ದಾರೆ. ಇವರು ಧಾರವಾಡದ ಮೂಲ ಶಿಕ್ಷಣದ ಟ್ರೇನಿಂಗ ಕಾಲೇಜಿನ ಪ್ರಿನ್ಸಿಪಾಲರಾಗಿದ್ದರು.

ಬೆಳಗಾವಿ

ಬೆಳಗಾವಿ ಜಿಲ್ಲಾ ಕಾಂಗ್ರೆಸ ಕಾರ್ಯಕಾರಿ ಸಮಿತಿಯ ಸಭೆ ಸೇರಿ ಕಾಂಗ್ರೆಸ ಪ್ರಚಾರಕ್ಕಾಗಿ ನಿಧಿಯನ್ನು ಕೂಡಿಸಬೇಕೆಂಬ ಗೊತ್ತುವಳಿ ಸ್ವೀಕೃತವಾಯಿತು. ಕಾಂಗ್ರೆಸ ನಿಧಿಯನ್ನು ಕೂಡಿಸುವಲ್ಲಿ ಅಧ್ಯಕ್ಷರು ಶ್ರೀ ಶಂಕರರಾವ ಕಾಮತ, ಅಣ್ಣಪ್ಪ ಪಾಟೀಲ ಮತ್ತು ಬಸವಣ್ಣೆಪ್ಪ ಅಂಗಡಿ ಇವರ ಸಹಾಯ ತೆಗೆದುಕೊಳ್ಳಬೇಕೆಂದು ಸೂಚಿಸಲಾಯಿತು.

ಮಿರಜ ತಾಲೂಕ ಕಾಂಗ್ರೆಸ ಸಮಿತಿಯ ಸಭೆ ಸೇರಿ ಲೀನಹೊಂದಿದ ಸಂಸ್ಥಾನ ಪ್ರದೇಶಗಳಲ್ಲಿಯ ಪಕ್ಷವನ್ನು ಮುಂಬಯಿ ಪ್ರಾಂತ ದಕ್ಷಿಣ ಪಕ್ಷ ಪ್ರವಾಹಕ್ಕೆ ಇಳಿಸಬೇಕೆಂದು ಕೇಳಿಕೊಳ್ಳುವ ಗೊತ್ತುವಳಿ ಸ್ವೀಕೃತವಾಯಿತು. ಲೀನ ಸಂಸ್ಥಾನಗಳಲ್ಲಿಯ ಸರಕಾರೀ ನವಕರರನ್ನೆಲ್ಲ ಲೀನಮಾಡಿಕೊಳ್ಳಬೇಕೆಂದು ಬಿನ್ನವಿಸಲಾಯಿತು.

ಮಿರಜ ನಗರ ಸಭೆಯ ಸಭೆ ಸೇರಿ ಕನ್ನಡ ಶಾಲೆಯೊಂದನ್ನು ತೆರೆಯಬೇಕೆಂದು ಠರಾಯಿಸಲಾಯಿತು.

೧೩ ನೇ ತಾರೀಕಿನ ದಿನಸ ೧೩೦೦ ರೂಪಾಯಿಗಳ ಬೆಲೆಯ ವೈದಾ, ಅಕ್ಕಿ, ಬ್ರ್ಯಾಂಡೀ ಮೊದಲಾದ ಸಾಮಾನುಗಳನ್ನು ಗೋವೆಯಿಂದ ತಂದುದಕ್ಕಾಗಿ ಬೆಳಗಾವಿ ರೇಲ್ವೆ ಸ್ಟೇಶನ ಹತ್ತರ ೧೩ ಜನರನ್ನು ಮಾಲು ಸಹಿತ ಪೋಲೀಸರು ಸೆರೆಹಿಡಿದರು.

ಬೆಳಗಾವಿಯಲ್ಲಿ ತಲೆಯ ಮೇಲೆ ಅಕ್ಕಿಯ ಬುಟ್ಟಿಗಳನ್ನು ತೆಗೆದುಕೊಂಡು ಬರುತ್ತಿದ್ದ ೬ ಜನ ಸ್ತ್ರೀಯರನ್ನು ಸೆರೆಹಿಡಿದು ಖಟ್ಲೆಗೆ ಗುರಿಮಾಡಲಾಗಿ ಅವರೆಲ್ಲರಿಗೆ ೧ ದಿನ ಶಿಕ್ಷೆ ೧೦೦ ರೂಪಾಯಿ ದಂಡ ವಿಧಿಸಲಾಯಿತು.

ಬಿಂದೆಯ ಸ್ವತಂತ್ರ ಜಿಲ್ಲಾ ರಚನೆಯ ಸಂಬಂಧದ ಘೋಷಣೆಯು ಜುಲೈ ೨೭ ಕ್ಕೆ ಆಗುವದೆಂದು ಕೇಳಲಾಗುತ್ತದೆ.

ಗೋಕಾಕ ನಗರ ಸಭೆಯ ಮುಂಗಡ ಪತ್ರಿಕೆಯು ಸಭೆಯು ಅನೇಕ ಸಲ ಸೇರಿ ಕೊನೆಗೆ ೧೬ ಕ್ಕೆ ಕೂಡಿದ ಸಭೆಯಲ್ಲಿ ೬೦ ಸಾವಿರ ರೂಪಾಯಿ ಕೊರತೆಯ ಮುಂಗಡ ಪತ್ರವನ್ನು ಸ್ವೀಕರಿಸಿ ಮಂಜೂರಾಯಿತು. ಕೊರತೆ ತುಂಬುದಕ್ಕಾಗಿ ನಗರ ಸುಧಾರಣೆಯ ಅನೇಕ ಯೋಜನೆಗಳು ಮುಂದೂಡಲ್ಪಟ್ಟವು.

ಬಳ್ಳಾರಿ

ಹಣದ ಅಡಚಣೆಯ ಮೂಲಕ ಬಿ. ಸಿ. ಸಿ. ಸ್ಪೋರ್ಟ್ಸನವರು ಧಾನ್ಯದ ಎತ್ತುವಳಿಯ ಕಾರ್ಯವನ್ನು ಬಳ್ಳಾರಿ ಜಿಲ್ಹೆಯಲ್ಲಿ ನಿಲ್ಲಿಸಿದ್ದರಷ್ಟೆ. ಈ ಸಂಬಂಧದಲ್ಲಿ ಕಲೆಕ್ಟರರು ಸ್ಪಷ್ಟೀಕರಣ ಮಾಡಿ ಸ್ಪೋರ್ಟ್ಸನವರು ಪುನಃ ಭರದಿಂದ ಧಾನ್ಯ ವಸೂಲಿಯ ಕೆಲಸವನ್ನು ಮಾಡುವದರಿಂದ ಎಲ್ಲರೂ ಅವರಿಗೆ ಸಹಾಯ ಸಲ್ಲಿಸಬೇಕೆಂದು ಮುಂತಾಗಿ ಕೇಳಿಕೊಂಡಿದ್ದಾರೆ.

ಬಳ್ಳಾರಿ ಜಿಲ್ಲಾ ಕಾಂಗ್ರೆಸ ಸಮಿತಿಯವರು ಬರುವ ಬಳ್ಳಾರಿ ಜಿಲ್ಲಾ ಬೋರ್ಡ ಚುನಾವಣೆಗಳನ್ನು ಹೋರಾಡಬಾರದೆಂದು ನಿರ್ಧರಿಸಿದ್ದಾರೆ. ಇದರಿಂದ ಜಿಲ್ಹೆಯ ಸರ್ವತೋಮುಖ ಅಭಿವೃದ್ಧಿಗಾಗಿ ಬೇರೊಂದು ಸಂಘವನ್ನು ಸ್ಥಾಪಿಸುವ ಅವಶ್ಯಕತೆಯೆನಿಸಿದ್ದರಿಂದ ಬಳ್ಳಾರಿ ಜಿಲ್ಲಾ ರೈತ ಸಂಘವೊಂದು ಸ್ಥಾಪಿತವಾಗಿದೆ. ಈ ಸಂಘದ ಪರವಾಗಿ ಜಿಲ್ಲಾ ಬೋರ್ಡ ಚುನಾವಣೆಗಳನ್ನು ಹೋರಾಡಬೇಕೆಂದು ನಿರ್ಧಾರವಾಗಿ ಘೋಷಣ ಪತ್ರವನ್ನು ಸಿದ್ಧಪಡಿಸಲಿಕ್ಕೆ ಸಮಿತಿಯೊಂದು ಸ್ಥಾಪಿತವಾಯಿತು.

ಉತ್ತರ ಕನ್ನಡ

ಉತ್ತರ ಕನ್ನಡ ಜಿಲ್ಹೆಯ ಅಭಿವೃದ್ಧಿಯ ದೃಷ್ಟಿಯಿಂದ ಅಳಣಾವರದಿಂದ ಧಾರವಾಡಕ್ಕೆ ದಾಂಡೇಲಿಯ ಮಾರ್ಗವಾಗಿ ರೇಲ್ವೆ ಮಾರ್ಗವನ್ನು ಜೋಡಿಸಲು ಸರಕಾರವನ್ನು ಕೇಳಿಕೊಳ್ಳುವ ಗೊತ್ತುವಳಿ ಕಾರವಾರ ನಗರ ಸಭೆಯಲ್ಲಿ ೧೭ ಕ್ಕೆ ಸ್ವೀಕೃತವಾಯಿತು. ಇದರಿಂದ ಕಾಳೀನದಿ ಕಂದರ ಪ್ರದೇಶದ ಏಳಿಗೆಯಾಗುವದೆಂದು ಅಭಿಪ್ರಾಯಪಡಲಾಗಿದೆ.

ಹೊಸ ಕಾನೂನಿನನ್ವಯ ಜೂನ ೧೬ ರಿಂದ ಶರೆ ಕುಡಿಯುವದು ಅಪರಾಧವಾಗುತಿದೆ. ಆದರೆ ಕಾರವಾರದಲ್ಲಿ ಒಬ್ಬರಿಗೆ ಈ ಮೊದಲೆ ೧೯೫೦ ರ ವರೆಗೆ ಶರೆ ಮಾರುವ ಲಾಯಸೆನ್ಸು ಕೊಟ್ಟಿದೆ. ಇದರಿಂದ ಶರೆ ಕುಡಿದವರನ್ನು ಹಿಡಿಯುವದಕ್ಕೆ ತೊಂದರೆಯಾಗಿದೆ— ಹೊಸ ಕಾನೂನಿನಂತೆ ಈ ಲಾಯಸೆನ್ಸು ರದ್ದಾಗುವದೋ ಹೇಗೆ ಎಂಬ ಬಗ್ಗೆ ಸರಕಾರಕ್ಕೆ ಸ್ಪಷ್ಟೀಕರಣ ಕೇಳಲಾಗಿದೆಯೆಂದು ತಿಳಿಯುತ್ತದೆ.

ವಿಜಾಪುರ

ಸುಪ್ರಸಿದ್ಧ ಕಲಾನಿಪುಣರಾಗಿದ್ದ ಶ್ರೀ ಹಣಮಂತರಾವ ಶಂಕರರಾವ ಮನಗೂಳಿ ಕುಲಕರ್ಣಿ ಇವರು ೯ ನೇ ತಾರೀಕು ಕೊಲ್ಹಾಪುರದಲ್ಲಿ ನಿಧನ ಹೊಂದಿದರು. ಇವರು ಮನಗೂಳಿಯವರಿದ್ದು ಕಳೆದ ೧೮ ವರುಷಗಳಿಂದ ಕೊಲ್ಹಾಪುರದ ಹಳೆ ಗಿರಣಿಯಲ್ಲಿ ಕಾರಕೂನರಾಗಿದ್ದರು. ಕೊಲ್ಹಾಪುರದಲ್ಲಿ ಕನ್ನಡ ಪ್ರಚಾರ ಕಾರ್ಯದಲ್ಲಿ ಇವರು ಯಾವಾಗಲೂ ಮುಂದಾಳುಗಳಾಗುತ್ತಿದ್ದರು.

ವಿಜಾಪುರ ಜಿಲ್ಹೆಯ ಕೆಲೂರ ಭಾಗದಲ್ಲಿ ಮಿಡಚಿಯ ಉಪದ್ರವ ಪ್ರಾರಂಭವಾಗಿದೆ. ಅಧಿಕಾರಿಗಳು ಅವುಗಳನ್ನು ಕೊಲ್ಲುವ ಪ್ರಾತ್ಯಕ್ಷಿಕೆಯನ್ನು ಮಾಡಿ ತೋರಿಸುತಿರುವರು.

ಅ. ಭಾ. ಕೈಮಗ್ಗಗಳ ಸ್ಥಾಯೀಸಮಿತಿಯ ಸದಸ್ಯರೂ ಮುಂಬಯಿ ಪ್ರಾಂತೀಯ ನೂಲಿನ ವಿತರಣ ಸಮಿತಿಯ ಸಭಾಸದರೂ ಆಗಿರುವ ಶ್ರೀ ಪಂಡಿತಪ್ಪಾ ಚಿಕ್ಕೋಡಿಯವರು ೧೦ ನೇ ತಾರೀಕು ಕಮತಗಿಗೆ ಬಂದು ನೇಕಾರರ ಅಡ್ಡಿಅಡಚಣೆ ಸಂಬಂಧದಲ್ಲಿ ಚರ್ಚೆ ಮಾಡಿ ಸಹಕಾರೀತತ್ವದ ಮೇಲೆ ನೂಲಿನ ಗಿರಣಿಯೊಂದನ್ನು ತೆರೆಯುವ ಬಗ್ಗೆ ತಿಳಿಸಿದರು.

ಹೈದರಾಬಾದ

ರೇಲ್ವೆ ಪೋಲೀಸರು ವಾಡೀ ಬಂದರದಿಂದ ಅಳಮಪೇಟೆಕ್ಕೆ ಕಳಿಸಲ್ಪಟ್ಟ ೨೬ ಸಾವಿರ ರೂಪಾಯಿ ಬೆಲೆಯ ೧೩ ಜವಳಿ ನೂಲಿನ ಗಂಟುಗಳನ್ನು ಸಿಕಂದರಾಬಾದ ರೇಲ್ವೆ ನಿಲ್ದಾಣದಲ್ಲಿ ಹಿಡಿದು ಸಿಕಂದರಾಬಾದಿನಲ್ಲಿಯ ಒರ್ವ ವ್ಯಾಪಾರಸ್ಥರನ್ನು ಬಂಧಿಸಿರುವರೆಂದು ತಿಳಿಯುತ್ತದೆ.

ಮುಂದಿನ ತಿಂಗಳು ಹದಿನೈದನೆಯ ತಾರೀಕಿನೊಳಗಾಗಿ ಹೈದರಾಬಾದ ಸರಕಾರವು ವಿಸ್ತಾರ ಹೊಂದುವದೆಂದೂ ಅದರಲ್ಲಿ ಕಾಂಗ್ರೆಸ್ ಪ್ರತಿನಿಧಿಗಳನ್ನು ತೆಗೆದುಕೊಳ್ಳಲಾಗುವದೆಂದೂ ತಿಳಿಯುತ್ತದೆ.

ಹೈದರಾಬಾದದಲ್ಲಿ ಕಮ್ಯುನಿಸ್ಟ ಮಂತ್ರಿಮಂಡಳವನ್ನು ಸ್ಥಾಪಿಸಬೇಕೆಂಬಾಶಯದ ಹಸ್ತಪತ್ರಿಕೆಗಳು ಶೋಧಿಸಲ್ಪಟ್ಟಿವೆ ಈ ಬಗ್ಗೆ ಪ್ರಜಾತಂತ್ರ ತರುಣ ಲೀಗಿನ ಪ್ರಧಾನ ಕಾರ್ಯದರ್ಶಿ ಅಜಮತಉಲ್ಲಾ ಕೈಸರರನ್ನು ಬಂಧಿಸಲಾಗಿದೆ.

ಈ ಕಮ್ಯುನಿಸ್ಟ ಮಂತ್ರಿಮಂಡಳದಲ್ಲಿ ಮಗದುಮ್ಮ ಮೋಹಿಮುದ್ದೀನರು (ಮುಖ್ಯ ಮಂತ್ರಿ) ಅಜಮತಉಲ್ಲಾ ಕೈಸರ (ಉಪ ಮುಖ್ಯಮಂತ್ರಿ) ಶ್ರೀಮತಿ ಗುಪ್ತ (ಆರ್ಥಿಕ ಮಂತ್ರಿ) ಮುಹಮದ ರಜವಿ (ನ್ಯಾಯಮಂತ್ರಿ) ಆರ್. ನಾರಾಯಣ ರೆಡ್ಡಿ (ವಿದೇಶಮಂತ್ರಿ) ರಾಜಯ್ಯ (ಗೃಹಮಂತ್ರಿ) ಮಹಮ್ಮದ ಕಾಸೀಮ ಅಲ್ಲಿ (ಕೂಲಿಕಾರ) ಹಾರಬಹಾದ್ದೂರಗೌಡ (ಶಿಕ್ಷಣ) ಅಮೀನ ಸಯ್ಯದ ರಜ್ವಿ (ಸಂಪರ್ಕಮಂತ್ರಿ) ಹೀಗೆ ಇರಬೇಕೆಂದು ಬರೆಯಲಾಗಿದೆ.

ದಕ್ಷಿಣ ಕನ್ನಡ

ರಾಜಕೀಯ ಸ್ವಾತಂತ್ರ್ಯಕ್ಕೆ ಪ್ರಾಧಾನ್ಯ ಕೊಡುವ ದಕ್ಷಿಣ ಕನ್ನಡ ಜಿಲ್ಲಾ ಸಮಿತಿಯ ಸಭೆಯು ಮಂಗಳೂರಲ್ಲಿ ದಿನಾಂಕ ೧೨ ರಂದು ಜಿಲ್ಲಾ ಕಲೆಕ್ಟರರ ಕಚೇರಿಯಲ್ಲಿ, ಅವರ ಅಧ್ಯಕ್ಷತೆಯಲ್ಲಿ ಜರಗಿದಾಗ ಹಲವರಿಗೆ ಭೂಮಿಯನ್ನು ಕೊಡಲಾಯ್ತು. ಈ ಸಮಿತಿಯು ಮುಂದಿನ ಆಗೋಸ್ತು ತಿಂಗಳ ೧ ಕ್ಕೆ ಮತ್ತೆ ಸೇರಲಿದೆ.

ಮಂಗಳೂರು ಪೌರಸಭೆಯ ಸಾಮಾನ್ಯ ಸಭೆಯು ಕಳೆದ ವಾರ ಜರಗಿದಾಗ ಮುನ್ಸಿಪಾಲಿಟಿಯ ಆರೋಗ್ಯ ಖಾತೆಯವರ ಕೆಲಸವು ತೃಪ್ತಿಕರವಾಗಿಲ್ಲವೆಂಬ ಠರಾವೊಂದನ್ನು ಶ್ರೀ ಬಿ. ಎಸ್. ಭಾಸ್ಕರ ರೈಗಳು ಮಂಡಿಸಿದರು. ಆ ವಿಚಾರದಲ್ಲಿ ಹಲವು ಪ್ರತಿನಿಧಿಗಳು ಮಾತನಾಡಿದರಾದರೂ ಕೊನೆಯಲ್ಲಿ ಶ್ರೀಯುತ ರೈಗಳು ತಮ್ಮ ಠರಾವನ್ನು ಹಿಂದಕ್ಕೆ ತೆಗೆದುಕೊಂಡರು.

ಮದ್ರಾಸಿನ ಶಾಸನ ಸಭೆಯಲ್ಲಿ ಮಂಡಿಸಲ್ಪಟ್ಟು ಈಗ ತಜ್ಞ ಸಮಿತಿಗೊಪ್ಪಿಸಲ್ಪಟ್ಟ ಪಂಚಾಯತ ಮಸೂದೆಯನ್ನು ಪರ್ಯಾಲೋಚಿಸುವದಕ್ಕಾಗಿ ಮದ್ರಾಸು ಪ್ರಾಂತದ ಪಶ್ಚಿಮ ಕರಾವಳಿಯ ಮತ್ತು ನೀಲಗಿರಿ ಜಿಲ್ಲೆಗಳ ಪಂಚಾಯತ ಸಮ್ಮೇಳನವೊಂದು ದಿನಾಂಕ ೩೧ ರಲ್ಲಿ ಮಂಗಳೂರಲ್ಲಿ ಶ್ರೀ. ಎಚ್. ಎಸ್. ಹುಸೇನ್ ಸಾಹೇಬ್ ಎಂ. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗುವುದು.

ಈ ಸಮ್ಮೇಳನದ ಉದ್ಘಾಟನೆ ಮಾಡಲು ಮದ್ರಾಸಿನ ಸ್ಥಾನಿಕ ಸರಕಾರ ಮಂತ್ರಿ ಶ್ರೀ ಕೆ. ಚಂದ್ರಮೌಳಿಯವರು ಆಹ್ವಾನಿತರಾಗಿದ್ದಾರೆ. ಸ್ವಾಗತಾಧ್ಯಕ್ಷ ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರ ನೇತೃತ್ವದಲ್ಲಿ ಸಮ್ಮೇಳನದ ಸಿದ್ಧತೆಯಾಗುತ್ತಿದೆ.

ಲಲಿತಾಬಾಯಿ ಸುಬ್ಬರಾವ್ ಇವರ ಸ್ಮಾರಕ ಸಭೆಯು ದಿನಾಂಕ ೯ ರಂದು ಶ್ರೀ ಎಂ. ಕೇಶವ ಪೈಗಳ ಅಧ್ಯಕ್ಷತೆಯಲ್ಲಿ, ಮಂಗಳೂರಿನ ಬ್ರಹ್ಮ ಸಮಾಜ ಮಂದಿರದಲ್ಲಿ ಜರಗಿತು. ಹಲವರು ದಿವಂಗತರು ಮಾಡಿದ ಸಮಾಜ ಸೇವೆಯನ್ನು ಕೊಂಡಾಡಿ ಆ ಮಾರ್ಗದಲ್ಲೇ ಮಂಗಳೂರಿನವರು ಮುಖ್ಯವಾಗಿ ವಿದ್ಯಾವಂತ ಮಹಿಳೆಯರು ಮುನ್ನಡೆಯಬೇಕೆಂದರು.

ಭಗವಾನ್ ಬುದ್ಧದೇವನು ಗೃಹತ್ಯಾಗ ಮಾಡಿದ ಆಷಾಢ ಪೂರ್ಣಿಮಾ ದಿನಾಚರಣೆಯು ದಿನಾಂಕ ೧೧ ರಂದು ಮಂಗಳೂರಿನ ಬೆಸೆಂಟ್ ಬಾಲಿಕಾ ಪಾಠ ಶಾಲೆಯಲ್ಲಿ ಶ್ರೀಮತಿ ಕೆ. ರಾಧಾ ಎಲ್. ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಯುತರಾದ ಪಿ. ಕೆ. ನಾರಾಯಣ, ಕೆ. ಲೋಕಯ್ಯ ಶೆಟ್ಟಿ, ಎಚ್. ಶ್ರೀನಿವಾಸ ಉಡುಪ ಇವರು ಬುದ್ಧನ ಜೀವನ ಮತ್ತು ಸಂದೇಶಗಳ ಕುರಿತು ಭಾಷಣವಿತ್ತರು.

ಈ ಪತ್ರಿಕೆಯನ್ನು ಹುಬ್ಬಳ್ಳಿ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ ಲೋಕಶಿಕ್ಷಣ ಟ್ರಸ್ಟಿನ ಪರವಾಗಿ ಹ. ರಾ. ಪುರೋಹಿತರೆಯವರು ಮುದ್ರಿಸಿ ಪ್ರಕಟಿಸಿದರು.